how can we express our sympathies to them? Let the people not say that this House has got sympathy and faith in this Government which is not prepared to look into the legitimate grievances of the public.

MR. SPEAKER.—Now Sri Srikantiah to continue his speech.

Mysore Land Reforms (Amendment) Bill 1970 motion to consider

(Debate Continued)

†SRI L. SRIKANTAIAH.—On Friday, Sir, I was just trying to draw the attention of the Hon. Minister for Revenue how the best intentions on the part of the Government are being defeated by transferring the so-called executive function to the Tahsildar. At the same time, I pointed out with reference to Section 116 and the new clause 16 which seeks its amendment, that the intention does not seem to be clear. Now my argument gets reinforced as I draw the attention of the Hon. Minister to the old Section 42. In the first place, I am unable to understand the purport of this amendment which says: "In section 42 of the principal Act, before sub-section (2), the following sub-section shall be inserted, namely:....." If I look to the old Act and open Section 12, I find that sub clause (1) is already there. I have with me edition of 1965 and I do not think in between 1965 and 1970, this sub-section (1) had been deleted on a former occasion. In the 1965 edition, the very exact paragraph we find repeated in section 42 (1).

4-00 P. M.

SRI M. NAGAPPA.—On a point of order. Amendment to section 42 has been suggested in the Bill. For the section 42(1) I have sent an amendment stating that it might be omitted because it is redundant. I do not know why the Chair has disallowed that amendment and it has not been circulated to the members. The other day a similar amendment was moved by the hon. Minister for omitting certain clause in the Excise Bill and it was admitted and put before the House. I request that my amendment may be admitted and circulated.

MR. SPEAKER.—I shall say what has happened. Omission of a Clause amounts to a negative amendment and on that ground it was disallowed. The amendment of a similar nature was wrongly admitted the other day and the hon. member might know that it was not put to vote. I am sorry it was wrongly admitted.

SRI L. SRIKANTAIAH.—I shall draw the attention of the hon. Minister to clause (2). It reads as follows:

> "The landlord claiming payment of rent by tenant may apply to the tribunal in the prescribed from for directing the tenant to pay landlord."

(SRI L. SRIKANTAIAH)

It is clear that the landlord claiming payment of rent shall apply to the court in the prescribed form. Section 42 (2) read with amended section 116 makes it amply clear that the landlord shall seek his remedy only in the court. The court is defined in section 2 of section 34. If I remember carefully what the Minister for Revenue has stated on the floor and made clear in the Objects and Reasons. The object is to bifurcate judicial functions from executive functions and transfer those functions to the Tahsildar. If that be the case, the whole thing becomes contradictory and inconsistent.

Another aspect to which I wish to draw the attention of the Minister is, the object of the Government is a laudable one. I quite understand it is to expedite speedy implementation of the land reforms. Please see section 118 (3). Of course the Government has not brought forward an amendment. That apart, while discussing a very major legislation, it is my duty to draw the attention of the Minister as to how delays are caused, if advice is not taken from proper quarters or if the sections are not properly scrutinised. Let the Minister read section 118 (3). In the scheme of appeals and revision from an order of the Munsiff, an appeal shall apply to the appellate authority and it is defined as District Judge. Under section 113 (3) a party may desire for the decision of the High Court and the appellate authority or the Revenue Appellate Tribunal shall have to refer the question for the decision of the High Court. My submission is if the Government has to cut short the delay what is the effect of this provision? The moment a case comes before the District Judge any party may present a petition and say that the matter may be referred to the High Court and the High Court has to take it. We all know the load of work in the High Court. In this connection I wish to draw your attention to section 113 of the Civil Procedure Code. They are only under certion conditions. A very salutory proviso is provided there. In fact we know several instances where the High Court have observed why references were made to them. I remember on many occasions the Civil Judges and District Judges getting a whipping from the High Court; asking them on what ground they referred the cases to High Court. But here, any party may apply; suo motu the matter is referred and the High Court takes three years. On a slightest matter a party can present a petition and say let the matter be decided by the High Court. Therefore I think section 118 (3) requires urgent amendment.

Another aspect to which I wish to draw your attention is:.....

MR. SPEAKER.—Only two hours are allotted to this Bill. Hence I request hon. members to please finish their speeches in five minutes. They may state points only.

SRI L. SRIKANTAIAH.—I wish to draw the attention of the Hon. Minister to section 22 (d). There also the time and procedure for notice

for recovery of the land has not been made clear. I think it is better in conformity with the Transfer of Property Act section 22 (d) is carefully worded like the provisions of the Rent Control Act.

Lastly, I wish to draw the attention of the Hon. Minister to the definition of the word 'court' contained in the amended section 2 (9a). The Hon. Minister knows what it is and I also know that a court means the Court of Munsiff, but if one reads section 2 (9a) in law whether the court should be considered as the Court of Munsiff, is not made clear. The word 'court' as defined here has reference to the Court of Munsiff, but it may not be the Court of Munsiff as constituted under the law under the Civil Court Act or under the Code of Civil Procedure. It my be the Court of Munsiff as constituted under section 133. But that conflict is there apparent. I know and the Hon. Minister knows that 'court' means the Court of Munsiff, but in law I am not compelled to assume that 'court' means the court of Munsiff. I do not want to elaborate this point further as there is no time.

I shall conclude by saying one thing. Last year a question was put to the Hon. Minister, what is the surplus land available and the Hon. Minister was pleased to say that facts are not availabe as yet. I stopped at that. In this session also, I called upon the Hon. Minister to state who are those persons or institutions who enjoyed non-ceiling exemption and he gave a list saying that it includes Mathadhipathis and religous institutions, etc. I asked him about the extent of lands these people owned and for that also the reply was that facts are not available because it involves extra labour. May I point out that in the year 1961 this Act came into force and still you do not know who are these persons and institutions who are above the celling limit like charitable institutions, foreign companies and private individuals. Eight years have passed and still the Government are not in a position to possess vital statistics of land reforms. When are you going to get it? That is the point. Suppose I call upon the Hon. Minister to state the private companies which own lands beyond the purview of the ceiling clause, he does not have information. We know that there are certain foreign companies owning more than 2000 acres of land and you exempt them, but you call a small holder owning one or two acres of land as an exploiter whereas these foreign companies owning more than 2000 acres of land go scot-free under your Land Reforms Act. Is this the type of socialism that you want to usher in? Therefore I wish the Hon. Minister bestows some thought on these matters and bring suitable amendments after taking proper advice from proper quarters.

†ಶ್ರೀ ಟಿ. ಆರ್. ಶಾಮಣ್ಣ. (ಬೆಂಗಳೂರು ಪೋರ್ಟ್). ಮಾನ್ಯ ಸಭಾಪತಿಗಳೇ, ಈಗ ನಾನು ಲ್ಯಾಂಡ್‌ಲಾರ್ಡ್ ಅಲ್ಲ ಅಥವಾ ಟೆನೆಂಟೂ ಅಲ್ಲ. ಆದರೆ ಒಂದು ಅಂಶ ಇಲ್ಲಿ ಎದ್ದು ಕಾಣುತ್ತಾ ಇದೆ ಈ ಲ್ಯಾಂಡ್ ರಿಫಾರಂಸ್ ಬಿಲ್ ಆಕ್ಟ್ ಆದಮೇಲೆ 1961ರಲ್ಲಿ ಜಾರಿಗೆ ಬಂತು. ಈಗ 1970ನೇ ಇಸವಿ ಬಂದರೂ ಕೂಡ ಕೆಲವು ವರ್ಷಗಳಿಂದ ಅದನ್ನು ಜಾರಿಗೆ ತರದೆ ಹಾಗೆ ಬಿಟ್ಟಿದ್ದರಿಂದ ಇದರಲ್ಲಿ ಏನು ಮುಖ್ಯ ಉದ್ದೇಶ ಅಡಗಿತ್ತೋ ಅದಕ್ಕೆ ತೊಂದರೆಬರುತ್ತಾ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಕಳೆದ 4–5 ವರ್ಷಗಳಿಂದ ಅನೇಕರು ಈ ಜಮೀನುಗಳನ್ನು ಪರಭಾರೆ ಮಾಡಿ ಎಷ್ಟೆಷ್ಟು ತೊಂದರೆ ಕೊಡಬೇಕೋ ಅಷ್ಟೆಲ್ಲಾ ಮಾಡಿರುವುದರಿಂದ ಕೊನೆಗೆ ಉಳಿಯತಕ್ಕಂಥ

(ಶ್ರೀ ಟಿ. ಆರ್. ಶಾಮಣ್ಣ)

ಜಮೀನು ಎಷ್ಟು ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಎರಡನೆದಾಗಿ ಬೇರೆ ಯವರ ಜಮೀನನ್ನು ಕಿತ್ತುಕೊಂಡು ಮತ್ತೊಬ್ಬರಿಗೆ ಕೊಡುವುದಕ್ಕೆ ಮುಂದೆ ಸರಕಾರದ ವಶದಲ್ಲೇ ಸುಮಾರು 25 ಲಕ್ಷ ಎಕರೆಗಳಷ್ಟು ಭೂಮಿ ಎಂದರೆ ಅನ್‌ಕಲ್ಟಿವೇಟೆಡ್ ಲ್ಯಾಂಡು ಇದೆ ಎಂದು ಕೇಳು ತ್ತೇವೆ. ಇದನ್ನಾದರೂ ತಕ್ಷಣ ವಿಲೇವಾರಿ ಮಾಡಿದ್ದರೆ ಇದರಿಂದ ಅನೇಕರಿಗೆ ಜಮೀನಾದರೂ ಸಿಗುತ್ತಿತ್ತು. ಇದರ ಜೊತೆಗೆ ದೇಶದಲ್ಲಿ ಇದ್ದ ಆಹಾರದ ಸಮಸ್ಯೆ ಕೂಡ ಸ್ವಲ್ಪಮಟ್ಟಿಗೆ ಬಗೆಹರಿ ಯುತ್ತಿತ್ತು. ಹೀಗೆ ಶೀಘ್ರವಾಗಿ ಇದರ ಕಲಸವನ್ನು ಮಾಡದೇ ಇರುವುದು ತುಂಬಾ ವಿಷಾದದ ಸಂಗತಿ. ಇದನ್ನು ಮಾಡಲು ಜಮೀನೆಲ್ಲಾ ಸರಕಾರದ ಕೈಯಲ್ಲೇ ಪೂರ್ತಿಯಾಗಿತ್ತು, ಇನ್ನೊಂದು ವಿಚಾರ ಇದರಲ್ಲಿ ಬರುತ್ತೆ. ಇನಾಂ ಅಬಾಲಿಷನ್ ಆಕ್ಟ್ ಜಾರಿಗೆ ಬಂದಾಗ ಅನೇಕರಿಗೆ ಸಂಬಂಧ ಪಟ್ಟ ಹಾಗೆ ಅವರಿಗೆ ಕೊಡಬೇಕಾದ ಪರಿಹಾರದ ಹಣವನ್ನು ಇನ್ನೂ ಕೊಟ್ಟಿಲ್ಲ. ಅನೇಕರು ನನ್ನ ಬಳಿ ಬಂದು ಇವರ ಬಗ್ಗೆ ಸಾಕಾದಷ್ಟು ಸಂಕಟಗಳನ್ನು ತೋಡಿಕೊಂಡು ವ್ಯಥೆಪಡುತ್ತಿದ್ದೇವೆ ಎಂದೂ ಹೇಳಿದ್ದಾರೆ ಮತ್ತು ಸರಕಾರಕ್ಕೂ ಮನವಿಗಳನ್ನು ಸಲ್ಲಿಸಿದ್ದಾರೆ. ಇದರ ಬಗ್ಗೆ ಸರಕಾರ ಬೇಗನೆ ತೀರ್ಮಾನ ತೆಗೆದುಕೊಂಡು ತಕ್ಷಣ ಇವರೆಲ್ಲರಿಗೂ ಅನುಕೂಲ ಮಾಡಿಕೊಡತಕ್ಕದ್ದು ಬಹು ಮುಖ್ಯ. ಇದರ ಜೊತೆಗೆ ಇನ್ನೊಂದು ವಿಚಾರ ಇದರಲ್ಲಿದೆ. ಅದು ಟೆನೆಂಟುಗಳು ಎಂದು ಇರುವವರ ಬಗ್ಗೆ ಏನು ಒಂದುರೀತಿಯಾಗಿ ಹೇಳಿದ್ದಾರೆ ಅದರಂತೆ ವ್ಯವಹಾರ ಹತ್ತಿಗಳಲ್ಲಿ ಮಾಡಲು ಆಗದಿದ್ದಿಲ್ಲ. ಹಳ್ಳಿ ಗಳಲ್ಲಿ ಇರುವ ಜನರು ತಮ್ಮ ಜಮೀನನ್ನು ಬೇರೆಯವರಿಗೆ ಕೊಟ್ಟು ಅವರಿಂದ ಗುತ್ತಿಗೆ ಪಡೆಯುತ್ತಾ ಬೇರೆಯವರ ಜಮೀನನ್ನು ತಾವು ಮಾಡುತ್ತೇವೆ ಎಂದು ಅವರಿಗೆ ಗೇಣಿ ಕರಾರು ಬರೆದು ಕೊಡುವ ದಳ್ಳಾಳಿಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಇಂತಹ ಮಧ್ಯವರ್ತಿಗಳಿಂದಾಗುವ ತೊಂದರೆಗಳನ್ನು ತಪ್ಪಿಸಬೇಕು. ಅಬ್ಸೆಂಟೀ ಲ್ಯಾಂಡ್‌ಲಾರ್ಡ್‌ಗಳು ಎಂದು ಇಲ್ಲ ಮಧ್ಯವರ್ತಿಗಳ ಕಾಟ ಬಹಳ ಹೆಚ್ಚಾಗಿದೆ. ಪರ್ಮನೆಂಟು ಟೆನೆಂಟಾಗಿ ಕೆಲಸ ಮಾಡುವವರಲ್ಲಿ ಬೇರೆ ಒಂದು ರೀತಿ ಯಾದ ಹೆಸರು ಕೊಟ್ಟು ನ್ಯಾಯವಾಗಿ ಇರುವ ಗೇಣಿದಾರರಿಗೆ ಗೇಣಿಯೇ ಸಿಗುವುದಿಲ್ಲ. ಇಂತಹ ಇಂಟರಮೀಡಿಯರೀಸ್‌ಗಳಿಂದ ಆಗುವ ತೊಂದರೆಗಳನ್ನು ಸರಕಾರ ತಪ್ಪಿಸಬೇಕು. ಇದರ ಬಗ್ಗೆ ಸರಕಾರ ತೀವ್ರವಾಗಿ ಯೋಚನೆ ಮಾಡಬೇಕು. ಇನ್ನೊಂದು ಇದರಲ್ಲಿ ಒಂದು ಎರಡು, ಮೂರು ಇತ್ಯಾದಿ ಎಂಟು ವರ್ಗಗಳವರಿಗೆ ಕ್ಲಾಸುಗಳು ಎಂದು ಮಾಡಿದ್ದಾರೆ. ಇವುಗಳನ್ನು ಎಕರೆಗಳಿಂದ ಹೆಕ್ಟಾರುಗಳು ಎಂದು ಮಾಡಬೇಕೆಂದು ಹೇಳಿದ್ದಾದರೆ, ಇವನ್ನೆಲ್ಲಾ ಮಾಡಬೇಕಾದರೆ ಬಹಳ ಕಾಲ ಹಿಡಿಯುತ್ತದೆ. ಆದುದರಿಂದ ಇದರ ಬಗ್ಗೆ ಬೇಗ ತೀರ್ಮಾನ ತೆಗೆದುಕೊಂಡು ಬೇಗನೆ ಪರಿ ಹಾರವನ್ನು ಜನರಿಗೆ ಸಿಗುವಂತೆ ಏರ್ಪಾಡು ಮಾಡಬೇಕು ಮತ್ತು ಸರಕಾರ ತೀವ್ರವಾಗಿ ಗಮನ ಕೊಟ್ಟು ಜನರ ಕಷ್ಟವನ್ನು ಬೇಗನೆ ಪರಿಹಾರ ಮಾಡಬೇಕು. ಈಗಿರತಕ್ಕ ಸಂದರ್ಭದಲ್ಲಿ ಇಲ್ಲಿ ತಂದಿರುವ ಲ್ಯಾಂಡು ರಿಫಾರಂಸ್ ಆಕ್ಟ್ ಜಾರಿಗೆ ತರುವುದರಲ್ಲೇ ಸಾಕಾದಷ್ಟು ತಡವಾಗಿದೆ. ಇನ್ನೂ ತಡವಾಗವುದಕ್ಕೆ ಅವಕಾಶ ಮಾಡಿದರೆ ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲ. ಆದುದರಿಂದ ಸರಕಾರ ಜನರಿಗೆ ಸರಿಯಾದ ಪರಿಹಾರವನ್ನು ಕೊಟ್ಟು ಇದನ್ನು ಬೇಗನೆ ಬಗೆಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಚಾರವನ್ನು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ ಬೆಂಗಳೂರಿನಲ್ಲಿರತಕ್ಕ ಅನೇಕ ಸ್ಕೂಲ್ ಹೋಲ್ಡರುಗಳು ಸ್ವಲ್ಪ ಭೂಮಿಯನ್ನು ಇಟ್ಟುಕೊಂಡಿದ್ದರೆ. ಇವರಿಗೆ ಈ ಕಾನೂನಿನಿಂದ ತೊಂದರೆಯಾಗಿದೆ ಮತ್ತು ಇವರುಗಳು ಜೀವನ ಮಾಡಲು ಜಮೀನನ್ನೇ ನಂಬಿದ್ದಂತಹವರು. ಇವರಿಗೆ ತೊಂದರೆಯಾಗುವಂತೆ ಮಾಡಬಾರದು. ಇದು ಹೇಗಿದೆ ಎಂದರೆ ಹಾವನ್ನು ಹೊಡೆದು ಹಿಡ್ದಿಗೆ ಹಾಕಿದರು ಎನ್ನುವಂತೆ ಯಾರದೋ ಜಮೀನನ್ನು ಕಿತ್ತು ಇನ್ನೊಬ್ಬರಿಗೆ ಕೊಡುವಂತೆ ಮಾಡಬಾರದು. ಸ್ಕೂಲ್ ಹೋಲ್ಡರುಗಳಿಗೆ ಅನುಕೂಲ ಮಾಡಿಕೊಡಬೇಕು. I am neither a tenant nor a land-lord. Some representations were made to me. In this connection I request that the Government should take all steps to see that the available Government land is distributed. Secondly the Act, is meant for disposing of cases.

ಇವನ್ನೆಲ್ಲಾ ರೂಲ್ಸು ಮಾಡುವಾಗ ಸರಿಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನ್ಯಾಯವಾಗಿ ಜನರಿಗೆ ಅನುಕೂಲವಾಗುವಂತೆ ಸರಕಾರ ಬೇಗನೆ ತೀರ್ಮಾನ ತೆಗೆದುಕೊಳ್ಳಬೇ ಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ನಾಗಪ್ಪ.— ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿನ ಮೇಲೆ ಮಾತನಾಡುವುದಕ್ಕೆ ಮುಂಚಿತವಾಗಿ ಮಾನ್ಯ ರೆವೆನ್ಯೂ ಮಂತ್ರಿಗಳ ಗಮನಕ್ಕೆ ಈ ಅಮೆಂಡುಮೆಂಟು ಕ್ಲಾಸು 4ನ್ನು ಓದಬೇಕು ಮತ್ತು ನಾನು ಇದೇ ಆಕ್ಟಿನ ಒರಿಜನಲ್ ಆಕ್ಟ್‌ನಲ್ಲಿರುವ ಕ್ಲಾಸು 42ನ್ನು ತಮ್ಮ ಅವಗಾಹನೆಗಾಗಿ ಓದುತ್ತೇನೆ. ಅದು ಹೀಗಿದೆ :

"42 (1) Notwithstanding anything contained in any agreement or in any law for the time being in force, no suit or other proceeding shall lie in any Court or before any other authority for recovery of any rent payable by tenant, except as provided in this Section."

Under this Section 42 of the principal Act, before Sub-Section (2), the following Sub-Section shall be inserted, namely :—

"(1) Notwithstanding anything contained in any agreement or in any law for the time being in force, no suit or other proceeding shall lie in any Court or before any other authority for recovery of any rent payable by tenant, except as provided in this Section. It is a mockery of democracy. You have got army of officers. There is a Secretary, Deputy Secretaries, Assistant Secretaries and all that."

ಈಗ ತಂದಿರುವ ಅಮೆಂಡ್‌ಮೆಂಟ್ ಬಿಲ್ಲಿನಲ್ಲಿ ತಂದಿರುವುದು ಇದೇ ವಾಕ್ಯಗಳಲ್ಲಿದೆ. ಇದರ ಮೇಲೆ ಮಂತ್ರಿಗಳು ತಮ್ಮ ಅಭಿಪ್ರಾಯ ಏನು ಎನ್ನುವುದನ್ನು ತಿಳಿಸಬೇಕು. ಇಂತಹ ಅಬ್‌ನಡ್ ಅಮೆಂಡ್‌ಮೆಂಟ್ ಎಂದರೆ ಇದು ಮಾಕರಿ ಆಫ್ ಡೆಮಾಕ್ರಸಿ ಆಗುತ್ತೆ. ಇಂತಹ ನಾಚಿಕೆಗೇಡಿನ ಅಮೆಂಡ್‌ಮೆಂಟ್ ಎಂದು ಇ್ಲರುವ 216 ಜನ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳುವುದರಲ್ಲಿ ಅರ್ಥವೇನು ? ಮಿಸ್‌ಕೋಟು ಮಾಡಿ ತರಲು ಕಾರಣವೇನು. ನಿಮಗೆ ಆರ್ಮಿ ಆಫ್ ಆಫೀಸರುಗಳು ಇದ್ದಾರೆ. ಸೆಕ್ರಟರಿಗಳು, ಡೆಪ್ಯುಟಿ ಸೆಕ್ರಟರಿಗಳು ಅಡಿಷನಲ್ ಲಾ ಸೆಕ್ರೆಟರಿಗಳು ಇದ್ದಾರೆ. ರವೆನ್ಯೂ ಇರಾಖೆಯಲ್ಲಿ ಸೆಕ್ರಟರಿಗಳು ಸ್ಪೆಷಲ್ ಅಡಿಷನಲ್ ಸೆಕ್ರೆಟರಿಗಳು ಹಾಗೂ ಡೆಪ್ಯೂಟಿ ಸೆಕ್ರೆಟರಿಗಳು ಹಾಗೂ ಇನ್ನಿತರ ಅಧಿಕಾರಿಗಳಿದ್ದಾರೆ. ಇಂತಹ ಒಂದು ಸೆಕ್ಷನನ್ನು ಏನಾದರೂ ನೋಡಿದ್ದಾರೆಯೇ ? ಇವೆಂತಹ ನಾಚಿಕೆಗೇಡಿನ ಪ್ರಸಂಗ ? ಇಂತಹ ತಿದ್ದುಪಡಿಗಳನ್ನು ಇನ್ನು ಮುಂದೆ ತರಬಾರದೆಂದು ನಾನು ಹೇಳುತ್ತೇನೆ. ಮಂತ್ರಿ ಮಂಡಲದಲ್ಲಿರುವ ಮುನತ್ತು ಜನ ಮಂತ್ರಿಗಳು ಇದನ್ನು ನೋಡಲಿಲ್ಲವೇ ಎಂದು ಕೇಳುತ್ತೇನೆ. ಈಗ ತಂದಿರತಕ್ಕಂಥ ತಿದ್ದುಪಡಿಯಿಂದ ಯಾವ ರೀತಿಯ ಅನಾನುಕೂಲವೂ ಸಹ ಆಗುವುದಿಲ್ಲ. ಒಂದು ತೊಂದರೆಯನ್ನು ತಪ್ಪಿಸುವುದಕ್ಕಾಗಿ ತಿದ್ದುಪಡಿಯನ್ನು ತರುವುದರ ಮೂಲಕ ಇನ್ನೊಂದು ತೊಂದರೆಯನ್ನು ಸೃಷ್ಟಿ ಮಾಡುತ್ತಿದ್ದೀರಿ. ಸೆಕ್ಷನ್ 111 ನಬ್ ಕ್ಲಾಸ್ ಎರಡರಲ್ಲಿ ಈ ರೀತಿ ಹೇಳಿದೆ :

4-30 P.M.

"For any area for which a Tribunal has not been constituted the Munsiff having jurisdiction over such area or any other judicial officer authorised in this behalf by the State Government shall exercise all the powers and perform all the duties and functions of the Tribunal under this Act."

ಸುವ ಮೋಜೋ ಈ ಸೆಕ್ಷನ್‌ನಿಂದಲೇ ಸರ್ಕಾರಕ್ಕೆ ಬೇಕಾದುದು ಆಗುತ್ತಿತ್ತು. ಆದರೆ ಈ ಒಂದು ಸೆಕ್ಷನನ್ನು ರದ್ದು ಮಾಡುವುದಕ್ಕೆ ಹೊರಟಿದ್ದೀರಿ. ಈಗ ತಂದಿರತಕ್ಕಂಥ ತಿದ್ದುಪಡಿಯಿಂದ ಜಾಗ್ರತೆ ಭೂಸುಧಾರಣೆಯನ್ನು ತರುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದೀರಿ. ನಾನಾದರು ಹೇಳುತ್ತೇನೆ, ಈಗಿನ ತಿದ್ದುಪಡಿಯ ಪ್ರಕಾರ ಭೂಸುಧಾರಣೆಯನ್ನು ಜಾರಿಗೆ ತರಲು ಇನ್ನೂ ತಡವಾಗುತ್ತದೆ ಎಂಬುದಾಗಿ. ಮುನ್ಸೀಫರುಗಳಿಗೆ ಈ ಕೆಲಸವನ್ನು ಮಾಡಲು ಅಧಿಕಾರ ಕೊಟ್ಟರೆ ಕೆಲಸ ಜಾಗ್ರತೆಯಾಗುತ್ತದೆಂಬ ಮಾತನ್ನು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದ ಮಾತು.

(ಶ್ರೀ ಎಂ. ನಾಗಪ್ಪ)

ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಅಪ್ಲಿಕೇಷನ್‌ಗಳು ಇನ್ನೂ ಇತ್ಯರ್ಥವಾಗದೆ ಇವೆ ಎಂಬ ಬಗ್ಗೆ ಅಂಕಿಅಂಶಗಳನ್ನು ಒಂದು ಪ್ರಶ್ನೆಗೆ ಉತ್ತರವಾಗಿ ಒದಗಿಸಿಕೊಟ್ಟಿದ್ದೀರಿ. ಈಗ ಒಂದೊಂದು ತಾಲ್ಲೂಕ್‌ನಲ್ಲಿ ಒಬ್ಬೊಬ್ಬ ಮ್ಯಾಜಿಸ್ಟ್ರೇಟ್ ಇದ್ದಾರೆ. ಈಗ ಕೆಲವು ತಾಲ್ಲೂಕ್‌ಗಳಲ್ಲಿ 70—80 ಅಪ್ಲಿಕೇಷನ್‌ಗಳು ಪೆಂಡಿಂಗ್ ಇದ್ದರೆ ಇನ್ನೂ ಕೆಲವು ತಾಲ್ಲೂಕ್‌ಗಳಲ್ಲಿ 94,883 ರಿಂದ ಹಿಡಿದು 1,39,613 ಅಪ್ಲಿಕೇಷನ್‌ಗಳವರೆಗೆ ಪೆಂಡಿಂಗ್ ಇವೆ. ಇಂತಹ ಕಡೆ ಮುನ್ಸೀಫ್‌ಗೆ ಅಧಿಕಾರ ಕೊಟ್ಟರೂ ಕೂಡ ಜಾಗ್ರತೆ ಕೆಲಸವಾಗುವುದಿಲ್ಲ. ಏಕೆಂದರೆ ಅವರಿಗೆ ಮಾಮೂಲ ಕೆಲಸ ಬೇರೆ ಇರತ್ತದೆ. ಅದರ ಜೊತೆಗೆ ಈ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ಭೂಸುಧಾರಣೆ ಜಾರಿಗೆ ಬರಲು ಇನ್ನೂ 8—10 ವರ್ಷಗಳು ಆಗಬಹುದು. ಇದನ್ನೆಲ್ಲಾ ಸರ್ಕಾರದವರು ಕೂಲಂಕುಷವಾಗಿ ವಿಚಾರಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಕರೆ, ಗುಂಟೆ ಲೆಕ್ಕದಲ್ಲಿ ಜಮೀನನ್ನು ಅಳತೆ ಮಾಡುತ್ತಿದ್ದುದನ್ನು ಇನ್ನು ಮುಂದೆ ಎಕ್ಚಾರ್ ಲೆಕ್ಕದಲ್ಲಿ ಅಳತೆ ಮಾಡುವ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಅಂದರೆ ಮೆಟ್ರಿಕ್ ಪದ್ಧತಿಯನ್ನು ಜಾರಿಗೆ ತರಲು ಹೊರಟಿದ್ದೀರಿ. ಈಗ ಅಡಳಿತ ನಡೆಸುತ್ತಿರುವ ಸಿಂಡಿಕೇಟ್ ಕಾಂಗ್ರೆಸ್ ನವರು ಪ್ರಗತಿಪರರಿದ್ದಾರೆ, ಸೀಲಿಂಗ್ ಲಿಮಿಟ್‌ನ್ನು ಕಡಿಮೆ ಮಾಡುತ್ತಾರೆಂದು ನಾನು ತಿಳಿದಿದ್ದೆ; ಆದರೆ ಅದನ್ನು ಕಡಿಮೆ ಮಾಡಿಲ್ಲ. ಒಂದು ರೂಪಾಯಿಗೆ 100 ಪೈಸೆ ಎನ್ನುವ ಬದಲು 16 ಆಣೆಗೆ 100 ಪೈಸೆ ಎನ್ನುವಂತೆ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅಷ್ಟೆ. ಇವತ್ತಿನ ದಿವಸ ನಿರುದ್ಯೋಗದ ಸಮಸ್ಯೆ ಜಾಸ್ತಿಯಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಕೂಲಿ ಗಾರರಿಗೆ ಕೆಲಸ ಸಿಗುತ್ತಿಲ್ಲ. ಸೀಲಿಂಗ್ ಲಿಮಿಟನ್ನು ಕಡಿಮೆ ಮಾಡಿದ್ದರೆ ಹೆಚ್ಚಿನ ಜನರಿಗೆ ಜಮೀನನ್ನು ಹಂಚುವುದಕ್ಕೆ ಸಾಧ್ಯವಾಗುತ್ತಿತ್ತು. ವ್ಯವಸಾಯದ ಬಗ್ಗೆ ಡಿಗ್ರಿ ಪಡೆದುಕೊಂಡಿರುವ ಪದವೀಧರರಿಗೆ ಕೂಡ ಹೆಚ್ಚಿನ ಭೂಮಿಯನ್ನು ಹಂಚಿಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ಸೀಲಿಂಗ್ ಲಿಮಿಟನ್ನು ಕಡಿಮೆ ಮಾಡದಿದ್ದರೆ ದಿನದಿಂದ ದಿನಕ್ಕೆ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ. ಈ ಕಾರಣದಿಂದಲೇ ನಾನು ಸೀಲಿಂಗ್ ಲಿಮಿಟನ್ನು ಕಡಿಮೆ ಮಾಡುವ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಅದನ್ನು ಸರ್ಕಾರದವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ರತ್ನಕುಮಾರ್ ಕಟ್ಟೇಮಾರ್ (ಮೂಡಬಿದ್ರಿ).—ಮಾನ್ಯ ಅಧ್ಯಕ್ಷರೇ, ಇವತ್ತು ಭೂಸುಧಾರಣೆ ಕಾನೂನಿಗೆ ತಿದ್ದುಪಡಿಯನ್ನು ಎಲ್ಲರ ಪ್ರಯೋಜನಕ್ಕೆ ಬರುವಂತೆ ತಂದಿದ್ದೇವೆಂದು ಹೇಳಿದ್ದಾರೆ. ನಮ್ಮ ದಕ್ಷಿಣಕನ್ನಡ ಜಿಲ್ಲೆಯಿಂದ ರೈತವರ್ಗದಿಂದ ಮತ್ತು ಭೂಮಾಲೀಕರ ವರ್ಗದಿಂದ ಸರ್ಕಾರಕ್ಕೆ ಬೇಕಾದಷ್ಟು ಸೂಚನೆಗಳನ್ನು ಕಳಿಸಿಕೊಟ್ಟಿದ್ದೇವೆ. ಆ ಒಂದು ಸೂಚನೆಗಳ ಬಗ್ಗೆ ಯಾವ ಒಂದು ತಿದ್ದುಪಡಿಯನ್ನೂ ಸಹ ಸರ್ಕಾರದವರು ಇವತ್ತಿನವರೆಗೆ ತಂದಿಲ್ಲ. ಜನಾನುಕೂಲ ದೃಷ್ಟಿಯಿಂದ ಜನತೆಯನ್ನು ಸ್ವಲ್ಪ ಸಮಾಧಾನ ಮಾಡುವುದಕ್ಕೆ ಒಂದು ಆರ್ಡಿನೆನ್ಸ್ ಮಾಡಿಸಿ ಆ ಬಗ್ಗೆ ಈಗ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಒಕ್ಕಲಿಗರಿಗಾಗಲೀ ಭೂಮಾಲೀಕರಿಗಾಗಲೀ ಪ್ರಯೋಜನವಾಗುವಂಥ ತಿದ್ದುಪಡಿಯನ್ನು ಇವರು ತರಲಿಲ್ಲ. ಈ ಬಗ್ಗೆ ಒಂದು ಉನ್ನತ ಮಟ್ಟದ ಕಮಿಟಿ ರಚನೆಯಾಗಬೇಕೆಂದು ನಾವು ಕೇಳಿಕೊಂಡಿದ್ದೇವೆ. ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಾಗಲೀ ಸರ್ಕಾರದವರಾಗಲೀ ಇನ್ನೂ ಆಲೋಚನೆ ಮಾಡಿಲ್ಲ. ಇದು ಬೇಸರದ ಸಂಗತಿ ಎಂದು ಹೇಳಬಹುದು. ಕಾಲುಗೇಣಿದಾರರಿಗೆ ಯಾವ ರೀತಿ ಹಕ್ಕು ಉಂಟೋ ಅದರಂತೆ ಸರ್ಕಾರದವರು ಪ್ರತಿಯೊಬ್ಬರಿಗೂ ಕೂಡ ರಕ್ಷಣೆ ಕೊಟ್ಟಿಲ್ಲ. ಮೂರು ವಿಚಾರಗಳನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಕೊಟ್ಟಿದ್ದೇವೆ. ಒಂದನೆಯದು ಎಂದರೆ ಯಾರು ಭೂಮಾಲೀಕರು ಇದ್ದಾರೋ ಅವರ ಜಮೀನಿನ ಗೇಣಿಯ ಹಕ್ಕನ್ನು ಅವರಿಗೇ ಬಿಟ್ಟುಕೊಡಬೇಕು ಇಲ್ಲದಿದ್ದರೆ ಆ ಕುಟುಂಬದಲ್ಲಿರುವ ಜನರಿಗೆ ಸೀಲಿಂಗ್ ಲಿಮಿಟ್ ಮಾಡಿ ಜಮೀನನ್ನು ಸಾಗುವಳಿಗಾಗಿ ಬಿಟ್ಟುಕೊಡಬೇಕು. ಎರಡನೆಯದು ಎಂದರೆ ಹೆಚ್ಚುವರಿ ಜಮೀನನ್ನು ಭೂಮಾಲೀಕರಿಂದ ಪಡೆದುಕೊಂಡರೆ ಆ ಜಮೀನಿಗೆ ಮಾರ್ಕೆಟ್ ಧಾರಣೆಯಲ್ಲಿ ನಗದುಪರಿಹಾರ ಕೊಡಬೇಕು. ಮೂರನೆಯದು ಎಂದರೆ ಗೇಣಿದಾರರಿಂದ ಭೂಮಾಲೀಕರಿಗೆ ಗೇಣಿ ಬರುವಂತೆ ಮಾಡಬೇಕು. ಇವತ್ತು ಸಣ್ಣ ಹಿಡುವಳಿದಾರರಿಂದ ಹಿಡಿದು ದೊಡ್ಡ ಹಿಡುವಳಿದಾರರವರೆಗೆ ಯಾರೂ ಕೂಡ ಭೂಮಾಲೀಕರಿಗೆ ಒಂದು ಕವಡೆಯಷ್ಟು ಕೂಡ ಗೇಣಿಯನ್ನು ಕೊಡುತ್ತಿಲ್ಲ. ಇದರಿಂದ ಭೂಮಾಲೀಕರು ಸಾಲ ಮಾಡಿಯಾದರೂ ಕೂಡ ಕಂದಾಯವನ್ನು ಕಟ್ಟಬೇಕಾಗಿದೆ. ಅಲ್ಪಸ್ವಲ್ಪ ಜಮೀನು ಇರುವವರಿಗೆ ಕಂದಾಯ ಕಟ್ಟುವುದಕ್ಕೆ ಸಾಧ್ಯವಿಲ್ಲವಾಗಿದೆ. ಈ ವಿಚಾರವನ್ನು ಮಾನ್ಯ ಕಂದಾಯ ಮಂತ್ರಿಗಳು ಸಹ ಒಪ್ಪಿಕೊಂಡಿದ್ದಾರೆ. ಕೆಲವು

ಜಮೀನ್ದಾರರು ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಇರುವ ಕಷ್ಟಗಳನ್ನು ಹೇಳಿಕೊಂಡಾಗ ಅವರು ಸಹ ಪರಿಶೀಲಿಸುವುದಾಗಿ ಹೇಳಿದ್ದರು. ಆದರೆ ಭೂಮಾಲೀಕರಿಗೆ ಯಾವ ಪರಿಹಾರವನ್ನು ಸಹ ಕೊಟ್ಟಿಲ್ಲ. ಇದೇ ಪರಿಸ್ಥಿತಿ ಇನ್ನು ಮುಂದೆಯೂ ಮುಂದುವರೆದರೆ ಗಂಭೀರ ಪರಿಸ್ಥಿತಿ ಉಂಟಾಗುತ್ತದೆ. ಕೊನೆಗೆ ಇದು ಎಲ್ಲಿಗೆ ಬರುತ್ತದೆ ಎಂದರೆ ಇಡೀ ರಾಜ್ಯದಲ್ಲಿ ಅರಾಜಕತೆ, ಅನ್ಯಾಯ ಮತ್ತು ಅತ್ಯಾಚಾರ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇವತ್ತಿನ ದಿವಸ ಭೂಮಾಲೀಕರಿಗೂ ಮತ್ತು ಒಕ್ಕಲಿಗರಿಗೂ ಈ ಸರ್ಕಾರದ ಮೇಲೆ ನಂಬಿಕೆ ಇಲ್ಲವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಭೂಸುಧಾರಣಾ ಕಾನೂನನು ತಪ್ಪು ಇದ್ದಲ್ಲಿ ತಿದ್ದುಪಡಿ ಮಾಡಲು ಒಂದು ಉನ್ನತಮಟ್ಟದ ಕಮಿಟಿಯನ್ನು ಮಾಡುವುದು ಒಳ್ಳೆಯ ದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA (Harihar).—Sir, I am only asking a clarification from the Hon'ble Revenue Minister. What is worrying me having gone through this Bill, not once but twice, is, what are the compelling reasons for him to change the standard acre into Hectares and areas. I saw the Kannada translation also. There also, the same word "area" is used. I do not know what he means thereby. If the Minister has any commonsense, he may kindly think what effect these words will have on the promotion of the objective he has in mind in bringing this amending Bill. This Bill was introduced by an ordinance. What is it they have done? If they want to introduce the metric system, it is all right. But, do they remember that when the metric system was introduced in coinage, for some years until people got accustomed to it, both the systems were in vogue, and gradually after some time when people became accustomed it came into full force on a particular day. Up to this day, in many parts of our State our people know the measurements in acres and guntas and acres and cents, and not ares. All our revenue records like the record of rights, survey settlement records and other documents, etc., should be found only in acres and not in metric system. There are hardly one lakh and more cases. What you could have done is not to trouble yourselves. Because the Planning Commission said you should fall in line with metric; system you could have introduced a legislation to the effect that all the records must be brought under the revenue system within a particular period say five years or if you can manage the affairs more efficiently say within three years, till then you could have kept all these things as they stand. What are our people, how do they know hectares and ares. I could not follow what two standard or one standard acre mean. To understand the meaning I had to go to the dictionary, I had to consult an expert mathematician and it took two days for me to find out what one hectare means. You say one hectare is equal to 2.74 acres or 100 ares. How are we to find it out? Supposing I have 4 acres which might be equal to 1,000 ares or so. I have to apply for making a change in the records. If there were to be any dispute about this calculation, the matter has to be taken to the Court. Instead of bringing in land reforms you are creating a set back which will give room for the lawyers to earn money. I therefore appeal to the Hon. Minister, in the interest of the ryots, to delete this particular clause. There is nothing spectacular about this. You have

(SRI H. SIDDAVEERAPPA)

not tried to promote the socialistic view of the thing. At least this will hinder us and bring in endless litigations. I appeal to keep off this metric system and delete this clause where you want to introduce these hectares and ares otherwise you will not be serving the public cause.

†ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಎದುರಿಗೆ ಮೈಸೂರು ಲ್ಯಾಂಡ್ ರಿಫಾರಮ್ಸ್ ತಿದ್ದುಪಡಿ ಮಸೂದೆಯನ್ನು ಇಟ್ಟಿದ್ದಾರೆ. ಈ ಕಾಯಿದೆಯ ರೂಪರೇಷೆಗಳು ಇದರ ತಾತ್ಪರ್ಯಿಕ ಧೋರಣಿ ಇವುಗಳು ಜನತೆಯ ಹಿತದೃಷ್ಟಿಯಿಂದ ಇರಬೇಕು ಎನ್ನುವ ವಾದವನ್ನು ಎಲ್ಲರೂ ಒಪ್ಪುವಾಗ ಸರ್ಕಾರದ ಕಡೆಯಿಂದ ಬಹಳ ಒಳ್ಳೆಯ ನಿರೀಕ್ಷಣೆ ಇದ್ದರೂ ಕೂಡ ನಾವು ನಿರೀಕ್ಷಿಸಿದ ರೂಪರೇಷೆಗಳು ಈ ಸಭೆಯಮುಂದೆ ಬರಲಿಲ್ಲ. ನೆಟ್ಟಿದ ಎಮ್ಮೆ ಕೋಣನನ್ನು ಈಯಿತಲ್ಲಾ! ಎನ್ನುವ ಹಾಗೆ ಸರ್ಕಾರದವರು ಈಗ ಈ ಮಸೂದೆಯನ್ನು ಈ ಸಭೆಯಮುಂದೆ ತಂದಿದ್ದಾರೆ. ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ಶ್ರೀಮಾನ್ ನಾಗಪ್ಪನವರು ಈ ಮಸೂದೆಯ ಮೇಲೆ ಮಾತನಾಡುತ್ತಾ ಬಹಳ ಚೆನ್ನಾಗಿ ಹೇಳಿದ್ದಾರೆ. ಯಾವುದೇ ಒಂದು ಕಾಯಿದೆಯನ್ನು ತರುವಾಗಲೂ ಕೂಡ ಮೈಸೂರು ಸರ್ಕಾರದವರು ಮುಂದಿನ ಯೋಚನೆಯನ್ನೇ ಮಾಡುವುದಿಲ್ಲ. ಸರ್ಕಾರದವರಿಗೆ ಯೋಚನೆಯು ಅಭಾವ ಬಹಳ ಇದೆ ಎಂದು ಅನಿಸುತ್ತದೆ. ಕಾಯಿದೆಯನ್ನು ಮಾಡಬೇಕು ಎಂದು ಅವರ ಮನಸ್ಸಿನಲ್ಲಿ ಬಂದಾಕ್ಷಣಕ್ಕೇ ಯಾವುದೋ ಒಂದು ರೂಪರೇಷೆಯಿಲ್ಲ ಸರ್ಕಾರದ ರೊತಕ್ಕದಿಂದ ಅದು ಪ್ರಿಂಟಾಗುತ್ತದೆ. ಅವರು ಹೇಳಿದಂತೆ ರಾಜ್ಯಪಾಲರ ಬಾಯಲ್ಲಿ ಕೂಡ ಆರ್ಡಿನೆನ್ಸ್ ಹೊರಡಿಸಿದ್ದೇವೆ ಎಂದು ಹೇಳಿಸುವಂತಹ ಮನೋಭೂಮಿಕೆ ಸರ್ಕಾರದಲ್ಲಿ ಬೆಳೆದು ಬಂದಿದೆ. ಈ ರೀತಿ ಮಾಡತಕ್ಕದ್ದು ಒಂದಲ್ಲ ಎರಡಲ್ಲ, ಅನೇಕ ವಿಷಯಗಳಲ್ಲಿ ಈ ರೀತಿ ಮಾಡಿರುವುದು ನಮಗೆ ಕಂಡು ಬಂದಿದೆ. ಪ್ರತಿಯೊಂದು ತಿದ್ದುಪಡಿಯನ್ನು ಕೂಲಂಕಷವಾಗಿ ವಿಚಾರ ಮಾಡಿದರೆ ಎಳ್ಳಷ್ಟೂ ಇದರ ಅವಶ್ಯಕತೆ ಇಲ್ಲ ಎಂದು ಪ್ರತಿಯೊಬ್ಬರೂ ಹೇಳಬಹುದು. ಸರ್ಕಾರದವರು ಹೇಳುತ್ತಾರೆ ನಾವು ಇವೊತ್ತಿನ ದಿವಸ ಭೂಸುಧಾರಣೆಯನ್ನು ತ್ವರಿತವಾಗಿ ಜಾರಿಗೆ ತರುವ ದೃಷ್ಟಿಯಿಂದ ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ನಿರ್ಮಾಣ ಮಾಡಿದ್ದರೂ ಕೂಡ ಆ ಟ್ರಿಬ್ಯುನಲ್‌ಗಳ ಮುಂದೆ ರಿಜಂಷನ್ ಅಪ್ಲಿಕೇಷನ್‌ಗಳು ಮತ್ತು ಗೇಣಿ ವಸೂಲಿ ಅಪ್ಲಿಕೇಷನ್‌ಗಳು ಜಾಸ್ತಿ ಇರುವುದರಿಂದ ಅವುಗಳನ್ನು ಇತ್ಯರ್ಥ ಮಾಡುವುದಕ್ಕೆ ತಡವಾಗುತ್ತಿದೆ, ಆದ್ದರಿಂದ ಅವುಗಳ ಬಗ್ಗೆ ನ್ಯಾಯ ನಿರ್ಣಯವನ್ನು ತ್ವರಿತಗೊಳಿಸಿ ರೈತಾಪಿ ಜನಗಳಿಗೆ ಹೆಚ್ಚಿನ ನ್ಯಾಕರ್ಯವನ್ನು ಕೊಡುವುದಕ್ಕೋಸ್ಕರ ಆರ್ಡಿನೆನ್ಸ್ ಹೊರಡಿಸಿದ್ದೇವೆ ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ತಮ್ಮ ಪೀಠಿಕಾ ಭಾಷಣದಲ್ಲಿ ಹೇಳಿದ್ದಾರೆ. ಇವರು ಯಾವೊತ್ತು ಆರ್ಡಿನೆನ್ಸ್ ಹೊರಡಿಸಿದ್ದಾರೆಯೋ ಅಲ್ಲಿಯತನಕ ಎಷ್ಟು ಜನರು ಮ್ಯಾಜಿಸ್ಟ್ರೇಟ್ ಕೋರ್ಟಿಗಾಗಲೀ ಸಿವಿಲ್ ಜಡ್ಜ್ ಕೋರ್ಟಿಗಳಿಗಾಗಲೀ ಕೇಸುಗಳನ್ನು ಕೊಟ್ಟಿದ್ದಾರೆ; ಎಷ್ಟು ಕೇಸುಗಳನ್ನು ನಡೆಸಿದ್ದಾರೆ ಎನ್ನುವುದನ್ನು ವಿಚಾರಣೆ ಮಾಡಿ ನೋಡಿದ್ದಾರೆಯೇ? ಇಂಥಾ ಟ್ರಿಬ್ಯುನಲ್‌ನಲ್ಲಿ ಇತ್ಯರ್ಥವಾಗತಕ್ಕಂಥ ಕೇಸುಗಳನ್ನು ಮುನ್ಸೀಫ್ ಕೋರ್ಟ್ ಮತ್ತು ತಹಶೀಲ್ದಾರರಿಗೆ ರೆಫರ್ ಮಾಡುವರಿಂದ, ವಹಿನುವದರಿಂದ ಮತ್ತಷ್ಟು ಕಾಂಪ್ಲಿಕೇಷನ್ ಆಗುತ್ತದೆ. ನೀವು ನಿಮ್ಮ ಪಕ್ಷಕ್ಕೆ ಒಪ್ಪುವ ಹಾಗೆ ಸಿಂಡಿಕೇಟ್ ಪಕ್ಷ ಎಂದರೆ ಹಣವುಳ್ಳವರ ಪಕ್ಷ ಎನ್ನುವುದಕ್ಕೆ ಯೋಗ್ಯರಾಗಿದ್ದೀರಿ. 1956 ನೇ ಇಸವಿಯಿಂದಲೂ ಇಲ್ಲಿಯವರೆಗೆ ಬರೀ ಕಾಯಿದೆಯನ್ನು ಮಾತ್ರ ಮಾಡಿದ್ದೀರಿ, ಈ ಕಾಯಿದೆಯನ್ನು ಆಚರಣೆಗೆ ತರುವ ಪ್ರಯತ್ನವನ್ನು ನೀವು ಮಾಡಿಲ್ಲ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದಂತಹ ನೀವು ಯಾವ ತತ್ವವನ್ನು ಅನುಸರಿಸಿಕೊಂಡು ಬರುತ್ತಿದ್ದೀರಿ, ಯಾವರೀತಿಯ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಸ್ಥಾಪನೆ ಮಾಡಿದ್ದೀರಿ? ಮಾನ್ಯ ಮುರಾರಜಿ ದೇಸಾಯಿ ಅವರು 1948 ನೇ ಇಸವಿಯ ಪೂರ್ವದಲ್ಲಿ ಬೊಂಬಾಯಿ ಕೆನೆನ್ಸಿ ಆಕ್ಟಿನಲ್ಲಿ 48 ಎಕರೆ ಜಮೀನನ್ನು ಪರಮಾವಧಿ ಹೊತ್ತು ಮಾಡಿದ್ದಾರೆ. ಅದು ಇವೊತ್ತು ಯಾವರೀತಿ ಕಾಣುತ್ತದೆ? ಇದು ಪ್ರಗತಿಪರ ಸಾಧನೆಯಲ್ಲ. ಈ ತಿದ್ದುಪಡಿಯಿಂದ ಮತ್ತಷ್ಟು ಗೊಂದಲವುಂಟಾಗಿದೆ. ಸಮಾಜವಾದವನ್ನು ಕೈಬಿಡಲಾಗಿದೆ. ಹೀಗಿರುವಾಗ ನಿಮ್ಮನ್ನು ಯಾವ ರೀತಿಯಿಂದ ಕರೆಯೋಣ? ನಿಮ್ಮನ್ನು ಸಿಂಡಿಕೇಟ್ ಎಂದು ಕರೆಯಬೇಕೇ ಅಥವಾ ಕ್ಯಾಪಿಟಲಿಸ್ಟ್ ಎಂದು ಕರೆಯಬೇಕೇ ಅಥವಾ ರೈತರನ್ನು ಹಾಳುಮಾಡುವ ಭೂಪರು ಎಂದು ಕರೆಯಬೇಕೇ? ಅದಷ್ಟು ಜಾಗತ್ಕ ಭೂಸುಧಾರಣೆ ಕಾಯಿದೆಯನ್ನು ಪೂರ್ತಿಯಾಗಿ ಅಮಲಿನಲ್ಲಿ ತಂದು ರೈತನಿಗೆ ಕಲ್ಯಾಣವನ್ನುಂಟುಮಾಡುವುದಕ್ಕೆ

ನಮಗೆ ಇರತಕ್ಕ ಆಡ್ಡಿ ಆತಂಕಗಳು ಏನು? ಈ ಬಗ್ಗೆ ವಿವೇಚನೆ ಮಾಡಿ ನೋಡಿ ಎಂದು ನಾನು ತಮ್ಮನ್ನು ಕೇಳುತ್ತೇನೆ. ಇವೊತ್ತಿನ ದಿವಸ ಟೆನೆನ್ಸಿ ಅಕ್ಟಿನಲ್ಲಿ ಲ್ಯಾಂಡ್ ಕನ್‌ಸಾಲಿಡೇಷನ್ ಕಾಯಿದೆಯ ರೂಪರೇಷೆಗಳೇ ಇದರಲ್ಲಿ ಇಲ್ಲ. ಈ ಕಾಯಿದೆಯನ್ನು ಯಾವರೀತಿ ಚಲಾವಣೆ ಮಾಡುತ್ತೀರಿ? ಜನರ ಕಣ್ಣಿಗೆ ಮಣ್ಣು ಎರಚಿ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಜನತೆಯ ಎದುರಿನಲ್ಲಿ ಬರೀ ನಾಟಕವಾಡುತ್ತೀರಾ ಎಂದು ನಾನು ಕೇಳುತ್ತೇನೆ. ಇವೊತ್ತಿನ ದಿವಸ ಈ ಕಾಯಿದೆಯಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದಹಾಗೆ ಜಮೀನಿನ ರೆಕ್ಕವನ್ನು ಹೆಕ್ಟಾರ್ಸ್ ಅಂಡ್ ಪಾರ್ಸ್ ಕ್ರಮವನ್ನು ಜಾರಿಗೆ ತರಲು ಉದ್ದೇಶಿಸಿರುವುದು ನರಿಯಲ್ಲ. ರೈತರಿಗೆ ಜನಗಳಿಗೆ ತಿಳಿಯುವ ಹಾಗೆ ಹಿಂದೆ ಇದ್ದಹಾಗೆ ಮಾರ್ಪಾಡು ಮಾಡಬೇಕು. ಈಗ ನೀವು ಮಾಡಿರತಕ್ಕದ್ದು ವಕೀಲರಿಗೆ ಮತ್ತು ಸೆಕ್ರೆಟೇರಿಯಟ್‌ನಲ್ಲಿ ಎಷ್ಟು ಜನಗಳಿಗೆ ಅರ್ಥ ವಾಗುತ್ತದೆ ಎಂಬುದನ್ನು ನೋಡಿಕೊಳ್ಳಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇವರಿಗೆ ಸಾಕಷ್ಟು ಕೆಲಸ ಇದೆ. 15–20 ವರ್ಷಗಳ ಕೇಸುಗಳು ಇನ್ನೂ ನಡೆಯುತ್ತಿವೆ. ಮಂತ್ರಿ ಯವರೂ ವಕೀಲರಾಗಿರುವುದರಿಂದ, ಅವರು ಮಂತ್ರಿಪದವಿಯಿಂದ ಹೋದ ಮೇಲೂ ಅದು ಇರಲಿ ಎಂದು ಮಾಡಿದರೋ ಎಂದು ಆಶ್ಚರ್ಯಪಡಬೇಕಾಗಿದೆ. ರೈತರಿಗೆ ಇದರಿಂದ ಅನುಕೂಲವಾಗ ಬಾರದು, ಕೇವಲ ಲ್ಯಾಂಡ್ ಲಾರ್ಡುಗಳಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಆಗಾಗ್ಗೆ ಅಮೆಂಡ್‌ಮೆಂಟ್ ತಂದು ನಿಜವಾದ ಕಾಯಿದೆಯ ಅಸ್ತಿತ್ವಕ್ಕೆ ಆಡ್ಡಿ ತರುತ್ತಿದ್ದಾರೆ. ಇವತ್ತು ಪರಮಾವಧಿ ಹಿಡುವಳಿ ಗೊತ್ತುಮಾಡುವುದರಲ್ಲಿ ಯಾವ ರೀತಿ ಪ್ರಗತಿಯನ್ನು ಸಾಧಿಸು ವುದಕ್ಕೆ ಪ್ರಯತ್ನ ಮಾಡಿದ್ದಾರೆ? ಈ ಸ್ಟ್ಯಾಂಡರ್ಡ್ ಎಕರೆಯಲ್ಲಿ 7 ತರಗತಿಗಳನ್ನು ಮಾಡಿದ್ದೀರಿ. ಅಲ್ಲಿಯ ಮಳೆಯ, ಹವಾಮಾನದ ಸ್ಥಿತಿಯನ್ನು ನೋಡಿಕೊಂಡು ನಿರ್ಧಾರ ಮಾಡುವುದು ಯಾವಾಗ? ಇದು ಜನರಿಗೆ ತಿಳಿಯುವುದು ಯಾವಾಗ? ಇವೆಲ್ಲವನ್ನೂ ಆಲೋಚನೆ ಮಾಡಬೇಕು. ಇನ್ನು ಕ್ಲಾಸ್ 7 ರಲ್ಲಿ ಹೆಕ್ಟರ್ಸ್ ಪ್ರಕಾರ ರೆಕ್ಕ ಹಾಕಿದ್ದೀರಿ. 200 ಎಕರೆಗೆ ಪರಮಾವಧಿ ಇಟ್ಟಿದ್ದೀರಿ. ಇದರಿಂದ ಮಹಾರಾಜರು ಬಿಟ್ಟು ಉಳಿದವರೆಲ್ಲರೂ ನಿಮ್ಮ ಕಾಯಿದೆ ಒಳ್ಳೇದು ದಾರಿಯೆಂದು ಅಭಿನಂದನೆ ಮಾಡಬಹುದು. ಇದರಿಂದ ರೈತರ ಕಲ್ಯಾಣ ಎಂದು ಆಗುತ್ತದೆ ಎಂದು ಕೇಳುತ್ತಿದ್ದೇನೆ. ಇದನ್ನು ಮಾನ್ಯ ಕಂದಾಯ ಮಂತ್ರಿಯವರು ವಿವೇಚನೆ ಮಾಡಬೇಕು. ಇವರಿಗೆ ಮೊರಾರ್ಜಿಯವರು ಬಾಂಬೆ ಸರ್ಕಾರದಲ್ಲಿದ್ದಾಗ ಅಸೆಂಬ್ಲಿ ಮೆಂಬರ್ ಆಗಿ ಕೆಲಸ ಮಾಡಿ ಅಲ್ಲಿ ಯಾವ ತರ ಟೆನೆನ್ಸಿ ಕಾಯಿದೆ ಯನ್ನು ಮಾಡಿದ್ದಾರೆಂಬುದು ಗೊತ್ತಿದೆ. ಅಲ್ಲಿ 42 ಎಕರೆ ಮಾತ್ರ ಇಟ್ಟಿದ್ದರು. ಆದರೆ ಇಲ್ಲಿ 200 ಎಕರೆಗೆ ಪ್ರಯತ್ನ ಮಾಡಿದ್ದಾರೆ. ಇದು ಸೂಕ್ತವಲ್ಲವೆಂದು ನಾನು ಹೇಳಬೇಕಾಗಿದೆ. ದೇಶದ ಎಲ್ಲಾ ಭಾಗಗಳಲ್ಲಿಯೂ ಸಮಾನವಾದ ಕಾಯಿದೆಗಳನ್ನು ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಒಂದು ಕಡೆ ಒಂದು ರೀತಿ, ಇನ್ನೊಂದು ಕಡೆ ಬೇರೆಯೇ ರೀತಿಯಲ್ಲಿ ಮಾಡ ಬಾರದು. ಇದನ್ನು ಮೈಸೂರು ಸರ್ಕಾರದವರು ಮಾಡಬಾರದು ಎಂದು ಎಚ್ಚರಿಕೆ ಕೊಡುತ್ತೇನೆ. ಮತ್ತು ಈ ಸರ್ಕಾರ ಇರುವವರೆಗೆ ನಿಜವಾಗಿಯೂ ರೈತರ ಕಲ್ಯಾಣವಾಗುವುದಿಲ್ಲ. ಲ್ಯಾಂಡ್ ಲಾರ್ಡ್‌ಗಳ ಕಲ್ಯಾಣವೂ ಇಲ್ಲ. ಮತ್ತು ಈ ಗೇಣಿದಾರರ ಕಲ್ಯಾಣವೂ ಆಗುವುದಿಲ್ಲ. ಇವರಿಗೆ ಇವತ್ತು ಬೇಕಾಗಿರುವುದು, ಒಂದೇ—ನಾವು ನಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುವುದು ಹೇಗೆ?—ಎಂದು. ಅದರಿಂದ ಜನತೆಗೆ ದ್ರೋಹ ಬೇಕಾದರೆ ಆಗಲಿ, ಅಥವಾ ಅನ್ಯಾಯವಾದರೂ ಆಗಲಿ. ಆದರೆ ಅವರಿಗೆ ಅಧಿಕಾರ ಮಾತ್ರ ಮುಂದುವರಿಸಿಕೊಂಡು ಸುಖಪಡ ಬೇಕಾಗಿದೆ. ಈ ದೃಷ್ಟಿಯಿಂದ ಇಂದು ದೇಶದಲ್ಲಿ ಒಂದು ಕೊಲಾಹಲವೇ ಎದ್ದಿದೆ. ನೀವು ನಿಜ ವಾಗಿಯೂ ಜನರ ಕಲ್ಯಾಣವನ್ನು ಮಾಡಲು ನಿಮ್ಮ ಮಂತ್ರಿಮಂಡಲಕ್ಕೆ ಆಗುವುದಿಲ್ಲ. ಹಾಗೆ ಅವಕಾಶವಿವ್ವರೆ, ಇವತ್ತು ಕಾಂಗ್ರೆಸ್ಸಿನಲ್ಲೇ ನಿಮ್ಮ ಸಿಂಡಿಕೇಟ್ ನಿರ್ಮಾಣವಾಗಿ, ಇತರರು ಹೊರಗಡೆ ಹೋಗಬೇಕಾದ ಪ್ರಸಂಗ ಏಕೆ ಬರುತ್ತಿತ್ತು? ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ನನ್ಮಾನ್ಯ ಅಧ್ಯಕ್ಷರೇ, ಈಗ ನಭೆಯ ಮುಂದಿರತಕ್ಕ ಈ ಗೇಣಿ ಶಾಸನದ ತಿದ್ದುಪಡಿ ಮಸೂದೆಯನ್ನು ಸಂಪೂರ್ಣವಾಗಿ ವಿರೋಧ ಮಾಡಲು ನಾನು ನಿಂತಿದ್ದೇನೆ. ಈ ಕಾನೂನು 1961 ರಲ್ಲಿ ಕಾನೂನಾದರೂ 2–10–1965 ರಿಂದ, ಅಂದರೆ ಸುಮಾರು 5 ವರ್ಷಗಳ ನಂತರ ಜಾರಿಗೆ ಕೊಡಲ್ಪಟ್ಟಿತ್ತು. ಜಾರಿಗೆ ಕೊಡತಕ್ಕ ತಾರೀಖನ್ನು ಕೂಡ ಬಹಳ ವಿಶೇಷವಾಗಿ ಸರ್ಕಾರ ನಮೂದು ಮಾಡಿದೆ. ಮಹಾತ್ಮ ಗಾಂಧೀಜಿಯವರ ಹುಟ್ಟು ದಿನದಂದು ಶಾಸನವನ್ನು ಜಾರಿಗೆ ಕೊಟ್ಟು, ಭೂಮಿ ಇಲ್ಲದ ರೈತರಿಗೆ, ಗೇಣಿದಾರರಿಗೆ, ಭೂಮಾಲಿಕರಿಗೆ, ಎಲ್ಲರಿಗೂ ಒಂದು ವ್ಯವಸ್ಥೆ ಮಾಡಿ ಭೂಮಿ ಹಂಚಿಕೆ ಮಾಡುತ್ತೇವೆಂದು ಹೇಳಿದರು. ಆದರೆ 2–10–1965 ರಿಂದ ಇವತ್ತಿನವರೆಗೆ, ಅಂದರೆ 2–2–70 ರವರೆಗೆ ಸುಮಾರು 4 ತಿದ್ದುಪಡಿಗಳನ್ನು ಈ ಮಸೂದೆಗೆ ತಂದಾದರು ಸಾಲದೆ, ಈಗ 5 ನೇ ತಿದ್ದುಪಡಿಯನ್ನು ತಂದಿದ್ದಾರೆ. ಮೊದಲು ಯಾವ

(ಶ್ರೀ ಕೆ. ಎಚ್. ರಂಗನಾಥ್)

ಮನೂದೆ ಇತ್ತೋ, ಅದು ಅಮೂಲಾಗ್ರವಾಗಿ ಬದಲಾವಣೆಯಾಗುತ್ತಾ ಬಂದಿದೆ. ರಾಜ್ಯಪಾಲರ ಭಾಷಣದಲ್ಲಿ ಕೂಡ ಈ ವಿಚಾರವಾಗಿ ಒಂದು ಮಾತನ್ನು ಹೇಳಲಾಗಿದೆ. ಅಲ್ಲಿ ಅವರು ಈ ರೀತಿ ಹೇಳುತ್ತಾರೆ: "My Government has paid close attention to the need for expediting implementation of the land reforms programme in the State" ಇಷ್ಟೇ ಉದ್ದೇಶ ವಿನಹ ಇದಕ್ಕಿಂತ ಮುಂದಿನ ಉದ್ದೇಶವೇನಿಲ್ಲವೆಂಬುದು ನಮ್ಮ ಮುಂದಿಟ್ಟಿರುವ ತಿದ್ದುಪಡಿಯಿಂದ ಅರ್ಥವಾಗುತ್ತದೆ. ಇನ್ನು ಮುಂದೆ ಹೇಳುತ್ತಾರೇನೆಂದರೆ, ಈ ಶಾಸನ ಜಾರಿಗೆ ಒಂದರೆ ಸರ್ಕಾರಕ್ಕೆ ದೊಡ್ಡ ಒಂದು ಹಣಕಾಸಿನ ಇಕ್ಕಟ್ಟಿನ ಪರಿಸ್ಥಿತಿ ಉದ್ಭವವಾಗುತ್ತದೆಂದು ಒಂದು ಹೆದರಿಕೆಯನ್ನು ಇಟ್ಟಿದ್ದಾರೆ. ರಾಜ್ಯಪಾಲರ ಭಾಷಣದ ಮೊದಲು ಕೂಡ ಪತ್ರಿಕೆಗಳಲ್ಲಿ ಕೆಲವಾರು ಸ್ಟೇಟ್‌ಮೆಂಟುಗಳಲ್ಲಿ ಇದನ್ನು ಹೇಳಿದ್ದರು. ಈ ನಾನ್ ರೆನ್ಯೂಮೇಬಲ್ ಲ್ಯಾಂಡ್ಸ್ ಎಂದು ಏನು ಹೇಳುತ್ತೀವೆ, ಅವುಗಳನ್ನು ರೈತರಿಗೆ ದೊಡ್ಡ ದೊಡ್ಡ ಭೂಮಾಲಿಕರಿಂದ, ತಗೆದುಕೊಳ್ಳಬೇಕಾದರೆ, 35–40 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಯಾವ ಸರ್ಕಾರಕ್ಕೆ ಬ್ಯಾಂಕುಗಳ ರಾಷ್ಟ್ರೀಕರಣದಲ್ಲಿ ನಂಬಿಕೆ ಇಲ್ಲವೋ, ಯಾವ ಸರ್ಕಾರ ಅದು ಸರಿಯಿಲ್ಲವೆಂದು ಹೇಳಿತೋ, ಅದೇ ಸರ್ಕಾರ ರಾಷ್ಟ್ರೀಕೃತವಾದಂತಹ ಬ್ಯಾಂಕುಗಳಿಂದ 35–40 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಭೂಮಾಲಿಕರಿಗೆ ಕೊಡತಕ್ಕ ಸಾಹಸ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಉತ್ತರದಲ್ಲಿ ಹೇಳಿದ್ದರು. ಭಾರತದಲ್ಲಿ ಎಲ್ಲೂ ಇಂಥ ಕಾನೂನನ್ನು ಮಾಡಿಲ್ಲ, ಗೇಣಿದಾರರಿಗೆ, ಅವರೇ ಮಾಲೀಕತ್ವಕ್ಕೆ ಬರುವಾಗ ಕೊಡಬೇಕಾದ ಹಣ ಇರುವುದಿಲ್ಲ; ಅದಕ್ಕೆ ಅವರ ಪರವಾಗಿ ಸರ್ಕಾರದವರು ಕೊಟ್ಟು ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ಆಕ್ಟಿನ ಸೆಕ್ಷನ್ 14 ರ ಪ್ರಕಾರ ಸರ್ಕಾರ ರಿಸ್ಯೂಂ ಮಾಡತಕ್ಕ ಭೂಮಿಗಳು ಯಾವುದು ಎಂಬುದನ್ನು ಡಿಫೈನ್ ಮಾಡಬೇಕು. 5 ವರ್ಷಗಳಾಗಿದ್ದರೂ, ಇದನ್ನು ನೋಟಿಫೈ ಮಾಡಿದ್ದಾರೆಯೇ? ಸೆಕ್ಷನ್ 65–66 ರಲ್ಲಿ ಸರ್ಪ್ಲಸ್ ಲ್ಯಾಂಡ್ ಎನ್ನತಕ್ಕದ್ದನ್ನು ನಿಗದಿ ಮಾಡಿದ್ದಾರೆಯ? ಈ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡಲು ಒಬ್ಬ ಡಿವಿಜನಲ್ ಕಮಿಶನರ್ ಹುದ್ದೆಯ ಅಧಿಕಾರಿಯನ್ನು ಸ್ಪೆಶಲ್ಲಾಗಿ ನೇಮಕ ಮಾಡಿದ್ದಾರೆ. ಸೆಕ್ಷನ್ 66–67 ರ ಪ್ರಕಾರ ಸರ್ಪ್ಲಸ್ ಲ್ಯಾಂಡ್ ಎಷ್ಟೆಂಬುದನ್ನು ನೀವು ರಾಜ್ಯದ ಪ್ರಜೆಗಳು ಮುಂದೆ ಇಟ್ಟಿದ್ದೀರಾ? ಸೆಕ್ಷನ್ 14 ರ ಪ್ರಕಾರ ರಿಸ್ಯೂಮೇಬಲ್ ಲ್ಯಾಂಡ್ ಎಷ್ಟೆಂದು ಹೇಳಿದ್ದೀರಾ? ಮೊನ್ನೆ ಪ್ರಶ್ನೆಗಳು ಬಂದಾಗ ಸುಮಾರು 2 ಲಕ್ಷ ಚಿಲ್ಲರೆ ಅರ್ಜಿಗಳು ಬಂದಿವೆ. ಇಷ್ಟು ರೆನ್ಯೂಮ್ ಮಾಡುವುದಕ್ಕೆ ಕೇಳಿದ್ದಾರೆ, ಮಿಕ್ಕಿದ್ದು ನಾನ್ ರೆನ್ಯೂಮೆಬಲ್ ಎಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ರೆನ್ಯೂಂ ಆಗಿದೆ, ಎಂದರೆ ಸರ್ಕಾರದ ಉತ್ತರ ಇಲ್ಲ. ಮಾನ್ಯ ಕಟ್ಟೀಮನೆಯವರು ಹೇಳುತ್ತಾರೇನೆಂದರೆ, ಅವರಿಗೆ ಬರತಕ್ಕ ರೆಂಟ್ ಏನಿದೆ, ಅದು ಕೂಡ ಬರುತ್ತಾ ಇಲ್ಲ, ಎಂದು. ಇವೊತ್ತಿನ ದಿವಸ ಯಾವ ತಾರೀಕಿನಲ್ಲಿ ಗೇಣೀದಾರನು, ಗೊತ್ತಾದ ದಿವಸವೇ ಅವನು ಕಾನೂನು ಪ್ರಕಾರ ಗೇಣಿಯನ್ನು ಕೊಡಬೇಕೆಂದು ನಿಗದಿ ಮಾಡಿದ್ದೀರಾ?

5-00 P.M.

ಈ ಸಂದರ್ಭದಲ್ಲಿ ನಾನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಏಕೆಂದರೆ ಇಲ್ಲಿ ಒಂದಷ್ಟು ಕಣ್ಣಾಮುಚ್ಚಾಲೆಯ ಆಟ ನಡೆದಿದೆ. ಇಲ್ಲಿ ಮೂರು ಉದ್ದೇಶಗಳಿಗಾಗಿ ಶಾಸನವಿದೆ. ಟೆನೆಂಟಿಗೆ ಫಿಕ್ಸೇಷನ್ ಆಫ್ ಟೆನ್ಯೂರ್ ಮಾಡಿಕೊಡುವುದು ಇದರಲ್ಲಿದೆ. ಇಂತಹ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲಿ ಸುಮಾರು ಒಂದು ಎಕರೆಯಿಂದ 5 ಎಕರೆವರೆಗೆ ಹಿಡುವಳಿದಾರರ ಸಂಖ್ಯೆ ಎಷ್ಟಿದೆಯೆಂಬುದನ್ನು ವಿಚಾರ ಮಾಡಬೇಕಾಗಿದೆ. ಅದರ ಬಗ್ಗೆ ಮಾನ್ಯ ಶ್ರೀ ಜತ್ತಿಯವರ ಪೆದಲಿ ಬೇರೆ ಇದೆ. ರಾಜ್ಯದ ಒಟ್ಟು ಭೂಹಿಡುವಳಿದಾರರ ಸಂಖ್ಯೆ ಎಷ್ಟೆಂಬುದನ್ನು ನೋಡಿದರೆ ಒಂದು ಎಕರೆಯಿಂದ 5 ಎಕರೆಯವರೆಗೆ ಇರುವವರು ಶೇಕಡ 47 ರಷ್ಟು ಜನರು ಇದ್ದಾರೆ. 75 ಎಕರೆಯಿಂದ 100 ಎಕರೆಯವರೆಗೆ ಇರುವವರು ದಾಮಾಷಾ ಪ್ರಕಾರ ಶೇಕಡ .05 ರಷ್ಟು ಇದ್ದಾರೆ. ಇನ್ನು 300 ಎಕರೆಗಳಿಂದ 500 ಎಕರೆಗಳವರೆಗೆ ಇರುವವರು ಶೇಕಡ .03 ರಷ್ಟು ಇದ್ದಾರೆ. ಇನ್ನು ಒಂದು ಸಾವಿರ ಎಕರೆಗಳಿಗೆ ಮೇಲೆ ಇರುವ ಜನರು ಶೇಕಡ .005 ರಷ್ಟು ಇದ್ದಾರೆ. ಆದರೂ ಸರ್ಕಾರದವರು ಇಂತಹ ಕಡಿಮೆ ಸಂಖ್ಯೆಯ ಜನರ ಹಿತರಕ್ಷಣೆ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಯೇ ಹೊರತು ಒಂದು ಎಕರೆಯಿಂದ 5 ಎಕರೆಗಳವರೆಗೆ ಇರುವಂಥ ಜನರ ಅಂದರೆ ಶೇಕಡ 47 ರಷ್ಟು ಇರುವಂಥವರ ಹಿತರಕ್ಷಣೆಯನ್ನೇನಾದರೂ ಮಾಡಿದ್ದೀರಾ? ಈ ಒಂದು

ಕಾನೂನನ್ನು ಜಾರಿಗೆ ತರುವುದರ ಉದ್ದೇಶವನ್ನು ಬಚ್ಚಿಟ್ಟು ಈಗ ಒಂದು ದೊಡ್ಡ ಗುಲ್ಲನ್ನು ಎಬ್ಬಿಸುತ್ತಿದ್ದಾರೆ. ಇವತ್ತಿನ ದಿವಸ ಅಂತಹ ಕಾನೂನನ್ನು ಜಾರಿಗೆ ಕೊಟ್ಟರೆ ಬರೀ ರೆನ್ಯೂಮ್ ಮಾಡುವ ಭೂಮಿಗೋಸ್ಕರ 35 ಕೋಟಿ ರೂಪಾಯಿಗಳನ್ನು ಇವರು ಖರ್ಚು ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಇನ್ನು ಇಡೀ ನಪ್ಲಸ್ ಲ್ಯಾಂಡ್ ಕೊಟ್ಟರೆ ಇನ್ನಷ್ಟು ದುಡ್ಡು ಕೊಡಬೇಕಾಗುತ್ತದೋ ಎಂದು ಒಂದು ದೊಡ್ಡ ಗೊಂದಲವನ್ನು ಎಬ್ಬಿಸುತ್ತಿದ್ದಾರೆ. ಆದರೆ ಎರಡು ಸಾವಿರಕ್ಕಿಂತ ಕಡಿಮೆ ಇದ್ದರೆ ನಗದು ಹಣ ಕೊಡುವುದು ಅಥವಾ ಮೇಲೆ ಇದ್ದರೆ ಬಾಂಡುಗಳನ್ನು ಕೊಡುವುದು ಎಂದು ಕಾನೂನಿನಲ್ಲಿದೆ. ಇಂತಹ ಪರಿಸ್ಥಿತಿ ಇರುವಾಗ 35 ಕೋಟಿ ರೂಪಾಯಿಗಳನ್ನು ಏಕೆ ಇದಕ್ಕಾಗಿ ಖರ್ಚುಮಾಡಬೇಕು ? ಕರಾರುವಾಕ್ಕಾಗಿ ಈ ಸಭೆಗೆ ಇದರ ಬಗ್ಗೆ ಉತ್ತರ ಕೊಡಬೇಕು. ನುಮಾರು 8 ಜಿಲ್ಲೆಗಳಲ್ಲಿಯೂ ಈ ಗೇಣಿದಾರರಿಗೆ ಸಂಬಂಧಪಟ್ಟಂತೆ ಆತಿ ಕೀಳ್ಪು ವಾಗಿ ಇದನ್ನು ವಿಚಾರಮಾಡಬೇಕು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಟೆನೆಂಟ್ ಕಲ್ಟಿವೇಷನ್ ಪರ್ಸಂಟೇಜ್ ಸೇಕಡ 8.4 ರಷ್ಟಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸೇಕಡ 16.9 ರಷ್ಟಿದೆ. ಧಾರವಾಡ ಜಿಲ್ಲೆಯಲ್ಲಿ ಸೇಕಡ 9 ರಷ್ಟಿದೆ. ಬೆಳಗಾಂನಲ್ಲಿ ಸೇಕಡ 13.8 ರಷ್ಟಿದೆ. ಬಿಜಾಪುರದಲ್ಲಿ ಸೇಕಡ 7.2 ರಷ್ಟಿದೆ. ನಾರ್ತ್ ಕೆನರಾದಲ್ಲಿ ಸೇಕಡ 35 ರಷ್ಟಿದೆ. ಸೌತ್ ಕೆನರಾದಲ್ಲಿ ಸೇಕಡ 36 ರಷ್ಟಿದೆ. ಕೂರ್ಗ್‌ನಲ್ಲಿ ಸೇಕಡ 10.1ರಷ್ಟಿದೆ. ಸೆಕ್ಷನ್ 14ರ ಪ್ರಕಾರ ಸರ್ಕಾರದವರು ರೂಂಸ್ ಮಾಡುವುದಕ್ಕೆ ಒಂದು ವರ್ಷ ತೆಗೆದುಕೊಂಡಿದ್ದಾರೆ. ಇನ್ನು ಗ್ರಾಸ್ ಪ್ರಾಸೀಡ್ಸ್ ಎಷ್ಟು ಎನ್ನುವುದನ್ನು ಯಾರು, ಯಾವ ರೀತಿ ನಿರ್ಣಯ ಮಾಡಿದ್ದಾರೆನ್ನುವುದನ್ನು ನೋಟಿಫೈ ಮಾಡುವುದಕ್ಕೆ ಇವರು ಒಂದು ವರ್ಷ ತೆಗೆದುಕೊಂಡಿದ್ದಾರೆ. ಆದ್ದರಿಂದ ಯಾವ್ಯಾವ ತಾರೀಖಿನಲ್ಲಿ ನೋಟಿಫಿಕೇಷನ್ ಇಷ್ಯೂ ಆಗಿದೆಯೆಂಬುದನ್ನು ವಿಚಾರ ಮಾಡಬೇಕು. ಟೆನೆಂಟ್ಸ್ ಭೂಮಿ ಇಲ್ಲದೆ ಎಷ್ಟು ವರ್ಷಗಳವರೆಗೆ ಕಾಯಬೇಕು ? ಹಣವಿಲ್ಲದೆ ಭೂಮಿ ಕಳೆದುಕೊಂಡ ಭೂಮಾಲೀಕ ಎಷ್ಟು ವರ್ಷಗಳ ವರೆಗೆ ಕಾಯಬೇಕು? ಇದು ಸರಿಯಲ್ಲ. ಇದರಿಂದ ಭೂಮಾಲೀಕರಿಗೆ, ಗೇಣಿದಾರರಿಗೆ, ಭೂಹೀನ ರೈತರಿಗೆ, ಕೂಲಿಗಾರರಿಗೆ ತೊಂದರೆಯಾಗುತ್ತದೆ. ನಮ್ಮ ಅಧಿಕಾರ ಉಳಿಯಬೇಕೆಂಬ ದುರುದ್ದೇಶ ಇವರಿಗೆ ಇದೆಯೆಂದು ನನಗರ್ಥವಾಗುತ್ತಿದೆ. ಇನ್ನು ಇವತ್ತಿನ ದಿವಸ 113ನೇ ಸೆಕ್ಷನಿಗೆ ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ಯಾವ ಉದ್ದೇಶದಿಂದ ಮಾಡಿದ್ದಾರೆ ? 113ನೇ ಸೆಕ್ಷನ್ನಿನಲ್ಲಿ ಸಿವಿಲ್ ಪ್ರೊಸೀಜರ್ ಕೋಡ್ ಎಲ್ಲದಕ್ಕೂ ಅನ್ವಯಿಯಾಗುತ್ತದೆಂದು ಹೇಳಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ವಕೀಲರಾದವರು ವಾದಿಸಿದರೆ ಯಾರಿಂದಲೂ ಒಂದು ಆರ್ಡರ್ ಹಾಕಿಕೂತರೇ ಸಾಕು. ಅವರೇ ಹೋಗಿ ನಪ್ಲಸ್ ಲ್ಯಾಂಡ್ ಕಂಪನ್ಸೇಷನ್ ಬಗ್ಗೆ, ರೆಂಟ್ ಬಗ್ಗೆ ರೆಸ್ಯೂಮಬಲ್ ಲ್ಯಾಂಡ್ ಬಗ್ಗೆ ಮತ್ತು ನಾನ್ ರೆನ್ಯೂಮಬಲ್ ಲ್ಯಾಂಡ್ ಬಗ್ಗೆ ವಿಚಾರ ಮಾಡುತ್ತಾರೆ. ಇಂತಹ ಪ್ರಶ್ನೆಗಳು ಇರುವಾಗ ಎಲ್ಲದಕ್ಕೂ ಸಿವಿಲ್ ಪ್ರೊಸೀಜರ್ ಕೋಡ್ ಅಪ್ಲೈಯಾಗಬೇಕೆಂಬ ಹೇಳಿದರೆ ಹೇಗೆ ? ಇದರಿಂದ ಯಾರಿಗೂ ಎಂದು ಏನೂ ಉಪಕಾರವಾಗಬಾರದೆಂದು ಎಂಬ ಅಂಶ ಇವರ ಮನಸ್ಸಿನಲ್ಲಿರಬೇಕು. ರಾಜ್ಯದಲ್ಲಿ ಪ್ರಜಾ ಪ್ರಭುತ್ವ ಹೇಗೆ ಸಾಗಬೇಕು! ಇವರು ಎಲ್ಲರ ಮೂಗಿಗೆ ತುಪ್ಪ ಹಚ್ಚುವಂತೆ ಇದರಲ್ಲಿ ಮಾಡುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದಿಷ್ಟೆ : ಈ 113ನೇ ಸೆಕ್ಷನ್ ಮೊದಲಿದ್ದಂತೆಯೇ ಇರಲಿ. ಅದನ್ನು ಈಗ ತಿದ್ದುಪಡಿ ಮಾಡವುದು ಸಾಧುವಲ್ಲ. ಇನ್ನು ಮಾನ್ಯ ಶ್ರೀ ನಾಗಪ್ಪನವರು 42ನೇ ಸೆಕ್ಷನ್ ನಬ್ ಕ್ಲಾಜ್ (1) ಬಗ್ಗೆ ಹೇಳಿರುವುದು ನನಗಂತೂ ಅರ್ಥವಾಗುತ್ತಿಲ್ಲ. ಇದರಿಂದ ತಮ್ಮ ಅಧಿಕಾರಿಗಳು ಎಷ್ಟರಮಟ್ಟಿಗೆ ಆಕ್ಟ್ ಬಗ್ಗೆ ವಿಚಾರ ಮಾಡುತ್ತಿದ್ದಾರೆ ಮತ್ತು ಅವರಿಗೆ ಎಷ್ಟು ಅನಾದರಣೆ ಇದೆಯೆಂಬುದು ಗೊತ್ತಾಗುತ್ತದೆ. ಇನ್ನು ನಮ್ಮ ಹಿರಿಯರಾದಂಥ ಮಾನ್ಯ ಶ್ರೀ ಸಿದ್ದವೀರಪ್ಪನವರು ಇದರ ಬಗ್ಗೆ ಏನು ಹೇಳಿದರೋ ಅದೂ ನನಗೆ ಗೊತ್ತಿಲ್ಲ. ಇದನ್ನು ಸರ್ಕಾರದವರು ಬಹಳ ವರ್ಷಗಳಿಂದ ತೀರ್ಮಾನ ಮಾಡುವವರಾಗಿದ್ದಾರೆ. ಮಾನ್ಯ ಶ್ರೀ ಜತ್ತಿಯವರು ಇದರ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಕಾನೂನು ಆಗಿ ಇದುವರೆಗೆ ಎಷ್ಟೋ ವರ್ಷಗಳು ಆಗಿದ್ದರೂ ಅದಿನ್ನೂ ಜಾರಿಗೆ ಬಂದಿಲ್ಲ. ಆದನ್ನು ಸರ್ಕಾರದವರು ವಿಚಾರ ಮಾಡಬೇಕು. ಅದರ ವಿಷಯದಲ್ಲಿ ಈ ಸಭೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಬೇಕು. ಭೂಮಿ ಇಲ್ಲದೇ ಇರುವವರಿಗೆ ಭೂಮಿ ಕೊಡುವ ಉದ್ದೇಶವಿದೆಯೇ, ಗೇಣಿದಾರರಿಗೆ ಭೂಮಿ ಕೊಡುವ ಉದ್ದೇಶವಿದೆಯೇ, ಭೂಮಾಲೀಕರಿಗೆ ಕಂಪನ್ಸೇಷನ್ ಕೊಡುವ ಉದ್ದೇಶವಿದೆಯೇ ? ಒಂದು ವೇಳೆ ಆ ರೀತಿ ಉದ್ದೇಶವಿದ್ದರೆ ಅದನ್ನು ಎಷ್ಟು ದಿವಸಗಳಲ್ಲಿ ತೀರ್ಮಾನ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಆದ್ದರಿಂದ ನಾನು ಯಾವ ಸೆಕ್ಷನ್ನನ್ನೂ ಕೂಡ ಇದರಲ್ಲಿ ಒಪ್ಪುವುದಿಲ್ಲ. ಅದರ ಬಗ್ಗೆ ವಿಶದವಾಗಿ ಹೇಳುವ ಪ್ರಶ್ನೆ ಇಲ್ಲ. ಮಾನ್ಯ ಶ್ರೀ ನಾಗಪ್ಪನವರು ಎಲ್ಲಾ ಸೆಕ್ಷನ್ನುಗಳ ಬಗ್ಗೆ ಸ್ಥೂಲವಾಗಿ ಹೇಳಿದ್ದಾರೆ.

(ಶ್ರೀ ಕೆ. ಎಚ್. ರಂಗನಾಥ್)

ಇನ್ನು 36ನೇ ಸೆಕ್ಷನ್‌ನಲ್ಲಿ ವ್ಯಾಲಿಡೇಷನ್ ಮಾಡುವ ಬಗ್ಗೆ ಹೇಳಿದ್ದಾರೆ. ಹೊಸದಾಗಿ ರಾಜ್ಯಗಳು ಪುರುವಾಗುವ ರೀತಿಯಲ್ಲಿ ಈ ತಿದ್ದುಪಡಿಗಳು ಇವೆ. ತಮ್ಮ ಉದ್ದೇಶ ರೈತರಿಗೆ ಉಪಕಾರ ಮಾಡಬೇಕೆಂದಿಲ್ಲ. ತಮ್ಮ ಉದ್ದೇಶವೇನಿದೆಯೆಂಬುದನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಹೇಳಿ ಅದನ್ನು ನಮ್ಮನ್ನೆ ಇಲ್ಲಿ ತೆಗೆದುಕೊಂಡು ಬಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇವರ ಬಗ್ಗೆ ಒಂದು ಆರ್ಡಿನೆನ್ಸನ್ನು ತರುವುದಕ್ಕೆ ಏನು ಆವಶ್ಯಕತೆತ್ತು ? ಹೋದ ಸಾರಿಯೇ ಇದನ್ನು ತಂದಿದ್ದರೂ ಇದುವರೆಗೆ ಏನೂ ಮಾಡುವುದಕ್ಕಾಗಲಿಲ್ಲ. ಇದರಬಗ್ಗೆ ಕಾನೂನು ಮಾಡಿ ಒಂದುವೇಳೆ ಈ ಸಭೆಯಲ್ಲಿ ಬಂದಿದ್ದರೆ ಅದು ಪಾಸಾಗುತ್ತಿತ್ತು. ಈಗ ಆರ್ಡಿನೆನ್ಸ್ ಮುಖಾಂತರ ಕಾನೂನು ಆಗಿದೆ. ಈ ದಿನ ನಾವು ಆರ್ಡಿನೆನ್ಸನ್ನು ರಿಪ್ಲೇಸ್ ಮಾಡುವ ಪರಿಸ್ಥಿತಿಗೆ ಬಂದಿದ್ದೇವೆ. ತಮ್ಮ ಉದ್ದೇಶ ಸರಿಯಾಗಿಲ್ಲ. ಸರ್ಕಾರದವರು ಭೂಮಿ ಇಲ್ಲದೆ ಇರುವ ರೈತರ ಬಗ್ಗೆ ವಿಚಾರ ಮಾಡಿ ಅವರು ಜೀವನವಾಯ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. 35-40 ಕೋಟಿ ರೂಪಾಯಿಗಳ ಪ್ರಶ್ನೆಯನ್ನು ಎತ್ತಿದ್ದಾರೆ. ಅದು ಸಾಧುವಾದುದಲ್ಲ. ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿ ಆ ಹಣವನ್ನು ಅಪ್ಪಯೋಜಕವಾಗಿ ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಡಬೇಡಿ.

ಕೊನೆಯದಾಗಿ ಈ ಮಸೂದೆಯನ್ನು ವಿರೋಧ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ತಿದ್ದುಪಡಿಯನ್ನು ವಿರೋಧಿಸಿ ಅನೇಕರು ಮಾತನಾಡಿದ್ದಾರೆ. ಈಗ ತಾನೇ ಮಾತನಾಡಿದ ಮಾನ್ಯ ಸದಸ್ಯರು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣ ಆಗುವುದಕ್ಕಿಂತ ಮುಂಚೆ, ಪತ್ರಿಕೆಗಳಿಗೆ ಮುಖ್ಯಮಂತ್ರಿಗಳು ಕೊಟ್ಟ ವರದಿ ರಾಜ್ಯದ ರೈತರಿಗೆ ಬಗೆದ ಒಂದು ದ್ರೋಹ ಎಂದು ನಾನು ಸಣ್ಣ ಶಬ್ದದಲ್ಲಿ ಕೇಳುತ್ತೇನೆ. ಈ ಅಧ್ಯಾದೇಶಗಳನ್ನು ತರುವ ಉದ್ದೇಶ ಏನೆಂತ್ಕೋ ನನಗೆ ಗೊತ್ತಿಲ್ಲ. ಲಿಂಕ್ ಪತ್ರಿಕೆ ಹೀಗೆ ಹೇಳಿದೆ: ಈ ಅಧ್ಯಾದೇಶ ತರುವ ಉದ್ದೇಶ "Yielded to the pressure of vested interests to delay and block the implementation of land reforms." ಎಂದು. ಅದು ನಮ್ಮ ಪೇಪರ್ ಅಲ್ಲ. ಇಂಡಿಕೇಟ್‌ನವರ ಪೇಪರ್. ಮುಖ್ಯ ಮಂತ್ರಿಗಳು ಅದನ್ನು ಓದಿರಬಹುದು. ಅದನ್ನು ನಾನು ಪೂರ್ತಿ ಒಪ್ಪುವುದಿಲ್ಲ. ಈ ತಿದ್ದುಪಡಿಯ ಬಗ್ಗೆ ಬಹಳ ಅವಸರ ತೋರಿಸುತ್ತಿದ್ದೀರಿ.

ಅಧ್ಯಕ್ಷರು.—ನಾನು ಅವಸರ ತೋರಿಸುತ್ತಾ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರ ಬಗ್ಗೆ ಏನು ಹೇಳಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು.—ಇದರ ಚರ್ಚೆಗೆ ಎರಡು ಗಂಟೆ ಕಾಲ ಕೊಟ್ಟಿದ್ದಾರೆ. ಅದು ಮುಗಿದಿದೆ.

ಶ್ರೀ ಎಸ್. ಗೋಪಾಲಗೌಡ.—ಶೂನ್ಯ ಗಳಿಗೆಯಲ್ಲಿ ಮುಗಿದುಹೋದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಸಂಕ್ಷೇಪವಾಗಿ ಹೇಳುತ್ತೇನೆ. ಕಟುವಾದ ಪದಗಳನ್ನು ಉಪಯೋಗಿಸುತ್ತೇನೆ.

ಅಧ್ಯಕ್ಷರು.—ಕಟುವಾಗಿ ಮಾತನಾಡಿ ಅಥವಾ ಸಾಫ್ಟ್ ಆಗಿ ಮಾತನಾಡಿ. I am concerned with the time limit which is approved by this House.

ಶ್ರೀ ಎಸ್. ಗೋಪಾಲಗೌಡ.—ಈ 22 ವರ್ಷಗಳಲ್ಲಿ ಈ ದೇಶದ ಜನತೆಗೆ ಅದರಲ್ಲೂ ರೈತರಿಗೆ ಬಗೆದ ದ್ರೋಹ ಭೂಸುಧಾರಣೆಗೆ ಸಂಬಂಧಪಟ್ಟ ಪೊದುಜನೆಯ ದ್ರೋಹ. ಕಾರ್ಮಿಕರಿಗೆ ಬಗೆದದ್ದು ಬೇರೆ ದ್ರೋಹ ಇವೆ. ಅದು ಈಗ ಬೇಡ. ನಮಗೆ ಸ್ವಾತಂತ್ರ್ಯ ಬಂದು 22 ವರ್ಷಗಳಾಯಿತು. ನಾನು ಈಗಾಗಲೇ ಶಿವಮೊಗ ಜಿಲ್ಲೆಯಲ್ಲಿ ಮತ್ತು ಬೇರೆ ಎರಡ್ಮಾ ಕಡೆ ಹೇಳಿದ್ದೇನೆ—"20 ವರ್ಷ ಗೇಣಿಯನ್ನು ನೀವು ಪಾವತಿ ಮಾಡಿದ್ದೀರಿ. ಆದ್ದರಿಂದ ಇನ್ನು ಗೇಣಿ ಕೊಡುವ ಅಂಶ ಇಲ್ಲ. ನೀವು ಉಳುಮೆ ಮಾಡತಕ್ಕಂಥ ಭೂಮಿಗೆ ನೀವೇ ಮಾಲೀಕರು, ಇನ್ನು ಅದನ್ನು ಬದಲಾಯಿಸುವ ತಕ್ಕ ಹಕ್ಕು ಯಾವ ಸರಕಾರಕ್ಕೂ ಇಲ್ಲ" ಎಂಬುದಾಗಿ. ಅಂತಹ ಸರಕಾರ ಬಂದರೆ ನಾವು ಕತ್ತರಿಸಿ ಹಾಕೋಣ ಎಂದು ಹೇಳಿದ್ದೇನೆ. ಇದಕ್ಕೆ ಒಂದು ತಿದ್ದುಪಡಿಯನ್ನು ನಾನು ಸೂಚಿಸುವುದು ಟ್ರಿಬ್ಯೂನಲ್ ಅಲ್ಲ ತಹಸೀಲ್ದಾರರೂ ಅಲ್ಲ. ಅವಕ್ಕೆ ಬದಲಾಗಿ ಸಂಯುಕ್ತ ಸೋಷಿಲಿಸ್ಟ್ ಪಾರ್ಟಿ ಎಂದು.

22 ವರ್ಷಗಳಿಂದ ಕಾದು ಕಾದು ಸಾಕಾಯಿತು. ಹಾದಿಯಲ್ಲಿ ಬಂದವರಿಗೆ ಹೋದವರಿಗೆ ದರಖಾಸ್ತು ಕೊಟ್ಟಿರಿ. ನಾವು ಕೈಯಲ್ಲಿ ಇರುವುದನ್ನು, ಮೈಯಲ್ಲಿ ಇರುವುದನ್ನು ಕೊಟ್ಟು ಅಲ್ಲಿ ಬೇಸತ್ತು ಮಾರ್ಗ ಕಾಣದೆ ನಾವು ಈಪೊತ್ತು ಸ್ವತಂತ್ರ್ಯ ಜೀವಿ ಆಗಿದ್ದೇವೆ. ಸರಕಾರದ ಸಾಗುವಳಿಗೆ ಯೋಗ್ಯವಾದ ಜಮೀನನ್ನು ನಿಮ್ಮ ರೂಲ್ಸ್ ಪ್ರಕಾರ ಹರಿಜನ, ಗಿರಿಜನ ಮತ್ತು ಭೂಹೀನರು ಯಾರು ಯಾರು ಇದ್ದಾರೋ ಅವರಿಗೆ ಹಂಚಿಕೊಟ್ಟಿದ್ದೇವೆ. ಅದಕ್ಕೆ ಪೊಹರು ಹಾಕಿ. ಹಾಕುವುದಿಲ್ಲ ಎಂದರೆ ಅದನ್ನು ತಿರಿಜೆ ಮಾಡುತ್ತೇವೆ. ಪೊಹರು ಹಾಕಿದರೆ ಬದುಕುತ್ತೀರಿ. ಪೊಹರು ಹಾಕುವುದಿಲ್ಲ ಎಂದರೆ ಸಾಯುತ್ತೀರಿ ಎನ್ನುವ ಮಾತನ್ನು ಖಡಾಖಂಡಿತವಾಗಿ ಈ ಸಭೆಯಲ್ಲಿ ಹೇಳುತ್ತೇನೆ.

ಇನ್ನು ಪರಿಹಾರ ಯಾರಿಗೆ ಮತ್ತು ಯಾತಕ್ಕೆ ಎನ್ನುವ ಪ್ರಶ್ನೆ. ಈ ರಾಜ್ಯಾಂಗ ತಿದ್ದುಪಡಿ ಮಾಡಬೇಕು. ಮೂಲಭೂತ ಹಕ್ಕುಗಳಲ್ಲಿ ವಾಕ್ ಸ್ವಾತಂತ್ರ್ಯ ದೇಶದ ಯಾವುದೇ ಭಾಗದಲ್ಲಿ ಹೋಗಲಿ ಅಲ್ಲಿ ವಾಸಮಾಡುವ ಸ್ವಾತಂತ್ರ್ಯ ಯಾವುದೇ ಭಾಷೆ ಮಾತನಾಡುವ ಸ್ವಾತಂತ್ರ್ಯ ಯಾವುದೇ ಮತ ಮತ್ತು ದೇವರನ್ನು ನಂಬುವ ಸ್ವಾತಂತ್ರ್ಯ, ಇತ್ಯಾದಿ ಸ್ವಾತಂತ್ರ್ಯಗಳನ್ನು ಬಿಟ್ಟು ಈ ಆಸ್ತಿಪಾಸ್ತಿಗಳ ಪಟ್ಟಿಯನ್ನು ಮೂಲಭೂತ ಹಕ್ಕುಗಳಿಂದ ಕಿತ್ತು ಹಾಕಬೇಕು ಎಂಬುದಾಗಿ. 1952ನೇ ಇಸವಿಯಲ್ಲಿ ನಾನು ಈ ವಿಧಾನ ಸಭೆಗೆ ಬಂದಾಗ ಹೇಳಿದ್ದೆ. ಈ ಆಸ್ತಿ ಪಾಸ್ತಿಗಳು ಮೂಲಭೂತ ಹಕ್ಕಿನಲ್ಲಿ ಬರುವುದಿಲ್ಲ. ಆದುದರಿಂದ ಮೂಲಭೂತ ಹಕ್ಕಿನಿಂದ ಈ ಆಸ್ತಿಪಾಸ್ತಿಗಳನ್ನು ಮೊದಲು ಬಿಡಿಸಿ. ಆಮೇಲೆ ಬೆಂಗಳೂರು ಪೇಟೆಯಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಅಂತಸ್ತು ಮನೆಗಳು ಇದೆ ಎಂದು ಪುರು ಮಾಡಿ ಆಮೇಲೆ ಉಳಿಮೆ ಮಾಡುವ ಭೂಮಿಗೆ ಹೋಗೋಣ. ಈಗ ನಡೆಯುತ್ತಿರುವ ದೊಡ್ಡ ತಿಕ್ಕಾಟದಲ್ಲಿ ಇಂದಿಕೇಟ್ ಶಕ್ತಿ, ಸಿಂಡಿಕೇಟ್ ಶಕ್ತಿ ನನಗೆ ಗೊತ್ತಿದೆ. ಅವನ್ನು ಬಹಳ ರೀತಿಯಾಗಿ ವಾಖ್ಯಾನ ಮಾಡುತ್ತಿದ್ದಾರೆ. ನಮಾಜುವಾದದಲ್ಲಿ ನಂಬಿಕೆ ಇದ್ದರೆ ನನ್ನನ್ನು ಹಿಂಬಾಲಿಸಿ ಎಂದು ಹೇಳುತ್ತಾರೆ. ಅದು ದೊಡ್ಡ ಮಾತು. ನಾವು ಎಲ್ಲಾ ಅವರನ್ನು ಹಿಂಬಾಲಿಸುತ್ತೇವೆ. ಆದರೆ ಗದೆಯನ್ನು ಕೈಯಲ್ಲಿ ಹಿಡಿದು ಹಿಂಬಾಲಿಸಬೇಕಾಗುತ್ತದೆ. ಅಹಿಂಸೆಯನ್ನು ಇಟ್ಟುಕೊಂಡು ಹಿಂಬಾಲಿಸುವುದಕ್ಕಾಗುವುದಿಲ್ಲ. ಈ ಹೊತ್ತು ಜನತೆಗೆ ಹೊಟ್ಟೆ ಹಸಿವಿನಿಂದ ಮಾಡುವುದಕ್ಕೆ ಕೆಲಸ ಇಲ್ಲದೆ ಹಳ್ಳಿ ಹಳ್ಳಿಯಲ್ಲಿ ಭಿಕ್ಷೆಬೇಡುವ ಸ್ಥಿತಿ ಬಂದಿದೆ. ಅವರು ಹಾಗೆ ಅಹಿಂಸೆಯಿಂದಲೇ ಸತ್ತುಹೋಗುತ್ತಾರೆ ಎಂದು ನಾನು ನಿರೀಕ್ಷೆ ಮಾಡುವುದಿಲ್ಲ. ದೇಶವ ಎಲ್ಲಾ ಕಡೆ ನೋಡಿದ್ದೇನೆ ಎಲ್ಲಾ ಕಡೆ ಓಡಾಡಿದ್ದೇನೆ. ಈ ಒಂದು ಎಚ್ಚರಿಕೆಯನ್ನು ನಾನು ಕೊಡಬಯಸುತ್ತೇನೆ. ಸ್ವಾಮಿ, ನಿಮ್ಮ ತಿದ್ದುಪಡಿ ನೋಡಿ ಬಹಳ ಆನಂದ ಪಟ್ಟೆ, ಕಣ್ಣೀರು ಆನಂದಾಶ್ರು ಇಟ್ಟೆ ಎಂದು ಹೇಳುತ್ತೇನೆ. ಏನು ತಿದ್ದುಪಡಿ ? ಶ್ರೀ ಸಿದ್ದವೀರಪ್ಪನವರು ಹೇಳಿದರು ಎಕರೆಗೆ ಬದಲಾಗಿ ಹೆಕ್ಟಾರ್ ಹಾಕಿದ್ದಾರೆಂದು. ಅದು ಒಂದು ದೊಡ್ಡ ತಿದ್ದುಪಡಿ; ಸ್ಟಾಂಡರ್ಡ್ ಎಕರೆ ಬದಲಾಗಿ ಸ್ಟಾಂಡರ್ಡ್ ಹೆಕ್ಟಾರ್ ದೊಡ್ಡ ತಿದ್ದುಪಡಿ, ಕೋರ್ಟ್ ಎಂದರೆ ಮುನ್‌ಸೀಫ್ ಕೋರ್ಟ್ ದೊಡ್ಡ ತಿದ್ದುಪಡಿ, ಅದಕ್ಕೆ ನಾನು ಹೇಳುವುದು ಕೋರ್ಟ್ ಎಂದರೆ ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿ ಎಂದು ಬರೆಯಿರಿ. ನಾವು ಏನೂ ಯಾರಿಗೂ ಅನ್ಯಾಯ ಮಾಡುವುದಿಲ್ಲ. ನಮಗೂ ಬದಕುವ ಆಸೆ ಇದೆ. ಜನರು ಬದುಕಬೇಕು. ಕೋರ್ಟ್ ಎಂದರೆನಂಯುಕ್ತ ಸೋಷಲಿಸ್ಟ್ ಪಾರ್ಟಿ ಎಂದು ಬರೆಯಿರಿ.

ಅಧ್ಯಕ್ಷರು.—ಆ ರೀತಿ ತಿದ್ದುಪಡಿ ಕೊಡಿ.

ಶ್ರೀ ಎಸ್. ಗೋಪಾಲಗೌಡ —ಇದಕ್ಕೆ ಆಧ್ಯತೆಗಳನ್ನು ಹೊರಡಿಸುವ ಅಗತ್ಯತೆ ತಮಗೆ ಇರಲಿಲ್ಲ. ತಾವು ಮನಸ್ಸು ಮಾಡಿದ್ದರೆ, ಆಗಸ್ಟ್ 15ನೇ ತಾರೀಖು 1947ರಲ್ಲಿ ಸ್ವಾತಂತ್ರ್ಯ ಬಂತು ಎಂದು ಜನಗಣಮನ ಹಾಡಿದಾಗ, ಒಂದೇ ವಾಕ್ಯದಲ್ಲಿ ಸಂಪೂರ್ಣ ಸರಂಜಾಮುಷಾಹಿ ಪದ್ಧತಿಯನ್ನು 24 ಗಂಟೆಗಳಲ್ಲಿ ತೊಡೆದು ಹಾಕಬಹುದಾಗಿತ್ತು, ಮಾಡಲಿಲ್ಲ. 22 ವರ್ಷಗಳಿಂದಲೂ ತೊಡೆದು ಹಾಕುತ್ತಾ ಇದ್ದೀರಿ. ದೇಶದ ಜನ ನಗುತ್ತಾರೆ. ಜಗತ್ತಿನ ಜನ ನಗುತ್ತಾರೆ. ನೀವು ಹೆಂಗಸರೂ ಅಲ್ಲ, ಗಂಡಸರೂ ಅಲ್ಲ. ಈ ರೀತಿ ಸರ್ಕಾರವನ್ನು ಜನತೆ ಸಹಿಸುವುದು ಇನ್ನು ಸಾಧ್ಯವಿಲ್ಲ. ಇನ್ನು ಕಾಂಪೆನ್ ಸೇಷನ್ ಮೊತ್ತ 32 ಕೋಟಿ ರೂಪಾಯಿ ಇದ್ದದ್ದು 40 ಕೋಟಿ ರೂಪಾಯಿ ಆಯಿತು, ಮಾರ್ಕೆಟ್ ರೇಟು ಕೊಟ್ಟರೆ ಅವರೇ ಹೇಳುತ್ತಾರೆ ಇವೇ 60 ಕೋಟಿ ರೂಪಾಯಿ ಆಗುತ್ತದೆ ಎಂದು ಜೊತೆಗೆ ಶರಾವತಿಯಲ್ಲಿ ಜಮೀನು ಮುಳುಗತೆಯಾದ ರೈತರಿಗೆ ಅಲ್ಲಿ ಭೂಮಿ ಕೊಟ್ಟಿದ್ದಾರೆ. ಮರ ಇಲ್ಲದೇ ಇರುವ ಪ್ರದೇಶವನ್ನು ತೋಟ ಆಂಕ ಶ್ಯಾನುಭೋಗ ಪಹಣಿಯಲ್ಲಿ ಬರೆದು ಇದ್ದರೆ ಅದಕ್ಕೆ 18 ಸಾವಿರ ರೂಪಾಯಿತನಕ ಸರ್ಕಾರದ ಬೊಕ್ಕಸದಿಂದ ಹಣವನ್ನು ತೆತ್ತಿದ್ದೇವೆ. ಇದೆಲ್ಲಾ ನಮಗೆ ಗೊತ್ತಿದೆ. ತಾವು ಯಾರಿಗೆ ಉಪಕಾರ ಮಾಡುವುದು ? ಅಧಾರದೇಶ ಹೊರಡಿಸುತ್ತಾ ಇದ್ದೀರಿ. ನಾನು ದುರುದ್ದೇಶದಿಂದ ಆರೋಪ ಮಾಡುತ್ತಾ ಇಲ್ಲ. ತಮಗೆ ತಿಳಿದೋ ತಿಳಿದೆಯೋ ಮಾಡುತ್ತಾ ಇದ್ದೀರಿ. ಇದನ್ನು ತಾವು ಆವಷ್ಟು ಬೇಗ ತಿದ್ದಿಕೊಳ್ಳಬೇಕು.

(ಶ್ರೀ ಎಸ್. ಗೋಪಾಲಗೌಡ)

ಕೊನೆಯದಾಗಿ ನಾನು ಈ ಮುನ್ಸೀಫ್ ಗಿನ್ಸೀಫರುಗಳಿಗೆಲ್ಲಾ ಅಧಿಕಾರ ಕೊಡುವುದಕ್ಕೆ ತಯಾರಾಗಿಲ್ಲ. ಸ್ವ್ಯಾಲನ್ ಅವರು ಯಾವ ವಿಧಾನವನ್ನು ಅನುಸರಿಸಿದರೋ ಆ ರೀತಿ ಮುನ್ಸೀಫ್ ಹಿಂದುಗಡೆ ಒಬ್ಬ ಬಂದೂಕು ಸಿಪಾಯಿ, ತಹಸೀಲ್ದಾರರ ಹಿಂದುಗಡೆ ಒಬ್ಬ ಬಂದೂಕು ಸಿಪಾಯಿ ಬಂದೂಕನ್ನು ಹಿಡಿದುಕೊಂಡು ಹಳ್ಳಿ ಹಳ್ಳಿಗೆ ಹೋಗಿ ಯಾರಾದರೂ ಅಡ್ಡಿ ಬಂದರೆ, ರೈತ ಆಗಿರಬಹುದು, ಗೇಣಿದಾರ ಆಗಿರಬಹುದು, ಭೂಮಾಲಿಕನಾಗಿರಬಹುದು, ಸರ್ಕಾರಿ ನೌಕರ ನಾಗಿರಬಹುದು ಅವನನ್ನು ಅಲ್ಲೇ ಗುಂಡಿಕ್ಕಿ ಕೊಂದು ಆ ಜಮೀನನ್ನು ಇಂಥವನದು, ಇಂಥವನು ಭೂಮಾಲೀಕ ಅಂತ ನಿರ್ಣಯ ಮಾಡಬೇಕು. ಇವತ್ತು ನಾನು ಸ್ವ್ಯಾಲನ್‌ರವರ ವಿಧಾನವನ್ನು ಸ್ವಾಗತಿಸುತ್ತೇನೆ.

Sri S. R. SHANMUGHAM.—Shame! Shame!

ಶ್ರೀ. ಎಸ್. ಗೋಪಾಲಗೌಡ.—ನಿಮಗೆ ಷೇಮು; ಷೇಮು ನಮಗಲ್ಲ, ಅಲ್ಲಿ ಕುಳಿತಿರುವ ನಿಮಗೆ ಷೇಮು. ಸ್ವ್ಯಾಲನ್ ದರಾಯಿನ್ನು ಇವತ್ತು ಹಿಡಿಯಿರಿ, ಈ ಭೂಮಿಯು ವಿತರಣೆ ಮಾಡಿರಿ ಇಲ್ಲವಾದರೆ ಜನರಲ್ ಮ್ಯಾಕಾರ್ಥಿ ಅವರು ಜಪಾನಿನಲ್ಲಿ ತಂದ ರೀತಿಯಲ್ಲಿ ಭೂಮಿಯನ್ನು ಹಂಚಿ. ಕನಿಷ್ಠ 5 ಎಕರೆ, ಗರಿಷ್ಠ 15 ಎಕರೆ ಹಾಗೆ ವ್ಯವಸ್ಥೆ ಮಾಡಿ. ಯಾರಿಗೂ ಹೆಚ್ಚಿಗೆ ಆಗುವುದಿಲ್ಲ. ಗಂಡ ಹೆಂಡತಿ ಉಣ್ಣುತ್ತಾರೆ. ದೇಶಕ್ಕೆ ಅನ್ನ ಕೊಡುತ್ತಾರೆ. ನಾನು ನಿಮ್ಮಂತೆ ಗೇಣಿದಾರ ನಲ್ಲ, ಜಮೀನುದಾರನೂ ಅಲ್ಲ. ಜಹಗೀರಿದಾರನೂ ಅಲ್ಲ. ನನ್ನ ಹಳ್ಳಿಯಲ್ಲಿ ನಾನೂ ಒಬ್ಬನಾಗಿದ್ದೇನೆ ನನ್ನ ಹೊಟ್ಟೆಯಲ್ಲಿ ಇರುವ ಬೆಂಕಿ, ಉರಿ ನಿಮಗೆ ಗೊತ್ತಿಲ್ಲದೇ ಇರಬಹುದು, ಅದು ಬೇರೆ ಮಾತು, ಈ ಮನೂದೆ ತರುವ ಮುಂಚೆ ಎಷ್ಟು ತಿದ್ದುಪಡಿಗಳನ್ನು ಮಾಡಿದಿರಿ? ಎಷ್ಟು ಟ್ರಬ್ಯೂನಲ್‌ಗಳನ್ನು ಮಾಡಿದಿರಿ? ಯಾವಾಗ? ಎಷ್ಟು ಅಧಿಕಾರಿಗಳನ್ನು, ಸಿಬ್ಬಂದಿಯನ್ನು ಅವರಿಗೆ ಕೊಟ್ಟಿರಿ? ಯಾವ ರೀತಿ ಕೆಲಸ ಮಾಡಬೇಕೆಂದು ಹೇಳಿದಿರಿ? ಅವರನ್ನು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಬಿಟ್ಟಿರಾ? ಅವರಿಗೆ ಆದೇಶಗಳನ್ನು ಕೊಟ್ಟಿದ್ದೀರಾ? ರೂಲ್ಸ್‌ಗಳನ್ನು ಯಾವಾಗ ಮಾಡಿದಿರಿ? ಸರ್ವೇ ಯಾವಾಗ ಮಾಡಿದ್ದೀರಿ? ಇವತ್ತು ಹಳ್ಳಿಯಲ್ಲಿ ಸರ್ವೆ ಏನು ಆಗಿದೆ? ತಾವು ದಯವಿಟ್ಟು ಇದನ್ನೆಲ್ಲಾ ನಭೆಗೆ ತಿಳಿಸಬೇಕು. ನಾನು ಈ ವಿಷಯದಲ್ಲಿ ಮಾತನಾಡುವುದಕ್ಕೆ ಹೋದರೆ ನನಗೆ ಸ್ವಲ್ಪ ಕ್ರೋಧವೇ ಹೆಚ್ಚಾಗುತ್ತದೆ. ನಭೆಯಲ್ಲಿ ಅದನ್ನು ತೋರಿಸುವಾದರು, ಜೊತೆಗೆ ಕಾಲವೂ ಇಲ್ಲ. ಅದನ್ನು ನಾನು ಹೇಳುವುದಿಲ್ಲ. ಆದ್ದರಿಂದ ತಾವು ಈ 22 ವರ್ಷದಲ್ಲಿ ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಏನು ಒಂದೇ ನಮಗೆ ದ್ರೋಹ ಬಗೆಯುತ್ತಾ ಇದ್ದೀರಿ ಅದರ ಬಗ್ಗೆ ವಿಷಾದ ವ್ಯಕ್ತ ಪಡಿಸುತ್ತೇನೆ.

ಕೊನೆಯದಾಗಿ ಈ ಒಂದು ವಿಳಂಬವಿಂದ ಸಣ್ಣ ಸಣ್ಣ ಭೂಮಾಲೀಕರು 5 ಎಕರೆ, 3 ಎಕರೆ, 2 ಎಕರೆ, 10 ಎಕರೆ ಇರತಕ್ಕ ಬಡಪಾಯಿಗಳು, ವಿಧವೆಯರು, ಸಣ್ಣ ಮಕ್ಕಳು ಅವರ ಸಂಸಾರ ಸಂಪೂರ್ಣ ನಾಶವಾಗಿದೆ. ರತ್ನಕುಮಾರ ಕಟ್ಟೆಮಾರರು ಗೇಣಿದಾರರು ಒಂದು ನಯೆಪೈಸೆ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಈ ಧಣಿಗಳು, ಜಮೀನ್ದಾರರು ಸರ್ಕಾರಕ್ಕೆ ಕಂದಾಯ ಕೊಟ್ಟೂ ಕೊಟ್ಟೂ ಬಹಳ ಕಷ್ಟದಲ್ಲಿದ್ದೇವೆ ಎಂದು ಹೇಳುತ್ತಾರೆ, ಇರಬಹುದು. ಏನನ್ನೆ ಈ ಧಣಿಗಳು ಬಸರೂರಿನಲ್ಲಿ, ಕುಂದಾಪುರದಲ್ಲಿ ಗೇಣಿದಾರರಿಗೆ ಏನು ಮಾಡಿದ್ದಾರೆ ಎಂಬುದನ್ನು ಸ್ವಲ್ಪ ಹೇಳಲಿ.

ಶ್ರೀ ರತ್ನಕುಮಾರ ಕಟ್ಟಿಮಾರ್.—ಒಂದು ಗಂಟೆ ಟೈಂ ಕೊಟ್ಟರೆ ನಾನೂ ಅವರಿಗೆ ಜವಾಬು ಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಅವರ ಚರಿತ್ರೆ ಬಹಳ ಹೇಳಬಹುದು. ಕಟ್ಟೆಮಾರರವರು ಭೂಮಾಲೀಕರ ಪರವಾಗಿ ವಕಾಲತ್ತು ನಡೆಸಬಹುದು. ಅವರು ಬಂದೂಕು ಇರುವವರು, ಬಂದೂಕು ಇಲ್ಲದವರು ನಾವು ಏನು ಸೈನ್ಯ ಕಟ್ಟಬೇಕು? ಆದರೂ ನಾವು ಭೂ ಸೈನ್ಯ ಕಟ್ಟುತ್ತೇವೆ. ಯಾರು ಉಳುವವನಿಗೆ ಭೂಮಿಯನ್ನು ಬಿಟ್ಟುಕೊಡುವುದಿಲ್ಲವೊ ಅವನು ಅವಕ್ಕೆ ಪ್ರಾಣವನ್ನು ತೆರಬೇಕು. ಈ ತುದಿಗೆ ಬಂದು ಮುಟ್ಟಿದ್ದೇವೆ. ಬಹಳ ದೂರ ಇಲ್ಲ ಆ ಕಾಲ. ಬೇಕಾದರೆ ಅವರು ಜ್ಯೋತಿಷ್ಯರನ್ನು ಹೋಗಿ ಕೇಳಲಿ, ಅವರು ಭವಿಷ್ಯ ಹೇಳುತ್ತಾರೆ. ರತ್ನಕುಮಾರ್ ಕಟ್ಟೆಮಾರ್‌ರವರು ಬಹಳ ಸಂಪತ್ತಿ ಬಂದಿರಬಹುದು, ಅವರು ದೊಡ್ಡ ಧಣಿಗಳು. ನಾನು ಹೇಳುವುದು ಇಷ್ಟೆ. ಆದ್ದರಿಂದ ಭೂಮಾಲೀಕರು ಭೂ ಸೈನ್ಯವನ್ನು ಕಟ್ಟಿ ಉಳುವೆ ಗಾರರನ್ನು ಒಕ್ಕಲೆಬ್ಬಿಸುವುದಾದರೆ, ಉಳುವೆಗಾರರ ಮನೆಗಳನ್ನೂ ಕೆತ್ತು ಹಾಕುವುವಾದರೆ— ಈಗ ಇರತಕ್ಕ ರಾಜ್ಯಾಂಗದ ಪ್ರಕಾರ ಯಾವ ಗಳಿಗೆಯಲ್ಲಿ ಯಾವ ರೈತನನ್ನು ಬೇಕಾದರೂ ಒಕ್ಕ

ಲೆಬ್ಬಿಸಬಹುದು, ಮನೆಯಿಂದ ಹೊರಗಡೆ ಹಾಕಬಹುದು, ಕೇಸು ಹಾಕಬಹುದು ಇತ್ಯಾದಿ ಏನಾದರೂ ಹೇಳುವುದಕ್ಕೆ ಹೋದರೆ ಇವತ್ತು ಈ ದೇಶದಲ್ಲಿ ಅಹಿಂಸಾತ್ಮಕ ರೀತಿಯಲ್ಲಿ ಕ್ರಾಂತಿಯಾಗುವುದಿಲ್ಲ, ರಕ್ತದ ಕ್ರಾಂತಿಯಾಗುವುದರಿಂದಲೇ ಅದು ಸಾಧ್ಯ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಮಬೊರೇಗೌಡ (ಶ್ರೀರಂಗಪಟ್ಟಣ).—ನನ್ನಮ್ಮ ಸಭಾಪತಿಗಳೇ, ಮೈಸೂರು ಭೂಸುಧಾರಣಾ ವಿಧೇಯಕದ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಇದು 25 ವರ್ಷಗಳಲ್ಲಿ ಜನನವಾಗಿದೆ. ಮೈಸೂರು ರಾಜ್ಯ ಸರಕಾರ ಸಾಮಾನ್ಯ ಜನತೆಯ ಬಗ್ಗೆ ಇದೊಂದು ದೊಡ್ಡ ಅನ್ಯಾಯ ಮಾಡಿದೆ ಒಂದು ಅಪಘಾತವಾಗಿದೆ ಎಂದು ಹೇಳಬಹುದು. ಕಾನೂನು ಮಾಡುವಾಗ ಕೋರ್ಟಿಗೆ ಹೋಗುವ ಅವಶ್ಯಕತೆ ಏನು ಇದೆ? ಜಮೀನುದಾರನೇ ಆಗಲಿ ರೈತನೇ ಆಗಲಿ ಕೋರ್ಟಿಗೆ ಹೋದರೆ ಸೂತ್ತ ಕಾಲದಲ್ಲಿ ಅದು ತೀರ್ಮಾನವಾಗುವುದಿಲ್ಲ, ಅದಕ್ಕೆ ಶತಮಾನ ಕಾಲ ಆಗಬಹುದು. ಈ ಭೂಸುಧಾರಣಾ ಕಾನೂನಿಂದ ಸಾಯುವುದಿಲ್ಲ ಬದುಕುವುದಿಲ್ಲ. ಹಾಗೆ ಆಗಿದೆ. ಈ ತಿದ್ದುಪಡಿ ತಂದಿರುವುದು ಆಳಿಯನಲ್ಲ ಮಗಳ ಗಂಡ ಎಂದು ಹೇಳಿದ ಹಾಗೆ ಆಗಿದೆ. ಈ ತಿದ್ದುಪಡಿಯಿಂದ ಯಾರಿಗೂ ತೃಪ್ತಿಯಾಗುವುದಿಲ್ಲ. ಕಾನೂನು ಜಾರಿ ಮಾಡುವುದರಲ್ಲಿ ಸರಕಾರಕ್ಕೆ ದಕ್ಷತೆ ಇಲ್ಲ. ಚುನಾವಣೆಯ ಕಾಲದಲ್ಲಿ ಭೂಸುಧಾರಣೆ ಮಾಡುತ್ತೇವೆ ಎಂದು ಜನತೆಗೆ ಆಶ್ವಾಸನೆ ಕೊಡುತ್ತೀರಿ. ಭೂ ಕಂದಾಯ ರದ್ದು ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ಅಧಿಕಾರಕ್ಕೆ ಬಂದ ಮೇಲೆ ವಾತಾವರಣ ಬೇರೆಯಾಗುತ್ತದೆ. ಇದರಿಂದ ಜನ ಸಾಮಾನ್ಯರ ರಕ್ಷಣೆಯಾಗುವುದಿಲ್ಲ, ಜನತೆಗೆ ಶ್ರೇಯಸ್ಸು ಆಗುವುದಿಲ್ಲ. ಇದರಲ್ಲಿ ಸರಕಾರದ ಧ್ಯೇಯ ಸರಿಯಾಗಿಲ್ಲ. ಕೂಲಿಕಾರರನ್ನಾಗಲೀ ಜಮೀನುದಾರನ್ನಾಗಲೀ ಕೋರ್ಟಿಗೆ ಹೋಗದಂತೆ ಕಾನೂನು ತರಬೇಕು. ಕಾನೂನಿಂದರೇ ಎಲ್ಲವನ್ನೂ ಬಗೆಹರಿಸಬೇಕು. ಕಳೆದ 2½ ವರ್ಷಗಳಿಂದ ಶ್ರೀರಂಗಪಟ್ಟಣದ ಕೋರ್ಟಿನಲ್ಲಿ ಆರೇಳು ಸಾವಿರ ಕೇಸುಗಳು ಪೆಂಡಿಂಗ್ ಇವೆ. ಒಂದು ಕೋರ್ಟು ಮಾಡಿದ್ದಾರೆ, ಅಲ್ಲಿ, 200 ಜಡ್ಜ್‌ಮೆಂಟ್ ಮಾಡಿರಬಹುದು. ಆದರೆ ಇನ್ನೂ ಆರು ಸಾವಿರ ಕೇಸುಗಳು ಕೋರ್ಟಿನಲ್ಲಿ ಇವೆ. ಇಪ್ಪಗಳನ್ನು ತೀರ್ಮಾನ ಯಾವಾಗ ಮಾಡುತ್ತಾರೆ? ಗೇಣಿದಾರರಿಗೆ ಪರಿಹಾರ ಇಲ್ಲ. ಈ ತಿದ್ದುಪಡಿ ಮಸೂದೆಯಲ್ಲಿ ಉಪಯೋಗಿಸಿರುವ ಕನ್ನಡ ಪದಗಳ ಅರ್ಥವೇ ಆಗುವುದಿಲ್ಲ. ಎಲ್ಲರಿಗೂ ಅರ್ಥವಾಗುವ ಪದಗಳನ್ನು ಉಪಯೋಗಿಸಬೇಕಾಗಿತ್ತು. ಈ ಭೂಸುಧಾರಣಾ ತಿದ್ದುಪಡಿಯಿಂದ ಯಾರಿಗೂ ಪ್ರಯೋಜನವಾಗಲಾರದು. ಈ ತಿದ್ದುಪಡಿಯಿಂದ ನಮ್ಮವರಿ ದೊರೆಯುವುದಿಲ್ಲ. ಆದುದರಿಂದ ಸರಕಾರದವರು ಈ ತಿದ್ದುಪಡಿ ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ಈ ಶಾಸನಸಭೆಯ ಎಲ್ಲಾವರ್ಗದ ಜಮೀನ್‌ದಾರರಿಗೆ ಮತ್ತು ರೈತರಿಗೆ ಸರಿಸಮಾನವಾದ ಒಂದು ಮಸೂದೆಯನ್ನು ತರಬೇಕೆಂದು ಒತ್ತಾಯ ಮಾಡುತ್ತೇನೆ. ಕೋರ್ಟಿಗೆ ಹೋಗಿ ಕಷ್ಟ ಕಾರ್ಪಣ್ಯ ಪಡುವುದನ್ನು ತಪ್ಪಿಸಬೇಕು. ಈ ಭೂ ಸುಧಾರಣೆ ಮಸೂದೆಯನ್ನು ವಿರೋಧಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಜೊಮ್ಮಾಯಿ (ಕುಂದಗೋಳ).—ಮಾನ್ಯ ಸಭಾಪತಿಗಳೇ, ಈಗ ತಂದಂಥ ಮಸೂದೆಗೆ ಅನುಮೋದನೆ ಮಾಡುತ್ತಾ ಕೆಲವು ಮಾತು ಹೇಳಿ ಬಯಸುತ್ತೇನೆ. ಉಳು ವವನೇ ಭೂಮಿಯ ಒಡೆಯ ಎಂಬ ತತ್ವವನ್ನು ಅಂಗೀಕರಿಸಿ ಬಹಳ ವರ್ಷವಾಯಿತು. ಆದರೂ ಕೂಡ ಮುಂದಗತಿಯಲ್ಲಿ ಇದು ನಡದಿದೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ 1937ನೇ ಇಸವಿಯಲ್ಲೇ ಈ ಕಾನೂನು ಅಮಲಿನಲ್ಲಿ ಬಂದಿದೆ. ಆದರೆ ಈ ರಾಜ್ಯದಲ್ಲಿ 1966 ರಲ್ಲಿ ಒಂದು ಸ್ಪಷ್ಟವಾದ ಕಾನೂನು ಬಂದಿದೆ. ಇದಕ್ಕೆ ಅನೇಕ ತಿದ್ದುಪಡಿಗಳು ಆಗಿವೆ. ಈ ತಿದ್ದುಪಡಿ ಮಸೂದೆಯಲ್ಲಿ ಜನರಿಗೆ ತೀವ್ರ ಪರಿಹಾರ ದೊರೆಯ ಬೇಕೆಂದು ಟ್ರಿಬ್ಯೂನಲ್ಲಿಗೆ ತೀರ್ಮಾನಮಾಡಲು ಅಧಿಕಾರ ಕೊಟ್ಟಿರುವುದು ಸ್ವಾಗತಾರ್ಹವಾಗಿದೆ. ಇದರಿಂದ ತೀವ್ರ ತೀರ್ಮಾನವಾಗಬಹುದು ಎಂದು ಅನಿಸುತ್ತದೆ. ಭೂಮಾಲೀಕರಿಗೆ ಭೂಮಿಯನ್ನು ನಿರ್ದಿಷ್ಟವಾದ ಅವಧಿಯಲ್ಲಿ ತೀರ್ಮಾನ ಮಾಡುವುದು ಅವಶ್ಯಕವಾಗಿದೆ. ಆದುದರಿಂದ ಈ ಬಗ್ಗೆ ಸರಕಾರ ಅವಶ್ಯಕವಾದ ತಿದ್ದುಪಡಿಯನ್ನು ತರಬೇಕೆಂದು ಸೂಚಿಸುತ್ತೇನೆ. ಭೂಮಾಲೀಕರಿಗೆ ಹಣ ತೀವ್ರವಾಗಿ ದೊರೆತು ರೈತ ಮತ್ತು ಭೂಮಾಲೀಕ ಇವರ ಸಂಬಂಧ ಪೂರ್ಣವಾಗಿ ತಪ್ಪಿ ರೈತನೇ ಭೂಮಿ ಒಡೆಯನಾಗ ಬೇಕು. ಇದಕ್ಕೆ ಬೇಕಾಗುವ ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ದೊರಕಿಸಿಕೊಂಡು ಭೂಮಾಲೀಕರಿಗೆ ಕೊಟ್ಟು ರೈತನಿಂದ ಹಂತ ಹಂತವಾಗಿ ವಸೂಲ್ಮಾಡಲು ಕ್ರಮ ತೆಗೆದುಕೊಳ್ಳ ಬೇಕು. ಇವಕ್ಕಾಗಿ ಸೂಕ್ತ ತಿದ್ದುಪಡಿ ಮಾಡುವುದು ಅಗತ್ಯ.

(ಶ್ರೀ ಎಸ್. ಆರ್. ಬೊಮ್ಮಾಯಿ)

ಚಿಕ್ಕ ಹಿಡುವಳಿದಾರರಿಗೆ ಸೂಕ್ತ ಸೌಲಭ್ಯ ದೊರೆಯುವುದಕ್ಕೆ ಅವಕಾಶವಿಲ್ಲ. ಚಿಕ್ಕ ಹಿಡುವಳಿದಾರರು ಭೂಮಿ ತೆಗೆದುಕೊಂಡು ಸಾಗುವಳಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡುವ ತಿದ್ದುಪಡಿ ತರುವುದು ಅವಶ್ಯಕವಾಗಿದೆ. ಚಿಕ್ಕ ಹಿಡುವಳಿದಾರರು ಬಡವರಾಗಿದ್ದಾರೆ. ಅವರು ಸಾಗುವಳಿ ಮಾಡುವುದಕ್ಕೆ ಅವಕಾಶ ಇರಬೇಕು. ಅಂತಹವರ ಸಲುವಾಗಿ ಸ್ವಂತ ಸಾಗುವಳಿ ಮಾಡುವ ಸಲುವಾಗಿ ಇದು ಅತ್ಯಂತ ಅವಶ್ಯ ಎಂದು ಹೇಳಬಯಸುತ್ತೇನೆ. ಅದಲ್ಲದೆ ಈ ಸಮಯದಲ್ಲಿ ಒಂದು ಮಾತು ಹೇಳುವುದು ಅವಶ್ಯ ಎಂದು ನನಗೆ ಅನಿಸುತ್ತದೆ. ಉಳುವವನೇ ಹೊಲದ ಒಡೆಯನಾಗಬೇಕು ಎಂಬುದನ್ನು ಒಂದು ನಿರ್ದಿಷ್ಟವಾದ ದಿನ ಗೊತ್ತುಪಡಿಸಬೇಕು ಇಲ್ಲದೇ ಹೋದರೆ ಬೇಕಾದಷ್ಟು ಪ್ರಕರಣಗಳು ಟ್ರಿಬ್ಯೂನಲ್‌ಗೆ ಹೋಗುತ್ತವೆ. ಈಗ ಇರುವ ಪ್ರಕಾರ ಇತ್ಯರ್ಥ ಮಾಡಬೇಕಾದರೆ 5 ವರ್ಷ ಬೇಕಾಗುತ್ತದೆ. ಮುಂದೆ ಅಪೀಲು ವಗೈರೆ ಹೈಕೋರ್ಟಿಗೆ ಹೋಗುವುದಾದರೆ ಇತ್ಯರ್ಥವಾಗಲು 15 ವರ್ಷ ಬೇಕಾಗುತ್ತದೆ. ಅದಕ್ಕೆ ಸರ್ಕಾರದ ವರು ಒಂದು ನಿರ್ದಿಷ್ಟ ದಿನವನ್ನು ಗೊತ್ತು ಮಾಡಬೇಕು. ಭೂಮಾಲೀಕನಿಗೆ ಕಾಂಪನ್ಸೇಷನ್ ಕೊಡುವುದನ್ನು ನಿರ್ಧರಿಸಬೇಕು. ಉಳುವವನೇ ಭೂ ಒಡೆಯ ನಾಗಬೇಕು ಎಂದರೆ ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ ಆಗಬೇಕು ಇಲ್ಲದೆ ಹೋದರೆ ಯಾವ ಕಾರ್ಯವೂ ಆಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಸರ್ಕಾರದವರು ಈ ಕೆಲಸಗಳನ್ನು ನಿಧಾನವಾಗಿ ಮಾಡಿದರೆ ಸರಿಹೋಗುವುದಿಲ್ಲ. ಇನ್ನೂ ಅನೇಕ ವಿಷಯಗಳ ಬಗ್ಗೆ ಸರ್ಕಾರದವರು ಭೂಮಿ ಹದುಬುವುದರಲ್ಲಿ ಭೂಮಿ ಬೆಲೆ ನಿರ್ಧಾರ ಮಾಡುವ ವಿಷಯದಲ್ಲಿ ಅನೇಕ ಕಾಯಿದೆಗಳನ್ನು ತರಬೇಕಾಗಿದೆ. ಅದನ್ನು ಆದಷ್ಟು ತೀವ್ರವಾಗಿ ತಂದು ಸರ್ಕಾರದವರು ಅನುಕೂಲ ಮಾಡಿ ಕೊಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ನಮ್ಮ ದೇಶದಲ್ಲಿ ಉತ್ತಮವಾದ ಕಾರ್ಯ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ ತ್ವರಿತದಲ್ಲಿ ಕಾರ್ಯ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಜನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರಕ್ಕೆ ಸದಾಕಾಲದಲ್ಲೂ ಪೂರ್ಣವಾಗಿ ರೈತರ ಮೇಲೆ ಕಟ್ಟುಕಣ್ಣು ಇದೆ ಎಂದು ಹೇಳುತ್ತೇನೆ. ಹಳ್ಳಿಗಳಲ್ಲಿ ಒಂದು ಗಾದೆ ಇದೆ. ಮಾರಿಕಣ್ಣು ಹೋತನ ಮೇಲೆ ಎಂದು. ನಮ್ಮ ಸರ್ಕಾರ ಯಾವ ಸುಧಾರಣೆಗಳನ್ನು ತರಬೇಕಾದರೂ ಮೊದಲು ಗುರಿ ರೈತರು, ಆದೂ ಸಣ್ಣ ಹಿಡುವಳಿದಾರರು. ನಾನಾದರೂ ಹೇಳುತ್ತೇನೆ. ಈ ಭೂಸುಧಾರಣೆ ತಿದ್ದುಪಡಿ ತಂದಿರುವುದು ಸಣ್ಣ ಹಿಡುವಳಿದಾರರಿಗೆ ಯಾವ ಅನುಕೂಲಗಳನ್ನೂ ಮಾಡಿಕೊಡುವುದಿಲ್ಲ ಎಂದು. ನಮ್ಮ ರಾಜ್ಯದಲ್ಲಿ ಬಹುವಾಗಿ ಸಣ್ಣ ಹಿಡುವಳಿದಾರರು ಇದ್ದಾರೆ. ಅವರಿಗೆ ಯಾವ ಅನುಕೂಲಗಳನ್ನೂ ಈ ತಿದ್ದುಪಡಿಯಲ್ಲಿ ಸೂಚಿಸಿಲ್ಲ. ಅಲ್ಲದೆ ಯಾವ ಕಾಯಿದೆ ಆದರೂ ಕೂಡ ಲಾಯರುಗಳಿಗೆ ಅನುಕೂಲವಾಗಲಿ ಅನ್ನುವ ಉದ್ದೇಶದಿಂದ ತಿದ್ದುಪಡಿಗಳನ್ನು ತರುತ್ತಾರೆ ಎಂದು ನನಗೆ ಅನ್ನಿಸುತ್ತದೆ. ಯಾವ ತಿದ್ದುಪಡಿಯನ್ನೇ ತರಲಿ ಜನರು ಏನನ್ನು ನಿರೀಕ್ಷಿಸುತ್ತಾರೋ ಅದನ್ನು ನೀವು ಮಾಡುತ್ತಾ ಇಲ್ಲ. ಈ ತಿದ್ದುಪಡಿ ತಂದಿರುವುದನ್ನು ನೋಡಿದರೆ ಸರ್ಕಾರ ಹೆಚ್ಚು ಹೆಚ್ಚು ವ್ಯವಹಾರ ನಡೆಸಲಿಕ್ಕೆ ಏರ್ಪಾಡಿದ್ದಾರೆ ಎಂದು ಹೇಳದೆ ಬೇರೆ ವಿಧಿಯಿಲ್ಲ. ಅವರು ತಂದಿರತಕ್ಕಂಥ 19ನೆಯ ತಿದ್ದುಪಡಿ ಬಗ್ಗೆ ಹೇಳುತ್ತೇನೆ. 19ನೇ ತಿದ್ದುಪಡಿಯಲ್ಲಿ 118 ಎ ನಲ್ಲಿ ಈ ರೀತಿ ಇದೆ :

> "118A. REVIEW BY THE DEPUTY COMMISSIONER.—If the Deputy Commissioner is satisfied that any order passed by the prescribed authority referred to in sub-section (3) of section 8, requires to be reviewed with reference to any new and important matter which has since come to his notice, or on account of some mistake,"

ಈ ರಿವ್ಯೂ ಅಧಿಕಾರವನ್ನು ಡೆಪ್ಯೂಟಿ ಕಮೀಷನರ್ ಅವರಿಗೆ ಕೊಟ್ಟರೆ ಸಣ್ಣ ಹಿಡುವಳಿದಾರರಿಗೇ ಆಗಲಿ, ಗೇಣಿದಾರರಿಗೇ ಆಗಲಿ ಅವರು ಯಾರ ಪ್ರಭಾವಕ್ಕೆ ಒಳಗಾಗುತ್ತಾರೋ ಅಂತಹವರಿಗೆ ಹೆಚ್ಚಿನ ಗೇಣಿ ಲಾಭವನ್ನು ಕೊಡುತ್ತಾರೆ. ಇದರಿಂದ ಅವರು ಹೆಚ್ಚು ಗೇಣಿಯನ್ನು ತೆಗೆದು ಕೊಂಡಾಕ್ಷಣಕ್ಕೆ ವ್ಯವಹಾರಗಳೇನೂ ಕಡಿಮೆಯಾಗುವುದಿಲ್ಲ. ತಿದ್ದುಪಡಿ ತರುವ ಉದ್ದೇಶವಾದರೂ ಕೂಡ ಜನಗಳ ತೊಂದರೆಗಳನ್ನು ತಪ್ಪಿಸುವುದಕ್ಕೆ ತರಬೇಕೇ ಹೊರತು ಹೆಚ್ಚು ಮಾಡುವ ಉದ್ದೇಶದಿಂದ ತರಬಾರದು. ಭೂಸುಧಾರಣೆ ಜಾಗ್ರತೆ ಜಾರಿಗೆ ಬರಬೇಕು ಎನ್ನುವ ಉದ್ದೇಶದಿಂದ

ಇದನ್ನು ತಂದಿಲ್ಲ ಎಂದು ನಾನು ಹೇಳುತ್ತೇನೆ. ಆಲ್ಲದೆ ಈ ಸರ್ಕಾರ ಸಣ್ಣ ಹಿಡುವಳಿದಾರರಿಗೆ ಮಾನವೀಯತೆ ಮತ್ತು ಆರ್ಥಿಕ ದೃಷ್ಟಿಯಿಂದ ಏನು ಸಹಾಯವನ್ನೂ ಮಾಡಿಲ್ಲ. ಭೂಸುಧಾರಣೆಯಾದಲ್ಲಿ ಒಬ್ಬ ಮನುಷ್ಯನಿಗೆ ಸರಾಸರಿ 0·9 ಎಕರೆ ಜಮೀನೂ ಬರುವುದಿಲ್ಲ. ಈ ದಿನ ಭೂಸುಧಾರಣಾ ಕಾನೂನು ಪ್ರಕಾರ 27 ಸ್ಟ್ಯಾಂಡರ್ಡ್ ಎಕರೆ ಮಿತಿ ಇದೆ. ರಾಯಚೂರಿನಲ್ಲಿ 144 ಎಕರೆ, ಅದೇ ಮಂಡ್ಯದಲ್ಲಿ 27 ಎಕರೆ ಜಮೀನು ಮಿತಿ ಬರುತ್ತದೆ. ಅಷ್ಟು ಜಮೀನು ಎಷ್ಟು ಜನಕ್ಕೆ ಸಿಕ್ಕುತ್ತದೆ ? ಒಂದು ಸರಿಯಾದ ವಿವರಣೆಯನ್ನು ತೋರಿಸದಂಥ ಕಾನೂನನ್ನು ಜಾರಿಗೆ ತರಬಾರದು. ಇಂತಹ ಅಸ್ಪಷ್ಟ ಕಾನೂನಿಗೆ ನಾನು ವಿರೋಧವಾಗಿದ್ದೇನೆಂದು ಹೇಳಿತ್ತೇನೆ.

ಇನ್ನು ತಾಸೀಲ್ದಾರರಿಗೆ ಕಾರ್ಯಾಂಗವನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಈ ತಿದ್ದುಪಡಿಯಲ್ಲಿ ಸೂಚಿಸಿದೆ. ಈಗಾಗಲೇ 1, ಲಕ್ಷ 39 ಸಾವಿರ 613 ಕೇಸುಗಳು ಇತ್ಯರ್ಥವಾಗದೇ ಉಳಿದಿದೆ. ಅವನ್ನು ಈ ಕಾರ್ಯಭಾರವನ್ನು ತಹಸೀಲ್ದಾರರಿಗೆ ವಹಿಸಿದರೆ ಇನ್ನೂ ವಿಳಂಬವಾಗುತ್ತದೆ. ಈಗಾಗಲೇ 8-10 ವರ್ಷಗಳಿಂದ ಹೋರಾಡಿದರೂ ಕೇಸುಗಳು ಇನ್ನೂ ಇತ್ಯರ್ಥವಾಗಿಲ್ಲ. ಈ ರೀತಿ ಮಾಡಿದರೆ ಇನ್ನೂ 10–15 ವರ್ಷ ಹಿಡಿಯುತ್ತದೆ. ಮತ್ತು ಸರಕಾರ ಉದ್ದೇಶಿಸಿರುವಂತೆ ಇನ್ನು 2 ವರ್ಷಗಳಲ್ಲಿ ಭೂಸುಧಾರಣೆ ಕಾರ್ಯ ಪೂರ್ಣಗೊಳಿಸಲಾಗುವುದಿಲ್ಲ. ಸರಕಾರ ಇದನ್ನೆಲ್ಲಾ ಮಾಡುತ್ತಾ ಇರುವುದು ಚುನಾವಣೆಯ ಒಂದು ಅನುಕೂಲಕ್ಕಾಗಿ ಎಂದು ನಾನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾನ್ಕರಶೆಟ್ಟಿ (ಕಾಪು).— ಸ್ವಾಮಿ, ಈ ಮಾನ್ಯ ಸಭೆಯು ಮುಂದಿರುವ ಭೂಸುಧಾರಣಾ ತಿದ್ದುಪಡಿಗೆ ನಾನು ವಿರೋಧಿಸುತ್ತೇನೆ ಮತ್ತು ಇದರ ಬಗ್ಗೆ ಒಂದೆರಡು ವಿಷಯಗಳನ್ನು ಸೂಚಿಸಲಿಕ್ಕೆ ಬಯಸುತ್ತೇನೆ.

ಈ ಭೂಸುಧಾರಣೆಯನ್ನು ತ್ವರಿತಗೊಳಿಸಿ ಅದರಿಂದ ಭೂಮಿಯನ್ನು ಗೇಣಿದಾರರಿಗೆ ಆದಷ್ಟು ಜಾಗ್ರತೆ ಕೊಡಬೇಕೆನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ ಎಂದು ಹೇಳಿದ್ದಾರೆ. ಆದರೆ ಈ ತಿದ್ದುಪಡಿಯಲ್ಲಿ ಹೇಳುವಂತೆ ಗೇಣಿದಾರರಿಗೆ ಭೂಮಿ ಮಾಲೀಕತ್ವ ಸಿಕ್ಕಬೇಕಾದರೆ ಇನ್ನೂ ತಡವಾಗುತ್ತದೆ ಎಂದು ನನ್ನಲ್ಲಿ ಅನುಮಾನವಾಗಿದೆ. ಹಿಂದೆ ಮಾನ್ಯ ಸದಸ್ಯರು ಹೇಳಿದ ಹಾಗೆ ಇಷ್ಟರವರೆಗೆ ಇದ್ದ ಎಕರೆ ರೆಕ್ಯಾಚಾರ ಇನ್ನು ಮೇಲೆ ಹೆಕ್ಟಾರಿಗೆ ಪರಿವರ್ತನೆ ಆಯಿತು, ಆಮೇಲೆ ಮೆಟ್ರಿಕ್ ಟನ್ ಪದ್ಧತಿ ಜಾರಿಗೆ ತರುತ್ತೇವೆ ಎಂದು ಒಂದು ತಿದ್ದುಪಡಿ ತಂದಿದ್ದು ಆಯಿತು. ನೀವು ಆಗಾಗ್ಗೆ ತಿದ್ದುಪಡಿಗಳನ್ನು ತರುವುದು, ಅಧಿಕಾರಿಗಳಿಗೆ ಮತ್ತಷ್ಟು ಅಧಿಕಾರವನ್ನು ಕೊಡುವುದು ನಿಮ್ಮದೊಂದು ವೈಶಿಷ್ಟ್ಯ. ಹೆಕ್ಟಾರ್ಸ್ ಮತ್ತು ಮೆಟ್ರಿಕ್ ಪದ್ಧತಿಯಿಂದಾಗಿ ಗೇಣಿದಾರರಿಗೆ ತೊಂದರೆಯಾಗುತ್ತದೆ. ಯಾವ ಅನುಕೂಲವೂ ಆಗುವುದಿಲ್ಲ. ಆದಷ್ಟು ಬೇಗ ಈ ಭೂಸುಧಾರಣೆ ಜಾರಿಗೆ ತರಬೇಕು ಎನ್ನುವುದು ಕನಸಿನ ಮಾತು ಅದೀತು ಎಂದು ನಾನು ಹೇಳಬಯಸುತ್ತೇನೆ.

ಸ್ವಾಮಿ, 1947ನೇ ಇಸವಿಯಲ್ಲಿ ನಮಗೆ ಸ್ವರಾಜ್ಯ ಸಿಕ್ಕಿದರೂ ಕೂಡ ಸರ್ಕಾರದವರು ಇಂದಿನ ತನಕ ಉಳುವವನೇ ಭೂಮಿ ಒಡೆಯನಾಗಬೇಕು, ಭೂಸುಧಾರಣೆ ಜಾರಿಗೆ ತರುತ್ತೇವೆ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಚುನಾವಣೆಯಲ್ಲೂ ಕೂಡ ಹೇಳಿದ್ದಾರೆ. 1956 ರಲ್ಲಿ ಜತ್ತಿ ಸಮಿತಿ ನೇಮಕವಾಯಿತು. 1957 ರಲ್ಲಿ ಆ ಸಮಿತಿಯವರು ರಿಪೋರ್ಟ್ ಕೊಟ್ಟರು. 1961 ರಲ್ಲಿ ಇದಕ್ಕೆ ಭೂಸುಧಾರಣೆ ಕಾನೂನು ಮಾಡಿದ್ದಾರೆ. ಇಷ್ಟಾದರೂ ಕೂಡ ಅಲ್ಲಿಂದ ಇಲ್ಲಿಯವರೆಗೂ ಎಷ್ಟು ಪ್ರಗತಿ ಸಾಧಿಸಿದ್ದಾರೆ, ರೆಕ್ಯಾಚಾರ ಹಾಕಿ ನೋಡಲಿ. ಈಗ ಕಾನೂನು ಮಾಡಿದ್ದೀರಲ್ಲಾ ಅದರಲ್ಲಿ ಎಷ್ಟು ಪ್ರಗತಿ ಸಾಧನೆ ಮಾಡಿದ್ದಾರೆ ? ಈಗ ಕೇಸುಗಳು ಎಷ್ಟೋ ಉಳಿದಿವೆ. ಇದನ್ನು ತೀರ್ಮಾನ ಮಾಡಲಿಕ್ಕೆ ಮುನ್ಸೀಫರಿಗೆ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಈಗ ಇರುವ ಕೋರ್ಟುಗಳು ಕೆಲಸ ಮಾಡುತ್ತಾ ಇರುವುದನ್ನು ನೋಡಿದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಟ್ರಿಬ್ಯೂನಲ್ ಕೋರ್ಟು ನಿದ್ದೆ ಮಾಡುತ್ತಾ ಇದೆ. ಅಲ್ಲ ಏನಾಗಿದೆ ಎಂದರೆ ಹೈಕೋರ್ಟಿನಲ್ಲಿ ಗೇಣಿವಿಚಾರದಲ್ಲಿ ಕೇಸನ್ ವಜಾ ಆಗಿವೆ ಅವರಿಗೆ ಪುನಃ ಗೇಣಿ ನಿರ್ಣಯ ಮಾಡಲಲ್ಲ. ಈಗ ಇರುವ ಕೋರ್ಟು ಯಾವ ಕೆಲಸಗಳನ್ನೂ ಮಾಡದೆ ಸುಮ್ಮನೆ ಕುಳಿತಿದೆ. ಹೀಗಿರುವಾಗ ಇಂತಹ ಕಾನೂನನ್ನು ತಂದು ಜನರನ್ನು ವಂಚಿಸುವ ಬದಲು ನಾವು ಭೂಸುಧಾರಣೆಯನ್ನು ಜಾರಿಗೆ ತರುವುದಿಲ್ಲ ಎಂದು ಹೇಳುವುದು ಉತ್ತಮ. ಏಕೆಂದರೆ ಎಲ್ಲಾ ಕಾಲದಲ್ಲಿಯೂ ಎಲ್ಲರನ್ನೂ ವಂಚಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇಂದು ಸರಕಾರದ ನೀತಿ ಹೇಗಿದೆ ಎಂದರೆ ಕೆಲಸ ಮಾಡದೇ ಬರೀ ಪೂರ್ಣ ನಟನೆಯಲ್ಲಿ ಸಾಗುತ್ತಿದೆ.

(ಶ್ರೀ ಬಿ. ಭಾನ್ಮರ ಶೆಟ್ಟಿ)

ಜನರನ್ನು ಸುಧಾರಣೆ ಮಾಡುವುದಕ್ಕಾಗಿ ದೇಶದಲ್ಲಿ ಬೇಗನೆ ಭೂಸುಧಾರಣೆ ತರುತ್ತೇವೆ ಎಂದು ಬಾಯಲ್ಲಿ ಹೇಳುತ್ತಿದ್ದಾರೆ. ಕೃತಿಯಲ್ಲಿ ಏನನ್ನೂ ಮಾಡುತ್ತಿಲ್ಲ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ರತ್ನಕುಮಾರ್ ಕಟ್ಟೆಮಾರ್ ಅವರು ಈ ಬಿಲ್ಲಿನ ಬಗ್ಗೆ ಹೇಳುತ್ತಾ ಇದರಲ್ಲಿ ಬಹಳ ಬಡ ಜನರಾದ ಹೆಂಗಸರು ಅದರಲ್ಲೂ ವಿಧವೆಯವರು ಯಾವ ರೀತಿ ಸಂಕಟಪಟ್ಟು ಕಷ್ಟದ ನೋವುಗಳನ್ನು ಅನುಭವಿಸುತ್ತಿದ್ದಾರೆ ಎನ್ನುವುದನ್ನು ಹೇಳಿದರು. ಅವರು ಹೇಳುವಂತೆ ಭೂಮಾಲೀಕರಾಗಿರುವ ಹೆಂಗಸರಿಗೆ 1965ನೇ ಇಸವಿಯಿಂದ ಇಲ್ಲಿಯವರೆಗೂ ಅವರಿಗೆ ಸಲ್ಲಬೇಕಾದ ಗೇಣಿ ಸಿಗಲಿಲ್ಲ ಎಂದು ತಿಳಿದು ಬರುತ್ತಿದೆ. ಹೀಗಾದರೆ ಅವರು ಜೀವನ ಮಾಡುವುದಾದರೂ ಹೇಗೆ! ಇನ್ನೂ ಅಲ್ಲಿ ಯಾವ ರೀತಿ ದೆಂಟು ಕೊಡಬೇಕು ಎನ್ನುವುದೇ ನಿರ್ಧಾರವಾಗಿಲ್ಲ. ಇದರಲ್ಲಿ ಇಂತಹ ಬಡ ಹೆಣ್ಣು ಮಕ್ಕಳಿಗೆ ಹಾಗೂ ವಿಧವೆಯರಿಗೆ ಗೇಣಿ ಕೊಡುವಾಗ ಶೇಕಡಾ 50 ರಷ್ಟು ಕೊಡಬೇಕೆಂದು ಇದರಲ್ಲಿ ಮಾಡಿದರೆ ಇಂತಹ ಜನಕ್ಕೆ ತುಂಬಾ ಉಪಕಾರವಾಗುತ್ತದೆ. ಇಲ್ಲದೇ ಇದ್ದರೆ ಇವರಿಗೆ ಬರುವ ಗೇಣಿಯೂ ಹೋಗುತ್ತದೆ ಮತ್ತು ಈ ಜನ ಬಹುಕಷ್ಟ ಪಡಬೇಕಾಗುತ್ತದೆ ಇಂತಹ ಒಂದು ಸಹಾಯವನ್ನು ಅನಾಥರಿಗೆ ವಿಧವೆಯಾದವರಿಗೆ ಸೌಲಭ್ಯ ಕಲ್ಪಿಸಲು ಇದರಲ್ಲಿ ಅನುಕೂಲ ಮಾಡಿಕೊಡಬೇಕು. ಇಂತಹ ಒಂದು ವಿಶಿಷ್ಟ ರೀತಿಯ ಸೌಲಭ್ಯವನ್ನು ಸರಕಾರ ಮಾಡಬೇಕು ಎಂದು ಹೇಳುತ್ತೇನೆ. ನಮಗೆ ಜತ್ತಿಯವರ ರಿಪೋರ್ಟಿನಂತೆ ಮೈಸೂರು ರಾಜ್ಯದಲ್ಲಿ ಒಟ್ಟು 2,67,76,797 ಎಕರೆಯಷ್ಟು ಭೂಮಿ ಇದೆ. ಇದರಲ್ಲಿ 61,36,173 ಎಕರೆಗಳಷ್ಟು ಗೇಣಿಯಲ್ಲಿದೆ. ಇದರಲ್ಲಿ ಸೌತ್ ಕ್ಯಾನರಾದಲ್ಲಿ ಸುಮಾರು 9,41,195 ಎಕರೆಗಳಷ್ಟು ಗೇಣಿದಾರರಿದ್ದಾರೆ. ಎಂದರೆ ದಕ್ಷಿಣ ಕನ್ನಡದ ಶೇಖಡಾವಾರು 67.86 ಎಂದು ಬರುತ್ತದೆ. ಇದನ್ನು ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಚ್ಚು ಜನ ಗೇಣಿದಾರರು ಇದ್ದಾರೆ ಎನ್ನುವುದು ಇದರಲ್ಲಿ ಗೊತ್ತಾಗುತ್ತದೆ. ಈಗ ಇಲ್ಲಿ ಇಂತಹ ಒಂದು ಕಾನೂನಿನ ಸಂಕೋಲೆಗೆ ಇವರನ್ನೆಲ್ಲಾ ತಂದು ಕಟ್ಟುತ್ತಿದ್ದೀರಿ. ಇದರಿಂದ ಧಣಿ, ಒಕ್ಕಲುತನ ಮಾಡುವವರಿಗೆ ಹಾಗೂ ಗೇಣಿದಾರರಿಗೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಆದಷ್ಟು ಬೇಗ ಒಂದು ತೀರ್ಮಾನವನ್ನು ಸರ್ಕಾರ ನಿರ್ಧಾರ ಮಾಡಿ ಸಹಾಯ ಮಾಡಬೇಕಾದುದು ಅಗತ್ಯ. ಇದೂ ಅಲ್ಲದೆ ಇಲ್ಲಿರುವ ರೈತರಿಗಾಗಿ ರಾಷ್ಟ್ರೀಕರಣವಾಗಿರುವ ಬ್ಯಾಂಕುಗಳ ಮೂಲಕ ಸಾಲವಾಗಿ ಪಡೆದು ರೈತರಿಗೆ ಹಂಚಬೇಕು ಎಂದು ಮಾಡಿ ಅವರ ಮೇಲೆ ಶೇಕಡಾ 8 ರಷ್ಟು ಇಲ್ಲವೇ ಹತ್ತರಷ್ಟು ಬಡ್ಡಿ ಅವರ ಮೇಲೆ ಹೊರಿಸುವುದಾದರೆ ಒಕ್ಕಲುತನ ಮಾಡುವ ರೈತರಿಗೆ ಇದನ್ನು ಕೊಡುವುದು ಎಂದರೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಸರಕಾರದ ನೀತಿ ಏನಿದೆ ಎನ್ನುವುದನ್ನು ಇಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳುತ್ತೇನೆ. ಈ ರೀತಿ ಬಡ ಗೇಣಿದಾರರ ಮೇಲೆ ಹಾಗೂ ರೈತರ ಮೇಲೆ ಹೆಚ್ಚು ಬಡ್ಡಿ ಹೊರೆ ಹೊರಿಸಿ ಹಣವನ್ನು ವಾಪಸು ಕೊಡಬೇಕೆಂದರೆ ಅದನ್ನು ಕೊಡಲು ಸಾಧ್ಯವಾಗುವುದಿಲ್ಲ. ಹೀಗೆ ವಿಪರೀತವಾಗಿ ಜನರ ಮೇಲೆ ಹೊರೆ ಹೊರಿಸುವುದಾದರೆ ಮುಂದೆ ಜನ ದಂಗೆ ಎದ್ದಾರು. ಹೀಗೆ ಜನ ದಂಗೆ ಏಳಲು ಅವಕಾಶ ಕೊಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri V. N. PATIL (Humnabad).—Sir, I am happy because an honest attempt has been made by the Government in bringing this measure. They are honest enough to express in so many words that they are going to this extent and not beyond this to help the landless class and to decide the rent matters pending between the landlords and tenants. In the Governor's Adress it is stated as follows :

> "In order to quicken the adjudication of resumption applications, rent recovery applications, etc., pending before the Tribunals, the total number of Courts to deal with these applications has been augmented considerably. Further, such of the functions of the Tribunals as were of purely executive character, have now been delegated to the executive machinery of the Revenue Department. These changes were brought about by an amendment promulgated as an Ordinance on 2nd January 1970."

So, there is no intention on the part of the Government to bring in a progressive land legislation, and it is only to help the landless class that they have brought forward this amending Bill. I am very happy and I feel that the Hon'ble Minister for Revenue must also be happy.

Immediately after the promulgation of the Ordinance and after the introduction of the Bill, the Hon'ble Chief Minister, while giving a statement to the Press, said that in order to help the tenants, the poor agriculturists and to pay the compensation amount to the landlords they have secured the help of the nationalised Banks. I would like to ask the Hon'ble Chief Minister and the Hon'ble Minister for Revenue, through the Chair whether by paying compensation amount they are helping the tenants or the landless class. In our area, there is the Inam Abolition Act and the Jahgir Abolition Act. As per these Acts immediately the land vests with the Government, the Government grants 10 instalments for payment of the amount whereas here in the name of bringing a progressive land legislation, our Chief Minister is seeking the help of the Banks to give the amount in lumpsum, for which the interest has to be paid by the tenant, and instead of paying in ten instalments, he is bound to pay the entire amount within a year. This amount will go in the hands of the landlord, who is already blessed with thousands of acres of land. In this way our Government is shedding crocodile tears in the name of the tenants.

The policy of the Central Government is that we must distribute the land within a year. If we fail to bring progressive legislation and if we fail to distribute the land there will be a revolution. Here, our Minister says: "let us go with patience and slowly" and this speed requires at least 5 years I do not know whether the present Government continues for 5 years. Why don't you take up a legislation to fulfil the promise within 1970? If at all the Government were to survive till 1972, bring in a legislation within 1972. It is bogus to say that they will distribute the land within 5 years and solve the problem. Our Government has failed in this respect. About the decimal system, the Government has published several tables and the diaries also contain these tables. There are other Acts also like the Mysore Land Revenue Act, the Record of Rights Act, etc. The legislation that is brought forward serves the purpose of only a few by prolonging the period of vesting the land in the Government. Sir, in Kerala, within a period of about 1½ months, thirty to forty thousand acres of land was distributed. But, here, we are yet to receive information about the land we have to distribute among the people and who are the people that are holding the land. There is no reply for that. I have received several replies from the Hon. Minister saying that in due course those statements will be placed on the table of this House. I request the Hon. Minister to remember the class from which he comes – he comes from the agriculturists class, from a rural folk, an agriculturist class. Therefore let him volunteer himself first and be a model to others. Let

(SRI V. N. PATIL)

the Hon. Minister fix a target saying that by 31st December 1970 and before the budget session 1971 we are going to distribute the lands. This is very necessary.

Mr. SPEAKER.—Since this Bill has to be completed to-day itself, I want to know from the House, whether the time of the sitting could be extended by two hours *i.e.*, up to 8-00 P.M.

HON. MEMBERS.—Yes.

[MR. DEPUTY SPEAKER in the Chair]

†ಶ್ರೀ ಕೆ. ಪ್ರಭಾಕರ್ (ವರ್ತೂರ್).—ಮಾನ್ಯ ಅಧ್ಯಕ್ಷರೇ, ಮೈಸೂರು ಭೂಸುಧಾರಣಾ ಕಾನೂನು ತಡವಾಗಿ ಕುಂಟು ಹೆಜ್ಜೆ ಇಡುತ್ತಾ ಬರುತ್ತಿದೆ. ಈ ಕಾನೂನನ್ನು ಜಾಗ್ರತೆ ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರದವರು ರಾಜ್ಯಸರ್ಕಾರಕ್ಕೆ ತಿಳಿವಳಿಕೆ ಕೊಡಬೇಕಾದಂಥ ಪರಿಸ್ಥಿತಿ ಬಂದಿದೆ ಎಂಬ ಶಂಕೆ ಕೆಲವರ ಮನಸ್ಸಿನಲ್ಲಿ ಇದೆ. ಭೂಸುಧಾರಣಾ ಕಾನೂನು ಜಾರಿಗೆ ಬರುತ್ತದೆ ಎಂಬ ಮಾತನ್ನು ಭೂಮಿ ಇಲ್ಲದವರು ಕೇಳಿದರೆ ಅವರಿಗೆ ಬಾಯಲ್ಲಿ ನೀರು ಬರುವಂತೆ ಆಗುತ್ತದೆ. ಏಕೆಂದರೆ ಅವರಿಗೆ ಭೂಮಿ ಸಿಗುತ್ತದೆ ಎಂಬ ಕಾರಣದಿಂದ. ಸರ್ಕಾರದ ಬಳಿ ಹಂಚುವಂತಹ ಭೂಮಿ ಎಷ್ಟಿದೆ ಎಂಬ ಬಗ್ಗೆ ಜತ್ತಿ ಕಮಿಟಿಯನ್ನು ನೇಮಕಮಾಡಲಾಗಿತ್ತು. ಆ ಕಮಿಟಿಯವರು ಬಹಳ ಶ್ರದ್ಧೆಯಿಂದ ವರದಿಯನ್ನು ತಯಾರಿಸಿದರು. ಆದರೆ ಅದು ನೀರು ಪಾಲಾಗಿದೆ. ಸರ್ಕಾರದವರು ಅಷ್ಟು ಜಮೀನು, ಇಷ್ಟು ಜಮೀನು ಇದೆ ಎಂದು ರೆಕ್ಕ ಕೊಡುತ್ತಾ ಬಂದಿದ್ದಾರೆಯೇ ಹೊರತು ಅದನ್ನು ಹಂಚುವ ಕೆಲಸ ಮಾಡುತ್ತಿಲ್ಲ. ಭೂಸುಧಾರಣೆ ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಭೂಸುಧಾರಣೆ ಎಂದರೆ ಈ ಸರ್ಕಾರದವರು ಕರಿ ಭೂಮಿಯನ್ನು ಬಿಳಿಭೂಮಿ ಮಾಡುತ್ತಾರೆಂದು ಕಾಣುತ್ತದೆ. ಭೂಸುಧಾರಣೆಯಿಂದ ಉಳುವವನಿಗೆ ಭೂಮಿ ಸಿಗುತ್ತದೆಯೇ ಎಂದು ಕೇಳಿದರೆ ಒಂದು ರೂಪದಲ್ಲಿ ಇಲ್ಲ ಎಂದು ಹೇಳಬೇಕಾಗಿದೆ. ಸಾದಾ ಎಕರೆ ಇದ್ದರೆ ಚೆನ್ನಾಗಿರುವುದಿಲ್ಲ ಎಂದುಕೊಂಡು ಸ್ಯಾಂಡರ್ಡ್ ಎಕರೆ ಎಂದು ಮಾಡಿದರು. ಭೂಸುಧಾರಣೆಯ ಬಗ್ಗೆ ಹೆಚ್ಚಿನ ಅಭಿಮಾನ ಇಟ್ಟುಕೊಂಡಿದ್ದ ಹಿಂದಿನ ರೆವಿನ್ಯೂ ಮಂತ್ರಿಗಳಾದ ಶ್ರೀಯುತ ಕಡಿದಾಳ್ ಮಂಜಪ್ಪನವರು ಸಹ ಸಾದಾ ಎಕರೆಯೇ ಇರಲಿ ಎಂದು ಹೇಳಿದ್ದರು. ಆದರೆ ಈಗಿನ ಸರ್ಕಾರದವರು ಟೆಕ್ನಿಕಲ್ ಆಗಿ ಸ್ಯಾಂಡರ್ಡ್ ಎಕರೆ ಎಂದು ಮಾಡಿದರು. ಇವತ್ತು ಸ್ಯಾಂಡರ್ಡ್ ಎಕರೆ ಎಂದರೆ ಇಷ್ಟು ಬೆರೆ ಬಂದು ಕಡೆ ಮಾಡಿದ್ದರೆ ಮತೊಂದು ಕಡೆ ಸ್ಯಾಂಡರ್ಡ್ ಎಕರೆಗೆ ಇನ್ನೊಂದು ಬೆರೆ ಮಾಡಿದ್ದಾರೆ. Statement of Objects and Reasons ನಲ್ಲಿ "disposal of the accumulation of resumption Applications, Rent applications and other Miscellaneous applications" ಎಂಬುದಾಗಿ ಹೇಳಿದ್ದಾರೆ. ರಿಜಂಪ್ಷನ್ ಮಾಡಿಕೊಳ್ಳುವವರು ಯಾರು ಎಂದರೆ, ಜಮೀನು ಇರುವವರು. ತಮ್ಮ ಜಮೀನನ್ನು ಲ್ಯಾಂಡ್ ರಿಫಾರಮ್ಸ್ ರೂಲ್ಸ್ ಪ್ರಕಾರ ಕಳೆದುಕೊಳ್ಳಬೇಕಾಗುತ್ತದೆಂದು ಕೆಲವರು ರಿಜಂಪ್ಷನ್ ಅಪ್ಲಿಕೇಷನ್ ಕೊಟ್ಟಿದ್ದಾರೆ. ಯಾರು ಭೂಮಿಯೇ ಇಲ್ಲದೇ ಇದ್ದಾರೋ ಅಂಥವರಿಗೆ ಭೂಮಿ ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ. ಅದರಂತೆ ಯಾರು ಭೂಮಿಯನ್ನು ಜೀವನಕ್ಕೆ ಆಶ್ರಯ ಮಾಡಿಕೊಂಡಿದ್ದಾರೋ ಅಂತಹವರಿಂದ ಜಮೀನನ್ನು ಕಿತ್ತು ಕೊಳ್ಳದೆ ಅವರಿಗೂ ರಕ್ಷಣೆ ಕೊಡುವುದು ಸರ್ಕಾರದ ಕರ್ತವ್ಯ. ಹೆಚ್ಚಿನ ಜಮೀನು ಇರುವವರಿಂದ ಬೇಕಾದರೆ ಜಮೀನನ್ನು ಸರ್ಕಾರದವರು ಬಿಡಿಸಿಕೊಳ್ಳಲಿ. ಆದರೆ ಎಲ್ಲರಿಗೂ ಒಂದೇ ರೀತಿಯ ಕಾನೂನು ಮಾಡುವುದು ಸರಿಯಲ್ಲ. ಒಂದು ಕಾಲಕ್ಕೆ ಮೈಸೂರು ರಾಜ್ಯದಲ್ಲಿ ಗುಡ್ ಅಡ್ಮಿನಿಸ್ಟ್ರೇಷನ್ ಇತ್ತು. ಆ ಒಂದು ಒಳ್ಳೆಯ ಹೆಸರನ್ನು ಮಾಯಾ ಮಾಡುವುದಕ್ಕೆ ಈ ಸರ್ಕಾರದವರು ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಕೇಂದ್ರಸರ್ಕಾರದವರು ನಿಮ್ಮ ಮುಖಕ್ಕೆ ಮಸಿ ಹಚ್ಚಿ, ಭೂಸುಧಾರಣೆಯನ್ನು ಜಾಗ್ರತೆ ಜಾರಿಗೆ ತನ್ನಿ ಎಂದು ಹೇಳಿದ ಮೇಲೆ ಈ ಕೆಲಸವನ್ನು ಚುರುಕು ಮಾಡುತ್ತಿದ್ದಾರೆಂದು ಹೇಳುತ್ತಿದ್ದೇನೆ.

ಮಾನ್ಯ ರೆವಿನ್ಯೂ ಮಂತ್ರಿಗಳು ಲ್ಯಾಂಡ್ ಲಾರ್ಡ್ ಹೌದೋ ಇಲ್ಲವೋ ಗೊತ್ತಿಲ್ಲ. ಈಗತಾನೆ ಅವರು ಈ ಸಭೆಯಲ್ಲಿ ಮಾತನಾಡಿದುದನ್ನು ನೋಡಿದರೆ ಅವರು ಲ್ಯಾಂಡ್ ಲಾರ್ಡ್ ಇದ್ದರೂ ಇರ

ಬಹುದು ಎಂದು ಕಾಣುತ್ತದೆ. ಅವರು ಮೃದುವಾಗಿ ಮಾತನಾಡುವುದು ಮತ್ತು ಅವರ ಸರಳ ವಾಸದ ಗುಣ ಇವೆಲ್ಲಾ ನೋಡಿದರೆ ಅವರು ಲ್ಯಾಂಡ್ ಲಾರ್ಡ್ ಎಂದು ಕಾಣುವುದಿಲ್ಲ. ಬಡವರ ವಿಷಯದಲ್ಲಿ ಅವರು ಮಾಡುವ ಸಹಾಯ ಏನು, ಬಡವರ ವಿಷಯದಲ್ಲಿ ಅವರ ಮನೋಭಾವ ಏನು ಎಂಬುದನ್ನು ಈಗ 3 ವರ್ಷಗಳಿಂದ ಪತ್ತೆ ಮಾಡುವುದಕ್ಕೆ ಆಗಲಿಲ್ಲ. ಈಗ ಈ ತಿದ್ದುಪಡಿಯ ಮನೂದೆಯ ಪ್ರಕಾರ ಭೂಸುಧಾರಣೆಗೆ ಸಂಬಂಧಪಟ್ಟ ಕೇಸುಗಳನ್ನು ಲ್ಯಾಂಡ್ ಟ್ರಿಬ್ಯುನಲ್‌ಗಳು ನಡೆಸುವುದರ ಜೊತೆಗೆ ಮುನ್ಸೀಫ್ ಕೋರ್ಟುಗಳು ಮತ್ತು ತಹಶೀಲ್ದಾರರು ನಿರ್ವಹಿಸುತ್ತಾರೆ. ಈ ಭೂಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ಬಡವರ ಬಗ್ಗೆ ಇವರಿಗೆ ಮನಸ್ಸಿಲ್ಲ. ರಾಜ್ಯಾಂಗದಲ್ಲೇನೋ ಹರಿಜನರಿಗೆ ಭೂಮಿಯನ್ನು ಕೊಡಬೇಕು, ಇತರ ಸೌಲಭ್ಯವನ್ನು ಕೊಡಬೇಕು ಎಂದು ಬರೆದಿದ್ದಾರೆ. ಆದರೆ ಸರ್ಕಾರವನ್ನು ನಡೆಸತಕ್ಕವರು ಧರ್ಮವಾಗಿ ಆ ನೀತಿಯನ್ನು ಪಾಲನೆ ಮಾಡುತ್ತಿಲ್ಲ. ಸರ್ಕಾರದವರು ಬಡವರ ಬಗ್ಗೆ, ಹರಿಜನರ ಬಗ್ಗೆ ಆಸಕ್ತಿಯನ್ನು ತಾಳಿ ಅವರಿಗೆ ಸಹಾಯ ಮಾಡದಿದ್ದರೆ ಅವರ ಗತಿ, ಅವರ ಪರಿಸ್ಥಿತಿ ನೆಟ್ಟಗಾಗುವುದಿಲ್ಲ. ಭೂಸುಧಾರಣೆ ಸಮಸ್ಯೆಯನ್ನು ಸರ್ಕಾರದವರು ಯಾರೀತಿ ಬಗೆಹರಿಸುತ್ತಾರೆಯೋ, ಎಷ್ಟು ದಿವಸಗಳಲ್ಲಿ ಇದನ್ನು ಇತ್ಯರ್ಥ ಮಾಡುತ್ತಾರೆಯೋ ಅದು ಬೇರೆ ಮಾತು. ಆದರೆ ಈ ಸಮಸ್ಯೆಯನ್ನು ಎಲ್ಲರೂ ಮೆಚ್ಚತಕ್ಕ ರೀತಿಯಲ್ಲಿ ಮಾಡತಕ್ಕ ಎದೆಗಾರಿಕೆ ಮತ್ತು ದಿಟ್ಟತನ ಇವರಿಗೆ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈ ಒಂದು ಶಾಸನ ಯಾವಾಗ ಇವರ ಕೈಗೆ ಬಂತೋ ಆಗಲೇ ನಾನು ಅಂದುಕೊಂಡೆ ಇದು ಒಂದು ಕರಾಳ ಶಾಸನವಾಗುತ್ತದೆ ಎಂದು. ಇದರಲ್ಲಿರತಕ್ಕ ನೀತಿ ಏನು ? ಬಡವರಿಗೆ ಇರತಕ್ಕ ತೊಂದರೆಗಳನ್ನು ನಿವಾರಣೆ ಮಾಡುತ್ತೇವೆ, ಜೀವನೋಪಾಯಗಳಿಗೆ ಉಪಕಾರ ಮಾಡುತ್ತೇವೆ, ಇದಕ್ಕೆ ಸಮಸಮಾನವಾದ ಕ್ರಯಧನವನ್ನು ಪೂರ್ತಿಯಾಗಿ ಏಕಗಂಟಿನಲ್ಲಿ ನಲ್ಲಿಸಿ ವಿಳಂಬವಿಲ್ಲದೆ ಸ್ವಾಮ್ಯಾಧಿಕಾರವನ್ನು ಪಡೆಯಲು ಗೇಣಿದಾರರಿಗೆ ಸಾಕಷ್ಟು ಧನಸಂಪತ್ತಿ ಇರುವಾರವ ಕಾರಣ ರಾಷ್ಟ್ರೀಕೃತ ಬ್ಯಾಂಕುಗಳ ನೆರವನ್ನು ಕೋರಲಾಗಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ರಾಜ್ಯಪಾಲರಿಂದ ಹೇಳಿಸಿದ್ದಾರೆ. ಇದರ ಬಗ್ಗೆ ಸರ್ಕಾರದವರೇ ನೇರವಾಗಿ ಬ್ಯಾಂಕುಗಳಿಂದ ಹಣವನ್ನು ತೆಗೆದುಕೊಂಡು ಒಂದು ಪಾಲಿಸಿ ರೂಪದಲ್ಲಿ ಭೂಮಿಗೆ ಹಣವನ್ನು ಕೊಟ್ಟು ಬಡವರಿಗೆ ಉಪಕಾರ ಮಾಡಬಹುದಾಗಿತ್ತು. ಏತಕ್ಕೆಂದರೆ ಈಗಾಗಲೇ ರೈತರು ಸಾಲದಲ್ಲಿ ಮುಳುಗಿ ಹೋಗಿದ್ದಾರೆ. ಅವರ ಮೇಲೆ ಮತ್ತಷ್ಟು ಸಾಲವನ್ನು ಹೇರಿದರೆ ಅವನು ಚೇತರಿಸಿಕೊಳ್ಳುವುದು ಕಷ್ಟವಾಗುತ್ತದೆ. ಅನ್ ಆಥರೈಸ್ಡ್ ಕಲ್ವೀಪೇಷನ್ ನಲ್ಲಿರತಕ್ಕ ಭೂಮಿ ಏನಿದೆ ಅದನ್ನು ಬಡಬರಿಗೆ ಕೊಡಿ ಎಂದು ಹೇಳಿದರೆ ಆ ಬಗ್ಗೆ ಸರ್ಕಾರದವರು ನಿಗಾ ಕೊಡುವುದಿಲ್ಲ. ಎಲ್ಲೆಲ್ಲಿ ಸರ್ಕಾರಿ ಜಮೀನು ಇದೆಯೋ ಅದನ್ನು ದೀನದಲಿತರಿಗೆ ಬಡವರಿಗೆ ಕೊಡಿ ಎಂದು ಹೇಳಿದರೆ ಅದನ್ನು ಇನ್ನೂ ಯೋಚನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಯಾವ ಊರಿನಲ್ಲಿಯೂ ಬಡವರಿಗೆ ಜಮೀನಿಲ್ಲ. ನಮಗೆ ಸ್ವರಾಜ್ಯ ಬಂದಮೇಲೂ ಕೂಡ ಹರಿಜನರಿಗೆ ದೀನದಲಿತರಿಗೆ ಯಾವ ಯಾವ ಸೌಲಭ್ಯಗಳು ಎಷ್ಟರಮಟ್ಟಿಗೆ ಸಿಕ್ಕಬೇಕೆಂದು ನಾವು ನಿರೀಕ್ಷಣೆ ಮಾಡಿದ್ದೆವೋ ಅಷ್ಟರ ಮಟ್ಟಿನ ಸೌಲಭ್ಯ ಮತ್ತು ಸವಲತ್ತುಗಳು ಸಿಕ್ಕಿಲ್ಲ. ಅದನ್ನು ಕೇಳುವ ಎದೆಗಾರಿಕೆ ಯಾರಿಗೂ ಇಲ್ಲ. ಎಷ್ಟೋ ವರ್ಷಗಳಿಂದ ಅನ್‌ಆಥರೈಸ್ಡ್ ಆಗಿ ಕಲ್ವೀಪೇಷನ್ ಮಾಡಿರತಕ್ಕ ಭೂಮಿ ಹರಿಜನರ ವಶದಲ್ಲಿ ಎಷ್ಟಿದೆ ಎಂಬುದನ್ನು ಮಾನ್ಯ ರವಿನ್ಯಾ ಮಂತ್ರಿಗಳು ಹೇಳಲಿ. ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಬಡವರಿಗೆ ಸಂಬಂಧಪಟ್ಟ ಅಂಕಿ ಅಂಶಗಳು ಇವರ ಕೈಯಲ್ಲಿ ಇಲ್ಲ. ಇವರು ಜನಗಳಿಗೆ ಯಾವರೀತಿ ಉಪಕಾರ ಮಾಡುತ್ತಾರೆ. ಇವರನ್ನು ಜನ ಹೇಗೆ ಮೆಚ್ಚುತ್ತಾರೆ ? ಬಡವರು ಕಣ್ಣೀರು ಹಾಕುತ್ತಿದ್ದಾರೆ. ಇವರಿಗೆ ಪಾಪ ಪುಣ್ಯದ ಭೀತಿ ಇದ್ದರೆ ಬಡವರು ಗೋಳಾಡುತ್ತಿರುವುದು ಇವರ ಮನಸ್ಸಿಗೆ ಬಂದಿದ್ದರೆ ಬಡವರ ಬಗ್ಗೆ ಆಸಕ್ತಿಯನ್ನು ವಹಿಸುತ್ತಿದ್ದರು. ಬಡಗೇಣಿದಾರರುಗಳಿಗೆ ಜಮೀನುಗಳಲ್ಲಿ ಉಳಲು ಕಿರುಕುಳ ಜಾಸ್ತಿಯಾಗುತ್ತಿದೆ. ಅದನ್ನು ತಪ್ಪಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಲಿಲ್ಲ. ಬಡವರಿಗೆ ಜಮೀನು ಮಂಜೂರು ಮಾಡುವುದನ್ನು ವಿಳಂಬ ಮಾಡುತ್ತಿದ್ದಾರೆ ಜಮೀನಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹ ಮಾಡುವ ಬಗ್ಗೆ ನಾವೇನಾದರೂ ಕೇಳಿದರೆ ಮಾನ್ಯ ರವಿನ್ಯಾ ಮಂತ್ರಿಗಳು ಹೇಳುತ್ತಾರೆ ಅಲ್ಲಿಗೆ ಕಾಗದವನ್ನು ಬರೆದಿದ್ದೇವೆ, ಇಲ್ಲಿಗೆ ಕಾಗದವನ್ನು ಬರೆದಿದ್ದೇವೆ ಎಂದು ಹೇಳುತ್ತಾರೆ. ಆದರೆ ಅವರು ಬರೆದ ಕಾಗದ ಪತ್ರಗಳೆಲ್ಲ ಶಿವಾಜಮಾ ಆಗುತ್ತದೆ. ಮಾಗಡಿ ತಾಲ್ಲೂಕಿನಲ್ಲಿ ಸೇರಿದಾರರು ಲಿಂಗಾಯಿತರು, ಮೇಲಿನ ಆಫೀಸರು ಲಿಂಗಾಯಿತರು, ರವಿನ್ಯಾ ಮಂತ್ರಿಗಳು ಲಿಂಗಾಯಿತರು ಇರುವಾಗ ಹರಿಜನರಿಗೆ ಜಮೀನು ಹೇಗೆ ಸಿಕ್ಕುತ್ತದೆ ? ಅಂತೂ ಇಂತೂ ಕುಂತಿಮಕ್ಕಳಿಗೆ ರಾಜ್ಯವಿಲ್ಲ. ಹರಿಜನರಿಗೂ ಬಡವರಿಗೂ ಜಮೀನು ಸಿಕ್ಕುವುದಿಲ್ಲ. ಇವೊತ್ತು ಸರ್ಕಾರದ ಬೇರು ಸಡಿಲವಾಗುತ್ತಿದೆ. ದಿವಾನರ ಕಾಲದಲ್ಲಿ ಬಡವರ ಕೂಗು ಅವರಿಗೆ ಮುಟ್ಟುತ್ತಿತ್ತು. ಐ. ಜಿ. ಪಿ. ಯವರಿಗಾಗಲೀ, ಅಥವಾ ಡೆಪ್ಯುಟಿ ಕಮೀಷನರಿಗಾಲೀ ಯಾರಾದರೂ ಯಾವುದಾದರು ಒಂದು ವಿಷಯದ ಬಗ್ಗೆ ಒಂದು ಟೆಲಿಗ್ರಾಂ

(ಶ್ರೀ ಕೆ. ಪ್ರಭಾಕರ್)

ಕೊಟ್ಟರೆ ಎಷ್ಟು ಗಂಟೆಯೊಳಗಾಗಿ ಕ್ಷಳಕ್ಕೆ ಬಂದು ನೋಡುತ್ತಿದ್ದರು. ಸ್ವರಾಜ್ಯ ಬಂದಮೇಲೆ ಅದು ಒಂದು ದುರಾದೃಷ್ಟವೋ ಏನೋ ಬಡವರ ಅರ್ಜಿಗೆ ಬೆಲೆಯೇ ಬಾರದಾಗಿದೆ. ಮತ್ತು ಬಡವರಿಗೆ ಪ್ರಯೋಜನವೂ ಆಗುವುದಿಲ್ಲ. ಮಾನ್ಯರೆವಿನ್ಯೂ ಮಂತ್ರಿಗಳು ಲಾ ಓದಿದ್ದಾರೆ, ಅನುಭವಿಗಳು ಕ್ಯಾಬಿನೆಟ್ ನಲ್ಲಿರತಕ್ಕ ಮಂತ್ರಿಗಳಲ್ಲಿ ಇವರೇ ಹಿರಿಯರು ಹಾಗೂ ಧರ್ಮರಾಯರು ಎಂದು ಹೇಳುತ್ತಾರೆ. ಇವರಿಗೆ ವಯಸ್ಸೂ ಹಾಸ್ಯವಾಗಿದೆ. ಶ್ರೀಮಾನ್ ದೊಡ್ಡಮೇಟಿಯವರನ್ನು ಬಿಟ್ಟರೆ ಮಂತ್ರಿಮಂಡಲದಲ್ಲಿ ಇವರೇ ವಯಸ್ಸಿನಲ್ಲಿ ದೊಡ್ಡವರು ಎಂದು ಹೇಳುತ್ತಾರೆ. ಮತ್ತು ಬಡವರ ಕಷ್ಟ ಇವರಿಗೆ ಗೊತ್ತಿದೆ ಎಂದೂ ಹೇಳುತ್ತಾರೆ. ಬಡವರ ವಿಷಯದಲ್ಲಿ ಇವರೇನಾದರೂ ಹೇಳಿದರೆ ಒಬ್ಬ ಆಫೀಸರೂ ಇವರ ಮಾತನ್ನು ಕೇಳುವುದಿಲ್ಲ. ಒಂದು ಕಡೆ ಕೆರೆಯ ಜಮೀನನ್ನು ಉತ್ತಿರುವುದನ್ನು ಅವರಿಗೆ ತಿಳಿಸಿ ಅರ್ಜಿಕೊಟ್ಟಿದ್ದಾರೆ ಎನ್ನುವ ವರ್ತಮಾನ ಬಂದಿತ್ತು. ಆ ಬಗ್ಗೆ ಏನಾಗಿದೆ, ಎನ್ನುವ ವರ್ತಮಾನವನ್ನು ತರಿಸುವುದಕ್ಕೆ ನಾನು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಎಷ್ಟೋ ಸಲ ಬರೆದಿದ್ದೇನೆ. ಆದರೂ ಸಹ ಅದನ್ನು ಮಾನ್ಯ ಮಂತ್ರಿಗಳು ತರಿಸಿಲ್ಲ. ಇವರಿಗೆ ಅದೇನು ಕಷ್ಟವೋ ಇವರ ಮಾತನ್ನು ಅಧಿಕಾರಿಗಳು ಕೇಳುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಇವರ ಪೆನ್ನಿಗೆ ಬೆಲೆ ಇದೆಯೋ ಇಲ್ಲವೋ ಗೊತ್ತಿಲ್ಲ. ಇವರ ಮಾತನ್ನು ಕೇಳುವ ಅಧಿಕಾರಿಗಳೇ ಇಲ್ಲ. ಬಡವರಿಗೆ ಮತ್ತು ದೀನದಲಿತರಿಗೆ, ಹರಿಜನರಿಗೆ ಉಪಕಾರ ಮಾಡುವ ಪ್ರಾಂಪ್ಟ್ಯ ಇವರಿಗೆ ಇಲ್ಲ. ಇವರಿಗೆ ಆ ಮನಸ್ಸೂ ಇಲ್ಲ ಹರಿಜನ ಸದಸ್ಯರ ಬೆಂಬಲದಿಂದ ಇಪ್ಪತ್ತು ಪ್ಲಸ್ಸೂರು ಸರ್ಕಾರ ನಡೆಯುತ್ತಿದೆ. ನಾವು ಹರಿಜನ ಸದಸ್ಯರು 31 ಜನಗಳಿದ್ದೇವೆ. ನಾವು ಏಕೆ ಇವರಿಗೆ ಸಹಾಯ ಮಾಡುತ್ತಿದ್ದೇವೆ ಇದು ನಿಜವಾಗಿಯೂ ತಂಬಾ ಅನ್ಯಾಯ. ಈಗ ಅದಕ್ಕೂ ಕಾಲ ಸನ್ನಿಹಿತವಾಗುತ್ತಿದೆ. ಈಗ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆ ಲ್ಯಾಂಡ್ ರೆಜ್ಯೂಮ್ ಮಾಡುತ್ತೇವೆ ಎಂದು ಹೇಳುತ್ತಾರೆ. ಜಮೀನು ಇರುವವರ ಹತ್ತಿರ ತೆಗೆದುಕೊಳ್ಳಿ. ಆದರೆ ಬಡವರಿಂದ ಜಮೀನು ಕಿತ್ತುಕೊಳ್ಳಬೇಡಿ. ಹರಿಜನರು ಕಲ್ಟಿವೇಟ್ ಮಾಡುತ್ತಿದ್ದಂತಹ ಬೇಕಾದಷ್ಟು ಜಮೀನನ್ನು ಅವರ ಕೈಬಿಡಿಸಿದ್ದಾರೆ. ಯಾವ ಜಮೀನು ಇಲ್ಲ. ಸರ್ಕಾರದವರು ಲ್ಯಾಂಡ್ ರೆಜ್ಯೂಮ್ ಮಾಡಿಕೊಳ್ಳುವುದಕ್ಕೆ ಜೀರೋ ಮಾಡಿದ್ದಾರೆ. ಹೀಗಿರುವಾಗ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತಂದು ಯಾವ ಜಮೀನನ್ನು ರೆಜ್ಯೂಮ್ ಮಾಡುತ್ತಾರೆಯೋ ನನಗೆ ಗೊತ್ತಿಲ್ಲ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†Sri D. B. KALMANKAR.—Mr. Speaker Sir, recently, the Central Home Ministry has isued an information that in this country in rural areas, there is a great land hunger and if that land hunger is not appreciated in time, and equitable distribution is not made in the interest of agricultural labourers and small tenants, there is every possibility that in this country instead of a green revolution coming, there will be a red revolution. Now it was in this perspective that the Chief Ministers' conference took place at New Delhi.

The Central Government was anxious to see that radical land reforms took place in this country and they also gave an ultimatum that if it was not done then something extraordinary would have to be done by the Centre. The Government which is ruling here, swears by democratic socialism and they surpassed the Indira Gandhi Congress by saying that they would do this and that and people at large were thinking that by this amendment the Veerendra Patil Government was going to bring some revolutionary change in this State. They were thinking that this Land Reforms Amendment Bill was going to be in favour of the small holders and agricultural labourers and that there was going to be distribution of land on a very revolutionary basis. But what I find after going through this so-called amendment of the Land Reforms Act is only small things. Instead of saying acres they want to say hectares and instead of the Tribunal doing the work they say that the Tahsildar will do it and the court will function as a

Tribunal. Except these, I have failed to see any merit in this Bill. It is utterly disappointing to the agricultural labourers and the tenants. What we find today is that even the Record of Rights are not truly maintained in the villages. There are persons who are cultivating the lands but the Village Accountant who is generally the agent of the landlords and the propertied people writes the name of the owner and says that he is cultivating by himself. So, unless such records are corrected, I think nothing can be done in the interest of the agricultural labourers and the tenants.

Then it was said that the tenants are given all the facilities, that free legal aid is being given to them. It is there in the provisions of the Act but so far as my experience goes, in the disposal of resumption cases under Section 14 and Rent cases nowhere has the tenant been given free legal aid. Now a statement is issued as if this State is the first State to do a lot for the tenants. They want to give an appearance that this Ministry is a progressive Ministry and that it is going ahead of other States.

Then, I want to come to the ceiling area. Normally the ceiling area given here is 18 standard acres. The land a family can possess works out to more than 144 acres and in some casses if there are more members in an undivided Hindu family it may also go to 27 standard acres. I want to show how this is not really a revolutionary or socialistic legislation. Take the case of Bombay's Tenancy Law of 1948. There land is divided into only three categories : on is jirayat land *i.e.*. dry land and the maximum dry land a man can possess is 48 acres, There is another class which is seasonally irrigated and the ceiling in respect of this class of land is 24 acres and then comes the perennially irrigated land of which a man can hold 12 acres. Compared to the Bombay legislation, our ceiling is many times more. I thought that the ceiling area would be brought down and land would be made available for distribution after vesting it in Government. But it seems that vesting of land is not going to take place so early. Under Section 44 all those lands which are not resumable must vest in Government. For that notification must be issued and that notification has to be issued after all these cases are disposed of. As we all know, there are a lot of pending cases which are to be disposed of. That will take at least a period of 5 to 10 years. Till then, no vesting of non-resumble lands is going to take place. The question of distribution arises after the vesting of non-resumable lands in the Government Then there are other categories of limited owners and these lands also will have to be surrendered. Though there are some provisions, they will not come into force so early and I fail to see any ray of hope in the present amending Bill. It is most reactionary ; there is nothing in favour of the small man, agricultural labourer and tenant. So, this particular Bill is not at all progressive. So, I vehemently oppose this Bill and I thank the Chair for having given me an opportunity to say a few words.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಭೂಸುಧಾರಣೆಯ ಕಾನೂನು ಬಗ್ಗೆ ತಂದಿರತಕ್ಕ ತಿದ್ದುಪಡಿ ಏನಿದೆ, ಇದರಲ್ಲಿ ಭೂಸುಧಾರಣೆಯನ್ನು ತರುವುದಕ್ಕೆ ಏನೇನು ತೊಂದರೆ ಇದೆ, ಮತ್ತು ಭೂಸುಧಾರಣೆ ತರುವ ಒಳಗೆ ಭೂಮಿಯು ರೈತರ ಕೈಯಿಂದ ಇದು ತಪ್ಪಿಹೋಗುವ ಪರಿಸ್ಥಿತಿ ಏನಿದೆ, ಇದಕ್ಕೆಲ್ಲಾ ಅನುಕೂಲವಾಗುವ ತಿದ್ದುಪಡಿಯನ್ನು ನಭೆಯ ಮುಂದೆ ತರುತ್ತಾ ರೆಂದು ಭಾವಿಸಿದ್ದೆ. ಆದರೆ ನಮ್ಮ ಮುಂದೆ ತಂದಿರತಕ್ಕಂತಹ ತಿದ್ದುಪಡಿ ಮಸೂದೆಯನ್ನು ನೋಡಿದರೆ, ಸರ್ಕಾರಕ್ಕೆ ಏನೋ ಒಂದು ಮಾಡಬೇಕು, ನಾವು ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳುವುದಕ್ಕೋಸ್ಕರ ಇದನ್ನು ತಂದಿದ್ದಾರೆ. ಇದನ್ನು ಕಾರ್ಯತಃ ಮಾಡುವು ದಕ್ಕಾಗಲ್ಲ. ಈಗ ಎಷ್ಟೋ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಕೇಸುಗಳನ್ನು ಹಾಕಿದ್ದಾರೆ. ಬಡವರಾದ ಜನರು ಕೋರ್ಟಿನಲ್ಲಿ ಒಬ್ಬಿಕೊಳ್ಳಲೇ ಬೇಕು, ಇಲ್ಲದಿದ್ದರೆ, ಧನಿಕರು, ನಿನ್ನ ತಲೆ ಒಡೆದು ಹಾಕುತ್ತೇನೆ, ಎಂಬ ಬೆದರಿಕೆಯನ್ನು ಹಾಕುತ್ತಿದ್ದಾರೆ. ಇವತ್ತು ಅನೇಕ ಭೂಸ್ವಾಮಿಗಳು ಈರೀತಿ ಬಡ ಜನರನ್ನು ಸತಾಯಿಸಿ ಹೆದರಿಸುತ್ತಿದ್ದಾರೆ. ರೈತನಿಂದ ಭೂಸ್ವಾಮಿಗೆ ಭೂಮಿಯನ್ನು ಕೊಡಲು ಒಪ್ಪಿಕೊಳ್ಳುತ್ತೇನೆಂದು, ಬೆದರಿಕೆ ಹಾಕಿ ಭೂಸ್ವಾಮಿಗಳು ಬರೆಸಿಕೊಳ್ಳುತ್ತಿದ್ದಾರೆ. ಈಗ ಹೀಗೆ 100ಕ್ಕೆ 50 ಭಾಗದ ಕೇಸುಗಳೆಲ್ಲಾ ಈ ರೀತಿ ರಾಜಿಯಿಂದ ಆಗಿರುವಂತಹ ತೀರ್ಮಾನಗಳು. ಭೂಸ್ವಾಮಿಗಳು ಒಂದು ಭೂಸೈನ್ಯವನ್ನೇ ಕಟ್ಟುತ್ತಿದ್ದಾರೆ. ಗೇಣಿ ರೈತರಿಗೆ ಭೂಸ್ವಾಮಿಗಳಿಂದ ಚಿತ್ರಹಿಂಸೆಯಾಗುತ್ತಿದೆ. ಯಾವಪೊಲೀಸ್ ಸ್ಟೇಷನ್ನಿನಲ್ಲೂ ಗೇಣಿದಾರರು ಅರ್ಜಿಕೊಟ್ಟರೆ ಅದರಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಇದು ಮಾಮೂಲಾಗಿ ನಡೆಯುತ್ತಿದೆ. ಹೀಗೆ ರೈತನನ್ನು ಭೂಸ್ವಾಮಿ ಗಳು ನದೆಬಡಿದು, ತಮ್ಮ ಇಷ್ಟದಂತೆ ಬರೆಸಿಕೊಂಡು ಅವನಿಗೆ ಅನ್ಯಾಯವನ್ನು ಮಾಡುತ್ತಿದ್ದಾರೆ. ಸರ್ಕಾರದವರು ಭೂಸುಧಾರಣೆ ಮಾಡುತ್ತೇವೆಂದು ಹೇಳಿ ಅರ್ಧ ಮನಸ್ಸಿನಿಂದ ಪ್ರಯೋಜನ ಭೂ ಸ್ವಾಮಿಗಳಿಗೆ. ಇದರಿಂದ ನಿಜವಾಗಿಯೂ ಅನೇಕ ಜನ ರೈತರಿಗೆ ಸ್ವಾಧೀನದಲ್ಲಿದ್ದ ಭೂಮಿಸಹ ತಪ್ಪಿ ಹೋಗುತ್ತದೆ. ಇನ್ನು ಎಷ್ಟೋ ಕಡೆಗಳಲ್ಲಿ ಜಮೀನ್ದಾರರು, ರೈತರಿಗೆ 200-300 ರೂಪಾಯಿ ಕೊಟ್ಟು ಬಿಟ್ಟು ಉಪಾಯ ಮಾಡಿ ಭೂಮಿಯನ್ನು ಬಿಡಿಸಿಕೊಂಡು ಬಿಟ್ಟಿದ್ದಾರೆ. ಭೂಸಮಸ್ಯೆಯ ಬಗ್ಗೆ ಕಾನೂನು ಮಾಡುತ್ತೇವೆ ಎಂಬುದಾಗಿ ಹೇಳಿದಮೇಲೆ ಅನೇಕ ಜನರು ಭೂಸ್ವಾಮ್ಯಗಳು ತಮ್ಮ ಜಮೀ ನುಗಳನ್ನು ವಿಭಾಗಮಾಡಿದ್ದಾರೆ. ಭೂಸ್ವಾಮಿಯಾದವನಿಗೆ 500 ಎಕರೆಗಳಿದ್ದರೆ ಅವನು ಮಕ್ಕಳ, ಮೊಮ್ಮಕ್ಕಳ ಹೆಸರಿಗೆ ಒಂದೇ ಮನೆಯಲ್ಲಿದ್ದರೂ ಅದನ್ನು ಬೇರೆಬೇರೆಯಾಗಿ ಖಾತೆ ಮಾಡಿಸಿಟ್ಟಿದ್ದಾನೆ. ಭೂಸುಧಾರಣೆಯ ಕಾನೂನು ಆದಮೇಲೆ ಅದಕ್ಕಿಂತ 10 ವರ್ಷಗಳ ಹಿಂದೆ ಯಾವ್ಯಾವ ರೀತಿಯಾಗಿ ಜಮೀನಿನ ವಿಭಾಗ ಮತ್ತು ಇತರ ಪರಭಾರೆಗಳನ್ನು ಹೇಗೆ ರದ್ದುಮಾಡ ಬೇಕೆಂಬುದನ್ನು ಯೋಚಿಸಿ ತಿದ್ದುಪಡಿ ತರಬೇಕಾಗಿದೆ. ರೆವಿನ್ಯೂ ಮಂತ್ರಿಗಳು ಇಷ್ಟಪಟ್ಟರೆ ಕೆಲವು ಕಾಪಿಗಳನ್ನು ತಂದು ಕೊಡುತ್ತೇನೆ. ಜಮೀನ್ದಾರರು ಅವರ ಮಕ್ಕಳ ಮತ್ತು ಮೊಮ್ಮಕ್ಕಳ ಹೆಸರಿಗೆ 500 ಎಕರೆಗಳನ್ನು ಒಂದೇಮನೆಯಲ್ಲಿದ್ದರೂ ವಿಭಾಗಮಾಡಿಕೊಂಡಿರುವ ವಿಷಯದಲ್ಲಿ. ಈ ಮಸೂದೆ ಯಲ್ಲಿ ಹೆಚ್ಚಿಗೆ ಉಳಿದ ಭೂಮಿಯನ್ನು ಕೊಂಡುಕೊಳ್ಳುವ ಬೆಲೆ ಹೇಗೆಂಬುದನ್ನು 75ನೇಸೆಕ್ಷನ್ನಿನಲ್ಲಿ ಹೇಳಿದ್ದಾರೆ. ಭೂಮಿಯ ಸಂಬಂಧದಲ್ಲಿ ಬರುವ ಸರಾಸರಿ ನಿವ್ವಳ ವಾರ್ಷಿಕ ವರಮಾನದ 10 ಭಾಗದಷ್ಟು ಕೊಡಬೇಕೆಂದು ನಿಗಧಿ ಮಾಡಿದ್ದಾರೆ. ಸರಾಸರಿ ಎಷ್ಟು ಎಂಬುದಾಗಿ ತೀರ್ಮಾನ ಹೇಗೆ ಆಗುವುದು ? ಒಂದೊಂದು ಪ್ರದೇಶದಲ್ಲಿರತಕ್ಕ ಭೂಮಿಯ ಬಗ್ಗೆ ಸರಾಸರಿ ವರಮಾನ ಎಷ್ಟಾಗುತ್ತದೆಂಬುದನ್ನು ಗೊತ್ತುಮಾಡಬೇಕು. ಕೋಲಾರ ಜಿಲ್ಲೆಯಲ್ಲಿ ಖುಷ್ಕಿ ಜಮೀನು ಎಂದು ಹೇಳಿದರೆ ಇಂತಹ ಜಮೀ ನಿಗೆ ಇಷ್ಟು ಬೆಲೆ ಎಂಬುದಾಗಿ ಖಚಿತವಾಗಿ ನಿಗದಿ ಮಾಡಿದರೆ ಒಳ್ಳೆಯದು ಅದಿಲ್ಲದೆ 10 ಪಟ್ಟು ಸರಾಸರಿ ಜಮೀನಿನ ನಿವ್ವಳ ವಾರ್ಷಿಕ ವರಮಾನವೆಂದು ಹೇಳಿದರೆ ಆ ವಿಷಯ ಕೋರ್ಟುಗಳಲ್ಲಿ ತೀರ್ಮಾನ ವಾಗಲು ಎರಡು ಮೂರು ವರ್ಷಗಳು ಆಗುತ್ತದೆ. ಅನಾವಶ್ಯಕವಾಗಿ ಕಾಲಹರಣೆಯಾಗುತ್ತದೆ. ಇಲ್ಲಿ ಅನೇಕ ತಿದ್ದುಪಡಿಗಳಿವೆ. ಅವೆಲ್ಲವನ್ನೂ ಹೇಳುವುದಕ್ಕೆ ಕಾಲಾವಕಾಶವಿಲ್ಲ. ಒಟ್ಟಿನಲ್ಲಿ ಈ ಸರ್ಕಾರಕ್ಕೆ ನಿಜವಾಗಿಯೂ ಭೂಸುಧಾರಣೆ ಜಾರಿಗೆ ತರಬೇಕು, ದುಡಿಯತಕ್ಕ ರೈತರಿಗೆ ಜಮೀನು ಸಿಗಬೇಕು ಎನ್ನುವ ಉದ್ದೇಶ ಖಂಡಿತವಾಗಿಯೂ ಸರ್ಕಾರಕ್ಕೆ ಇಲ್ಲ. ನಮ್ಮನ್ನೆ ಅರೆಮನಸ್ಸಿನಿಂದ ಭೂಸ್ವಾಮ್ಯಗಳ ಒತ್ತಡಕ್ಕೆ ಸಿಕ್ಕಿ ಏನೋ ಒಂದು ರೀತಿಯಲ್ಲಿ ರೈತರನ್ನು ಸಮಾಧಾನಮಾಡುವುದಕ್ಕೆ ಅವರು ಭೂಸುಧಾರಣೆಗಳನ್ನು ತರುತ್ತಿದ್ದಾರೆ. ಅದನ್ನು ಪತ್ರಿಕೆಗಳಲ್ಲಿ ಬರೆಯಿಸಿಕೊಂಡು ರೈತರಿಗೆ ಪ್ರೋತ್ಸಾಹವುಂಟುಮಾಡುವುದಕ್ಕೋಸ್ಕರವಾಗಿ ಈ ರೀತಿ ಮಾಡುತ್ತಿದ್ದಾರೆ. ಇಂಥಾ ಘೋರಣೆ ಯನ್ನು ಬಿಟ್ಟು ಸರ್ಕಾರದವರು ನ್ಯಾಯವಾಗಿ ಈ ಭೂಸುಧಾರಣೆಯನ್ನು ಜಾರಿಗೆ ತರಬೇಕಾದರೆ ನುಳ್ಳು ಕಾಗದಪತ್ರಗಳ ಮೂಲಕ ಜಮೀನ್ದಾರರು ಏನು ಮಾಡಿದ್ದಾರೆಯೋ ಅದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಬೇಕು ರೈತರಿಗೆ ದೊರೆಯುವ ಜಮೀನಿನ ಬೆಲೆಯನ್ನು ಖಚಿತವಾಗಿ ನಿಗದಿಮಾಡಬೇಕು. ಮುಖ್ಯವಾಗಿ ರೈತರಿಗೆ ಅನುಕೂಲವಾಗುವ ತಿದ್ದುಪಡಿಗಳನ್ನು ತರಬೇಕೆಂದು ಹೇಳಿ, ಇದನ್ನು ಸರ್ಕಾರದವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಭೂಸುಧಾರಣಾ ಶಾಸನ

ಜಾರಿಕ್ರಮ ಮುಂದುವರಿಸಿದರೆ ಮಾನ್ಯ ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಭೂಸುಧಾರಣೆ ನಾಟಕ ಹೋಗಿ ಮುಂದೆ ರುದ್ರನಾಟಕಕ್ಕೆ ದಾರಿಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Release of Sri Vatal Nagaraj by Sub-Magistrate, Gobichettipalayam, Tamil Nadu State

(Announcement)

MR. DEPUTY SPEAKER.—There is one announcement. I shall read the Message received from the I. G. P. Madras addressed to Speaker, Mysore State Legislative Assembly :

> " Thiru Vatal Nagaraj M. L. A. Mysore State was released from sub-jail Gobichettipalayam at 10.30. a. m. on 2nd February 1970 granting conditional bail by sub Magistrate, Gobi that he should report before his court daily at 1100 hours. Application was filed before Sub-Magistrate Gobi for relaxation of condition. Sub Magistrate cancelled condition at 11.30 A. M. on 2nd February 1970. "

Mysore Land Reforms (Ammendment) Bill, 1970

(Motion to consider—Debate continued)

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ರ್ಯಾಂಡ್ ರಿಫಾರಮ್ಸ್ ಬಿಲ್‌ಯದಲ್ಲಿ ಅನೇಕ ಜನರು ಮಾತನಾಡಿದ್ದಾರೆ. ಈಗ ಇದರ ಒಂದು ಪಬ್ಲಿಸಿಟಿ ಈ ದೇಶದ ಮುಂದೆ ಇದೆ. ಜನರು ಇದರಿಂದೇನೋ ಹೆಚ್ಚಿಗೆ ನಮಗೆಲ್ಲರಿಗೂ ಅನುಕೂಲಗಳನ್ನು ಮಾಡಿ ಕೊಡುತ್ತಾರೆಂದು ಭಾವಿಸಿಲ್ಲ. ಈಗ ಇಂಡಿಕೇಟ್ ಮತ್ತು ಸಿಂಡಿಕೇಟ್ ಆದಮೇಲೆ ಇಂತಹ ಪಬ್ಲಿಕೇಷನ್ಸ್ ಜಾಸ್ತಿ ಆಗಿದೆ. ಹೇ ಕಮಿಷನ್ನಿನ ವರದಿ ಜಾರಿಗೆ ಬಂತು. ಇವತ್ತು ನಮ್ಮಲ್ಲಿ ಎಫಿಷಿಯನ್ಸಿ ಬಹಳ ಜಾಸ್ತಿಯಾಗಿದೆ, 17 ತಿಂಗಳುಗಳ ಆಡಳಿತದಲ್ಲಿ ನನಗೆ ತೃಪ್ತಿಯಾಗಿದೆಯೆಂದು ಮಾನ್ಯ ಮುಂತ್ರಿಗಳು ಹೇಳಿದರು. ಆದರೆ ದೇಶಕ್ಕೆ ತೃಪ್ತಿಯಾಗಿದೆಯೆಂದು ಹೇಳಲಲ್ಲ. ಅದು ಬಹಳ ಸಂತೋಷದ ವಿಷಯ. ಇನ್ನು ಇವತ್ತು ಭೂಸುಧಾರಣೆ ಕಾನೂನು ಜಾರಿಗೆ ಬಂದಮೇಲೆ ಪಹಣಿ ಬರದಿರುವುದನ್ನು ಬದಲಾವಣೆ ಮಾಡಿದ್ದಾರೆ. ಎಲೇಜ್ ಅಕೌಂಟೆಂಟ್ ಮತ್ತು ಶ್ಯಾನುಭೋಗರು ಬರೆದಿರತಕ್ಕಂಥಾದ್ದು ಏನಿದೆಯೋ ಅದೇ ಇವತ್ತು ಆಧಾರಪತ್ರವಾಗಿದೆ. ಅಂಥಾದ್ದು ಏನಿದೆಯೋ ಅದನ್ನು ರೆವಿನ್ಯೂ ಮಿನಿಸ್ಟರ್ ತರಿಸಿ ಪಹಣಿ ಬರೆದಿರುವುದನ್ನ ಹೊಡೆದುಹಾಕಿ ಬೇರೆ ಬರೆದಿರುವುದು ಇದ್ದರೆ, ಅಥವಾ ಬದಲಾವಣೆ ಮಾಡಿದ್ದರೆ, ಅವರ ಮೇಲೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದರೆ ಆಗ ಅವರ ಎಫಿಷಿಯೆನ್ಸಿ ಹೊರಗೆ ಬೀಳುತ್ತದೆ. ವೀರಪ್ಪಗೌಡರು ಒಂದು ತಿದ್ದುಪಡಿಯನ್ನು ತಂದಿದ್ದಾರೆ, ಅದನ್ನು ಚರ್ಚೆಮಾಡಬೇಕು, ಈ ಎಕರೆ ಏನೋ ಬದಲಾವಣೆ ಮಾಡಿದ್ದಾರೆ, ಇದರಲ್ಲಿ ಹೀಗೆ ಮಾಡಿದ್ದಾರೆ, ಅದರಲ್ಲಿ ಹೀಗೆ ಮಾಡಿದ್ದಾರೆಂದು ರ್ಯಾಂಡ್ ರಿಫಾರಮ್ಸ್ ಬಗ್ಗೆ ಒಂದು ಪಬ್ಲಿಸಿಟಿ ತರುವ ನೆಸೆಸ್ಸಿಟಿಯೇ ಇರಲಿಲ್ಲ. ಇವತ್ತು ಎಷ್ಟು ಜನರು ಆ ರೀತಿ ಮಾಡಿದ್ದಾರೆನ್ನುವುದನ್ನು ರೆವಿನ್ಯೂ ಮಿನಿಸ್ಟರ್ ಒಂದು ವರದಿಯನ್ನು ತೆಗೆದುಕೊಂಡು ಬಂದು ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದರೆ ಸೋಷಿಯಲಿಜಂ ಎಂದು ಏನು ಹೇಳುತ್ತಾರೆ ಅದು ನರಿಹೋಗುತ್ತದೆ. ಭೂಸುಧಾರಣೆ ಮಾಡುವ ಕಾಲದಲ್ಲಿ ನನಗೆ 50 ಎಕರೆಗಳಷ್ಟು

(ಶ್ರೀ ಕೆ. ಎನ್. ವೀರಪ್ಪಗೌಡ)

ಜಮೀನು ಇದ್ದು ಉತ್ಪತ್ತಿ ಚೆನ್ನಾಗಿದ್ದರೆ ನೌಕರರಿಗೆ ಸಿಗುವಂತೆ 300-400 ರೂಪಾಯಿಗಳ ಸಂಬಳ ಸಿಗುವುದಿಲ್ಲ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ರೈತರು ನಿರಾಯಾಸ ರೀತಿಯಿಂದ ಜೀವನ ಮಾಡುವುದಕ್ಕೆ ಎಷ್ಟು ಲ್ಯಾಂಡ್ಸ್ ಬೇಕಾಗುತ್ತದೆಂಬುದನ್ನು ಸರ್ಕಾರದವರು ಸಿಗದು ಮಾಡಬೇಕು. ಎರಡನೆಯದಾಗಿ ಇನ್ನು ಒಂದೆರಡು ವರ್ಷಗಳೊಳಗೆ ಇವತ್ತಕ್ಕೆ ಭೂಮಿಯನ್ನು ಹಂಚುತ್ತೇವೆಂದು ಹೇಳುತ್ತಾರೆ. ಯಾರು ಸಾಗುವಳಿ ಮಾಡುತ್ತಾರೋ ಅಂತಹವರಿಗೆ ಜಮೀನನ್ನು ಒದಗಿಸುವುದು ನಿಮ್ಮ ಜವಾಬ್ದಾರಿ. ಒಂದುಕಡೆ ಪ್ರಾಪರ್ಟಿ ಹಂಚಬಾರದೆಂದು ಹೇಳುತ್ತೀರಿ. ಆದರೆ ಪ್ರಾಪರ್ಟಿ ಹಂಚುವ ಕಾರ್ಯಕ್ಕೆ ನೀವು ಕೈಹಾಕುತ್ತಾ ಇಲ್ಲ. ಅದನ್ನು ನನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೆ ಹಂಚಕೂಡದು ಎಂದು ಹೇಳುವಾಗ ಒಟ್ಟಿಗೆ ಕೂತು ಊಟ ಮಾಡಬಹುದೇ! ಅಂತಹ ಕಾನೂನಿಗೆ ಮನ್ನಣೆಯೂ ಇಲ್ಲ. ಎಷ್ಟೋ ಜನರು ಕೋರ್ಟಿಗೆ ಹೋಗಿ ಬಿದ್ದಾಡುತ್ತಾ ಇದ್ದಾರೆ. ನಮ್ಮ ಕಡೆ ಜಮೀನು ಮಾಲೀಕತನ ತಮ್ಮ ಹೆಸರಿನಲ್ಲಿದ್ದರೂ ಈ ಕಾನೂನು ಜಾರಿಗೆ ಬಂದಮೇಲೆ, ಯಾರೂ ಕೂಡ ತಾವೇ ಪಾಲಂಟರಿಯಾಗಿ ಭೂಮಿಯನ್ನು ಬಿಟ್ಟುಕೊಡುತ್ತಿಲ್ಲ. ಆದ್ದರಿಂದ ಇದಾಗಿದ್ದನ್ನು ನ್ಯಾಯವಾಗಿ ಮಾಡುವುದಕ್ಕೆ ಅವಕಾಶ ಇಲ್ಲದೆ ದೇಶದಲ್ಲಿ ಸೋಷಿಯಲಿಜಂ ಹೇಳಿಕೊಂಡು ಹೋಗುವ ಪದ್ಧತಿ ಜಾಸ್ತಿಯಾಗಿದೆ. ಇವತ್ತು ನೀವು ಸಾಮಾನ್ಯ ಜನಗಳಿಗೆ ಜೀವನಕ್ಕೆ 200 ರೂಪಾಯಿಗಳು ಮಿತಿ ಇರಬೇಕೆಂದು ಹೇಳಿ ಹೇ ಕಮಿಷನ್ ವರದಿಯನ್ನು ಜಾರಿಗೆ ಕೊಡಬೇಕೆಂದು ಹೇಳುತ್ತಾ ಇದ್ದೀರಿ. ರೈತರಿಗೆ ವರ್ಷಕ್ಕೆ ಎರಡು-ಮೂರು ಸಾವಿರ ರೂಪಾಯಿಗಳಷ್ಟು ಉತ್ಪನ್ನ ಬರುವಂಥ ಲ್ಯಾಂಡ್ಸ್ ಇರಬೇಕು. ಅವನು ಅದರಿಂದಲೇ ಜೀವನ ಮಾಡಿಕೊಳ್ಳಬೇಕು. ನಾನು ಅನೇಕ ವೇಳೆ ಹೇಳಿದ್ದೇನೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಐದಾರು ಸಾವಿರ ರೂಪಾಯಿಗಳಷ್ಟು ಮನೆ ಬಾಡಿಗೆ ಬರುತ್ತಿದ್ದರೂ ಸರ್ಕಾರದ ನೌಕರಿಯಲ್ಲದ್ದುಕೊಂಡು 2 ಸಾವಿರ ರೂಪಾಯಿಗಳಷ್ಟು ಸಂಬಳವನ್ನು ತೆಗೆದುಕೊಳ್ಳುತ್ತಿದ್ದರೂ, ಅಂತಹ ಕಡೆಯಲ್ಲಿ ಸುಧಾರಣೆ ಏನೂ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸಿಗೆ ರಿಜರ್‌ವೇಷನ್ ಇರಬೇಕೆಂಬ ಬಗ್ಗೆ ಎಲ್ಲಾದರೂ ಒಂದೆರಡು ಪ್ರಶ್ನೆಗಳು ಬಂದರೆ, ಅದರ ಮೇಲೆ ಮೆಮೊರಾಂಡಮ್ಸ್, ಇತ್ಯಾದಿಗಳನ್ನು ಹೇಳಿಕೊಂಡು ಯಾರೋ ಒಬ್ಬರಿಗೆ ಅನುಕೂಲ ಮಾಡಿಕೊಡುತ್ತಾರೆ. ಯಾರೋ ಒಬ್ಬ ಡಾಕ್ಟರ್ ಹೇಳುತ್ತಿದ್ದರು. ಯಾರೋ ಒಬ್ಬರು ವಿಧವೆಯರ ಹೆಸರನ್ನು ಕೊಟ್ಟು ಸೀಟು ತೆಗೆದುಕೊಂಡರು ಎಂದು. ಈ ರೀತಿ ಮಾಡುವುದನ್ನು ತಪ್ಪಿಸಲ್ಪಡುವುದಕ್ಕೆ ಸಾಧ್ಯವಿಲ್ಲ. ಎಫಿಷಿಯನ್ಸಿ ಎಂಬುದು ಬಹಳಮಟ್ಟಿಗೆ ಜಾಸ್ತಿಯಾಗಿದೆ ಎನ್ನುವ ಸ್ವಭಾವ ಇದೆಯೇ ವಿನಾ ರೈತರ ಜೀವನ ಎಷ್ಟು ಕಷ್ಟವಾಗಿದೆ, ಅವರಿಗೆ ಏನೇನು ಅನುಕೂಲಗಳನ್ನು ಮಾಡಿಕೊಡಬೇಕು ಎಂಬುದನ್ನು ಯೋಚಿಸುತ್ತಿಲ್ಲ. ನೀರು ಕೊಡದೆ ಇದ್ದರೂ ವಾಟರ್ ಸೆಸ್ ವಿಧಿಸುತ್ತಾರೆ. ಕಾನೂನಿನಲ್ಲಿ ಅಪೀಲು ಮಾಡುವುದಕ್ಕೆ ಅವಕಾಶವಿದೆ. ಆದರೆ ರೈತರು ಬಸ್ಸಿನಲ್ಲಿ ತಿರುಗಾಡಿ ಲಾಯರಿಗೆ ದುಡ್ಡು ಕೊಟ್ಟು ಎಷ್ಟೋ ತೊಂದರೆ ಪಡಬೇಕಾಗುತ್ತದೆ. ಆದರೆ ರೈತರು ಕೊಡುವ 12 ಆಣೆ ಸ್ಟ್ಯಾಂಪ್ ಡ್ಯೂಟಿಯನ್ನು ಪೂಜಾ ಮಾಡಿದ್ದೇವೆ ಎಂದು ಕ್ಯಾಬಿನೆಟ್‌ನಲ್ಲಿ ದೊಡ್ಡ ಡಿಸಿಷನ್ ತೆಗೆದುಕೊಂಡರೆ ಅದರಿಂದ ರೈತರಿಗೆ ಸಹಾಯ ಮಾಡಿದಂತಾಗುತ್ತದೆಯೆ! ಈ ರೀತಿ ಸರ್ಕಾರದವರು ನಟನೆ ಯಾತಕ್ಕೆ ಮಾಡಬೇಕು? ರೈತರಿಗೆ ಸಹಾಯ ಮಾಡಲು ಮನಸ್ಸು ಇದ್ದರೆ ಧೈರ್ಯವಾಗಿ ಕೆಲಸ ಮಾಡಬೇಕು. ಕೇಂದ್ರ ಸರಕಾರದವರು ಮುಖ್ಯ ಮಂತ್ರಿಗಳ ಒಂದು ವಿಷಯದಲ್ಲಿ 1970ನೇ ಇಸವಿಯೊಳಗೆ ಮಧ್ಯಸ್ಥಗಾರರನ್ನು ತೆಗೆದುಹಾಕುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಅರ್ಜೆಂಟ್ ಆಗಿ ರೈತರು ಕೊಡತಕ್ಕ ಫೀ ಏನಿದೆ ಅದನ್ನು ವಜಾ ಮಾಡಿದ್ದೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಹಾಗೆ ಷೋ ಮಾಡುವುದನ್ನು ಇನ್ನು ಮೇಲಾದರೂ ಕೂಡ ಕಡಿಮೆ ಮಾಡಬೇಕು. ಕೆಲಸದ ಮೇಲೆ ದೃಷ್ಟಿ ಇಡಿ. ಅಧಿಕಾರದಲ್ಲಿ ಉಳಿದುಕೊಳ್ಳುವುದಕ್ಕೆ ಆಸೆ ಇದ್ದರೆ ಕೆಲಸ ಮಾಡಿ.

ಶ್ರೀ ಎಂ. ರಾಮಪ್ಪ.—ಸೀಲಿಂಗ್ ಲಿಮಿಟ್ ಜಾಸ್ತಿ ಮಾಡಬೇಕು, 18 ಸ್ಟ್ಯಾಂಡರ್ಡ್ ಎಕರೆ ಸಾಲದು ಎಂದು ತಾವು ಹಿಂದೆ ಹೇಳುತ್ತಿದ್ದಿರಿ!

ಶ್ರೀ ಕೆ. ಎನ್. ವೀರಪ್ಪಗೌಡ.—ಎರಡು ಎಕರೆಗಿಂತ ಮೇಲೆ ಒಬ್ಬ ರೈತನಿಗೆ ಜಮೀನು ಕೊಡಬಾರದು ಎಂದು ಇದೆ, 18 ಎಕರೆ ಅಲ್ಲ, ನಾನು 18 ಎಕರೆ ಕೊಡಬೇಕೆಂದು ಹೇಳುವುದಿಲ್ಲ. ಬೇಕಾದರೆ 5-6 ಎಕರೆಗೆ ಲಿಮಿಟ್ ಹಾಕಿ. ರೈತನು ಸಾಕಷ್ಟು ಉತ್ಪತ್ತಿ ಮಾಡಿ ಸುಖವಾಗಿ ಜೀವನ ಮಾಡಿಕೊಂಡು ಹೋಗುವಂತೆ ಇರಬೇಕು. ಅವನು ಬೇರೆ ಕಡೆ ಕೆಲಸಕ್ಕೆ ಹೋಗುವ

ಅವಕಾಶ ಮಾಡಿಕೊಡಬಾರದು. ಈಗ ಜನರಲ್ಲಿರುವ ನಿರುದ್ಯೋಗವನ್ನು ಬಗೆಹರಿಸಬೇಕಾದರೆ ಈ ಕ್ರಮವನ್ನು ಅನುಸರಿಸಿ ಲಕ್ಷಾಂತರ ರೂಪಾಯಿ ಕಾಫೀ ತೋಟ ಇರುವವರಿಗೆ ಡೆಪ್ಯುಟಿ ಕಮಿಷನರ ಗಿರಿ ಕೊಡಬಾರದು.

ಶ್ರೀ ಎಂ. ರಾಮಪ್ಪ.—ತಾವು ಭೂಮಾಲೀಕರ ಸಮ್ಮೇಳನದಲ್ಲಿ ಈ ಮಾತು ಹೇಳುತ್ತೀರಾ ?

ಶ್ರೀ ಕೆ. ಎನ್. ವೀರಪ್ಪಗೌಡ.—ಪಾರ್ಟಿಯಲ್ಲಿ ಇದಕ್ಕಿಂತ ಹೆಚ್ಚಿಗೆ ಹೇಳುತ್ತಿದ್ದೆ. ನೀವೆಲ್ಲಾ ಕೈ ಎತ್ತುವ ಜನ ಇದ್ದೀರಿ.

ಶ್ರೀ ಹೆಚ್. ವಿ. ಕೌಜಲಗಿ (ಕಂದಾಯ ಶಾಖೆಯ ಮಂತ್ರಿಗಳು).—1961 ನೇ ಇಸವಿ ಮೈಸೂರು ರ್ಯಾಂಡ್ ರಿಫಾರಮ್ಸ್ ಕಾಯಿದೆ ಮಸೂದೆ ಮೇರೆ ಕೆಲವು ತಿದ್ದುಪಡಿಗಳನ್ನು ತಂದಿದ್ದು ಇದೆ. ಈ ತಿದ್ದುಪಡಿಗಳನ್ನು ಮೊದಲು ಒಂದು ಆರ್ಡಿನೆನ್ಸ್ ಮುಖಾಂತರ ತಂದು ಅದನ್ನು ಕಾಯಿದೆ ಮಾಡಬೇಕು ಎಂದು ಈ ಮಸೂದೆಯನ್ನು ವಾನ್ಯನಭೆಯ ಮುಂದೆ ಇಟ್ಟಿದೆ. ಇದರ ಉದ್ದೇಶ ಮಹತ್ವರವಾಗಿ ಏನಾದರೂ ಬದಲಾವಣೆ ಮಾಡಬೇಕು ಅಥವಾ ಈಗ ಇರತಕ್ಕ ಕಾಯಿದೆಯಲ್ಲಿ ಫಂಡಮೆಂಟಲ್ ತತ್ವಕ್ಕೆ ಬದಲಾವಣೆ ಮಾಡಬೇಕು ಎನ್ನುವುದು ಅಲ್ಲ. ಅಂತಹ ಉದ್ದೇಶದಿಂದ ಈ ಕಾಯಿದೆಯನ್ನು ತಂದಿಲ್ಲ. ಈಗ ಇದ್ದ ಕಾಯಿದೆಯ ಅಮಲ್‌ಬಜಾವಣೆಯಲ್ಲಿ ಕೆಲವು ಲೋಪದೋಷಗಳು ಇವೆ. ಯಾರು ಭೂಮಿಯನ್ನು ಸಾಗುಮಾಡುತ್ತಾರೋ ಅವರನ್ನು ಭೂಮಾಲೀಕರನ್ನಾಗಿ ಮಾಡುವ ಉದ್ದೇಶದಿಂದ ಈ ಕಾಯಿದೆಯನ್ನು ಅಮಲು ಮಾಡಲಕ್ಕೆ ಏನು ತೊಂದರೆಗಳು ಇವೆ ; ಆ ತೊಂದರೆಗಳನ್ನು ದೂರ ಮಾಡುವುದಕ್ಕೆ ಈ ಒಂದು ಸಣ್ಣ ಮಸೂದೆಯನ್ನು ತಂದಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಅನೇಕ ಮಾನ್ಯಸದಸ್ಯರು 2-3 ಜನ ಹೊಸದಾಗಿ ಈ ಕಾಯಿದೆಯ ತತ್ವದ ಮೇರೆ ತಮ್ಮ ತಮ್ಮ ಪಕ್ಷದ ಅಭಿಪ್ರಾಯ ಮತ್ತು ತಮ್ಮ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಹೇಳಿದ್ದಾರೆ. ಸಾಮಾನ್ಯವಾಗಿ ಮಾನ್ಯ ಗೋಪಾಲಗೌಡರು ತಮ್ಮ ಒಂದು ವೈಯಕ್ತಿಕ ಮಾತನ್ನು ಹೇಳಿದ್ದಾರೆ. ಅದರ ಪ್ರಕಾರ ಈಗ ಇದ್ದ ಭೂಸುಧಾರಣೆ ಕಾಯಿದೆ ಪ್ರಕಾರ ಹೋದರೆ ಬಡವರಿಗೆ, ಉಳುವವರಿಗೆ ಭೂಮಿ ಮುಟ್ಟುವುದಿಲ್ಲ. ಸೀಲಿಂಗ್ ಲಿಮಿಟ್ ಹೆಚ್ಚು ಇದೆ. ನಾವು ಕೊಡುವ ಕಿಮ್ಮತ್ತು ಹೆಚ್ಚು ಎಂದು ಅವರು ಹೇಳಿದ್ದಾರೆ. ಅದಕ್ಕೆ ತದ್ವಿರುದ್ಧವಾಗಿ ಶ್ರೀಮಾನ್ ಕಟ್ಟೀಮಣಿ ರವರು ಬೇರೆ ಅಭಿಪ್ರಾಯ ಹೇಳಿದ್ದಾರೆ. ಕೆಲವರು ಚಿಕ್ಕ ಹಿಡುವಳಿ ದೆಸೆಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಈಗ ಇರತಕ್ಕ ಸೀಲಿಂಗ್ ಬಹಳ ಹೆಚ್ಚಾಗಿರತ್ತದೆ ಇವರಿಂದ ಬಡಜನರಿಗೆ ಭೂಮಿ ಮುಟ್ಟುವುದಿಲ್ಲ ಇದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಅದು ಅಭಿಪ್ರಾಯದ ಮಾತು. ಭೂಸುಧಾರಣೆ ಕಾಯಿದೆ ಯಾವ ಯಾವ ಪ್ರಾಂತ್ಯಗಳಲ್ಲಿ ಇವೆ ಅಲ್ಲೆಲ್ಲಾ ಭಿನ್ನಭಿನ್ನವಾದ ಪದ್ಧತಿ ಇದೆ. ಆ ಭಾಗಗಳಿಗೆ ಅನುಸರಿಸಿ ಆ ಕಾಯಿದೆಗಳನ್ನು ತಂದಿವ್ಯಾರೆ. ನಾನು ಈಗ ತಿದ್ದುಪಡಿ ತರುವಂಥ ಮುಖ್ಯ ಉದ್ದೇಶ ಏನು ಎಂಬುದನ್ನು ಹೇಳಿದ್ದೇನೆ. ಈಗ ಇದ್ದ ಕಾಯಿದೆ ಪ್ರಕಾರ ಭೂಮಿಯನ್ನು ತೀವ್ರವಾಗಿ ಯಾರು ಸಾಗು ಮಾಡುತ್ತಾರೋ ಅವರಿಗೆ ಮಾಲೀಕತ್ವ ಕೊಡಬೇಕು ಎನ್ನುವುದೇ ಮುಖ್ಯ ಉದ್ದೇಶ.

ಶ್ರೀ ಕೆ. ಎಚ್. ರಂಗನಾಥ್.—ಸಿವಿಲ್ ಪ್ರೊಸೀಜರ್ ಕೋಡ್ ಅಪ್ಲೈ ಮಾಡಿದರೆ ಭೂಮಿಯನ್ನು ಶೀಘ್ರವಾಗಿ ಕೊಡುವುದಕ್ಕೆ ಸಾಧ್ಯ.

Sri H. V. KOUJALGI.—This amendment would help the disposal of the land as early as possible. I can explain it to you. ಈ ಭೂಮಿ ತೀವ್ರವಾಗಿ ಸಾಗು ಮಾಡುವವರಿಗೆ ಮುಟ್ಟಬೇಕು ಎನ್ನುವ ಉದ್ದೇಶವನ್ನು ಎಲ್ಲಾ ಪಕ್ಷದವರೂ ಹೊಂದಿದ್ದಾರೆ. ಆದರೆ ಸರಕಾರದ ಉದ್ದೇಶ ಏನು ಎಂದು ನಾನು ಹೇಳುತ್ತೇನೆ. ಅದೇ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾಗಿದೆ. ಮಾನ್ಯ ಸಿದ್ಧವೀರಪ್ಪನವರು ಹೇಳಿದರು ಎಕರೆ ಗುಂಟೆ ತೆಗೆದು ಹೆಕ್ಟರ್ ಎಂದು ಮಾಡುವ ಅವಶ್ಯಕತೆ ಇದ್ದಿದ್ದಿಲ್ಲ, ಇದರಿಂದ ಜನರಿಗೆ ತೊಂದರೆ ಆಗುತ್ತಿದೆ ಎಂದು. ಇದು ವ್ಯಾವಹಾರಿಕ ದೃಷ್ಟಿಯಿಂದ ಸಮಂಜಸ ಇರಬಹುದು. ಏಕೆಂದರೆ ನಮ್ಮಲ್ಲಿ ಎಕರೆ ಗುಂಟೆ ರೂಢಿಯೊಳಗೆ ಇದೆ. ಹೆಕ್ಟರ್ ಮಗ್ಯೆರೆ ಹೊಸದಾಗಿ ಕಲಿಯಬೇಕಾದರೆ ಸಾಮಾನ್ಯ ಜನರಿಗೆ ಆಗಲಿ ಅಥವಾ ನಮ್ಮಂಥವರಿಗಾಗಲೀ ಸ್ವಲ್ಪ ದಿವಸ ತೊಂದರೆ ಆಗಬಹುದು. ಕೇಂದ್ರಸರಕಾರದವರು ಇಡೀ ದೇಶದಲ್ಲಿ ಒಂದು ಪದ್ಧತಿ ಇರಬೇಕು ಎಂದು ನಿರ್ಣಯ ಮಾಡಿದ್ದಾರೆ. ನಾವು ಇಂತಹ ಕಾಯಿದೆ ಮಾಡುವ ಕಾಲಕ್ಕೆ ಕಾಯಿದೆ ಒಳಗೆ ಇದನ್ನು ಹಾಕುವುದು ಅವಶ್ಯ ಎಂದು ನನಗನಿಸುತ್ತದೆ. ಇದು ಒಂದೇ ಅಲ್ಲ. ಇದರ ಪೂರ್ವದಲ್ಲೆಲ್ಲ ಅರ್ಧರೂಪಾಯಿ, ಪಾವಲ, ಗಟ್ಟಿ ದುಡ್ಡು ಎಂದು ಇತ್ತು. ಈಗ ಇದು ಎಲ್ಲಾ ಹೋಗಿ ರೂಪಾಯಿ, ಪೈಸೆ ಬಂದಿದೆ. ಮೈಲಿ ಹೋಗಿ ಕಿಲೋಮೀಟರ್ ಬಂದಿದೆ. ಯಾರ್ಡ್, ಇಂಚ್ ಹೋಗಿ

(SRI H. V. KOUJALAGI)

ಮೀಟರ್ ಬಂದಿದೆ. ಇದೆರ್ನಾ ಕೇವಲ 10 ವರ್ಷಗಳಲ್ಲಿ ಆದ ಮಾರ್ಪಾಡುಗಳು. ಜನರಿಗೆ ಇದು ಗೊತ್ತಾಗುತ್ತಾ ಕ್ರಮೇಣ ಇರುವ ತೊಂದರೆ ಹೋಗುತ್ತಾ ಇದೆ. ಇದೇರೀತಿ ಎಕರೆ ಗುಂಟೆ ಹೋಗಿ ಹೆಕ್ಟರ್ ಬರುತ್ತದೆ. ಇನ್ನು 8-10 ವರ್ಷಗಳೊಳಗೆ ಈ ರೀತಿ ಅಭ್ಯಾಸಗಳು ಮಾಯವಾಗುತ್ತದೆ. ಆದ್ದರಿಂದ ಆ ಕಾಯಿದೆ ಅನುಸಾರವಾಗಿ ಸಾಮಾನ್ಯವಾಗಿ ಮಾಡಿದ್ದು ಆಗಿದೆ. ಮಂಗಳೂರು ಜಿಲ್ಲೆಯಲ್ಲಿ ಎಕರೆ ಮತ್ತು ಸೆಂಟ್ಸ್ ಅಂತ ಹೇಳುತ್ತಾರೆ, ಇಲ್ಲಿ ಎಕರೆ ಮತ್ತು ಗುಂಟೆ ಅಂತ ಅನ್ನುತ್ತಾರೆ. ಸೆಂಟ್ರಲ್ ಗವರ್ನಮೆಂಟ್ ಅವರ ಆದೇಶದಂತೆ ಇಡೀನೇಶಕ್ಕೆ ಸಂಬಂಧಿಸಿದಂತೆ ಒಂದು ಅಳತೆಯನ್ನು ಇಡುವುದು ಅವಶ್ಯಕ. ಇದು ಮಹತ್ವದ ಬದಲಾವಣೆ ಅಲ್ಲದಿದ್ದರೂ ಕಾಯಿದೆಗೆ ಅವಶ್ಯಕವಾದಂತಹ ಒಂದು ಬದಲಾವಣೆ. ಶ್ರೀಮಾನ್ ಶ್ರೀಕಂಠಯ್ಯನವರು ಅನೇಕ ಕಲಂಗಳ ಬಗ್ಗೆ ಬಹಳ ಸೊಗಸಾಗಿ ಹೇಳಿದ್ದಾರೆ. ಈ ತಿದ್ದುಪಡಿಯಲ್ಲಿ ಚೆನೆಂಟ್ ಮತ್ತು ಡೀಮ್ಡ್ ಚೆನೆಂಟ್ ಅಂತ ಅನ್ನುವುದನ್ನು ಸ್ಪಷ್ಟವಾಗಿ ಹೇಳಿದೆ. ಹೈಕೋರ್ಟಿನವರು ಕೊಟ್ಟ ಆದೇಶದ ಪ್ರಕಾರ ಇವತ್ತಿನ ದಿವಸ ತಿದ್ದುಪಡಿಯನ್ನು ಮಾಡಿದ್ದೇವೆ. ನ್ಯಾಯಾಂಗದಲ್ಲಿ ಸಾವಿರಾರು ಅರ್ಜಿಗಳು ಬರುತ್ತವೆ. ಒಂದು ನಿರ್ಣಯ ತೆಗೆದುಕೊಳ್ಳಲಿಕ್ಕೆ ಒಂದು ಕೋರ್ಟಿಗೆ ಹೋಗಬೇಕು ಮತ್ತು ಅದಕ್ಕೇ ಸಂಬಂಧಿಸಿದ ಇನ್ನೊಂದು ಇಷ್ಯೂ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಬೇರೆ ಇನ್ನೊಂದು ಕೋರ್ಟಿಗೆ ಹೋಗಬೇಕು ಅಂದರೆ ಬಹಳ ನಿಧಾನವಾಗುತ್ತದೆ ಎಂದು ಹೇಳಿ ಅವು ತೀವ್ರ ಏರ್ಪಡಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ಮಾಡಲಾಗಿದೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಒಂದೊಂದು ಜಿಲ್ಲೆಯಲ್ಲಿ ನಾಲ್ಕಾರು ಮುನ್ಸೀಫ್ ಕೋರ್ಟು ಇರುವುದರಿಂದ ಅವರಿಗೆ ಅಧಿಕಾರ ಕೊಡುವುದರಿಂದ ಜಾಗ್ರತೆ ಏರ್ಪಡಲ್ಲದೆ, ಖರ್ಚೂ ಕೂಡ ಕಡಿಮೆ ಬರುತ್ತದೆ ಮತ್ತು ಸಿವಿಲ್ ವರ್ಕ್ ಸಂಗತಿಯೇ ಇದನ್ನೂ ಮಾಡಬಹುದು. ಈ ಪ್ರಕಾರ ಇದರ ಉದ್ದೇಶ ಇದೆಯೇ ಹೊರತು ಬೇರೆ ಅಲ್ಲ. ಇದನ್ನೆಲ್ಲಾ ತೀವ್ರ ಅಮಲನಲ್ಲಿ ತರಬೇಕೆಂದು ಹೇಳುತ್ತೇವೆ. ಒಂದುವೇಳೆ ಇವತ್ತಿನದಿವಸ ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಹೆಚ್ಚು ಅರ್ಜಿಗಳು ಇದ್ದರೆ ಚೆಂಪೊರೆರಿ ತಹಸೀಲ್ದಾರರನ್ನು ಹಾಕಬಹುದು ಮತ್ತು ಆ ಕೆಲಸವನ್ನು ಮುಗಿಸಬೇಕು ಎಂಬ ಉದ್ದೇಶದಿಂದ ಕೂಡ ಇದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಆ ತರಹ ಭರವಸೆ ಕೊಡುವುದಾದರೆ ತೃಪ್ತಿಯಾಗುತ್ತದೆ.

Sri H. V. KOUJALGI.—That is the intention of Government. But it is not possible to increase the number of Judges for a temporary period. We cannot do it.

ಕೋರ್ಟ್ ಎಂದರೆ ಯಾರು ಇದರ ಡೆಫಿನಿಷನ್ ಏನು ಎಂಬ ಮಾತನ್ನು ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ್ದಾರೆ. 112-116 ಕೋರ್ಟಿನ ಡೆಫಿನಿಷನ್‌ನೊಳಗೆ ಕಾಯಿದೆಯ ದೋಷ ಇವೆ ಎಂಬ ಶಂಕೆ ವ್ಯಕ್ತಪಡಿಸಿದ್ದರಿಂದ ಇದನ್ನು ಡ್ರಾಫ್ಟ್ ಮಾಡುವ ಕಾಲಕ್ಕೆ ಮುಂಚಿತವಾಗಿಯೇ ಹೈಕೋರ್ಟಿಗೆ ತೋರಿಸಿ ಅವರ ಅಭಿಪ್ರಾಯವನ್ನು ಪಡೆದುಕೊಂಡಿದ್ದೇವೆ. ಅವರ ಅಭಿಪ್ರಾಯದ ಪ್ರಕಾರ ಮತ್ತು ಲಾ ಡಿಪಾರ್ಟ್‌ಮೆಂಟಿನ ಅಭಿಪ್ರಾಯದ ಪ್ರಕಾರ ಈಗ ಇದ್ದದ್ದೇ ಸರಿಯಾಗಿದೆ, ಇದರಲ್ಲಿ ಯಾವುದೇ ಲೋಪದೋಷ ಇಲ್ಲ ಎಂಬ ಮಾತನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರ ಶಂಕೆ ಏನಿದೆ ಅದು ಇದರಿಂದ ದೂರವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

Sri K. H. PATIL—By taking the opinion of the High Court beforehand, are you estopping the High Court from interfering by giving its interpretation of the law subsequently ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನೂ ಇಲ್ಲ, ನಮ್ಮ ಪ್ರಾಂಕ್ಯದಲ್ಲಿ ಈ ಕಾಯಿದೆ ಅಮಲು ಬಜಾವಣೆ ಮಾಡುವಂತಹ ಅಧಿಕಾರ ಮತ್ತು ಪ್ರೊಸೀಜರಲ್ ಮ್ಯಾಟರ್ ಏನು ಇವೆ, ಆ ಸಂಬಂಧ ಅವರನ್ನು ಕನ್‌ಸಲ್ಟ್ ಮಾಡಿದ್ದೇವೆ.

7-00 P.M.

ಇನ್ನು ಸೆಕ್ಷನ್ 42ಕ್ಕೆ ತಿದ್ದುಪಡಿ ಅನಾವಶ್ಯಕವಾಗಿದೆ ಎಂದು ಹೇಳಿದರು. ಆರ್ಡಿನೆನ್ಸ್‌ನಲ್ಲಿ ಇದು ಅಂತ ಕೈಬಿಟ್ಟು ಹೋಗಿತ್ತು ಎಂದು ಶ್ರೀ ನಾಗಪ್ಪನವರು ಹೇಳಿದರು. ಅದು ಅವಶ್ಯಕ

ಎಂದು ಕಂಡು ಬಂದುದರಿಂದ ಅದನ್ನು ಸೇರಿಸಿದೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಕೆಲವು ಸಾಮಾನ್ಯ ಸೂಚನೆಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ. ಅಮಲ ಬಜಾವಣೆ ಮಾಡುವುದರಲ್ಲಿ ರೈತರಿಗೆ ತೊಂದರೆಯಾಗುತ್ತದೆ, ರಿಕಾರ್ಡ್ ಆಫ್ ರೈಟ್ಸ್ ಸರಿಯಾಗಿಲ್ಲ ಎಂದು ಶಂಕೆ ವ್ಯಕ್ತ ಮಾಡಿದ್ದರು. ಹೊಸದಾಗಿ ರೆವೆನ್ಯೂ ಆಫೀಸರ್ಸ್‌ರನ್ನು ನೇಮಿಸಿ ರಿಕಾರ್ಡ್ ಆಫ್ ರೈಟ್ಸ್ ಬರೆಸಲಾಗುತ್ತಿದೆ. ರೈತರಿಗೆ ನೋಟೀಸ್ ಕಳಿಸಿ, ತಕರಾರು ಇದ್ದರೆ ಕೇಳಿಕೊಂಡು ಸರಿಯಾಗಿ ರಿಕಾರ್ಡ್ ಆಫ್ ರೈಟನ್ನು ತಯಾರು ಮಾಡಲು ಬರುತ್ತದೆ. 1961ನೇ ಕಾಯಿದೆ ಪ್ರಕಾರ ಟೆನೆಂಟ್ಸ್‌ಗಳನ್ನು ಬಿಡಿಸಲು ಅವಕಾಶ ಮಾಡಿಕೊಟ್ಟಿದೆ. ಒಂದು ವೇಳೆ ತಪ್ಪು ಮಾಡಿದ್ದಾರೆ ಎಂದು ಕಂಡು ಬಂದರೆ ಅಪೀಲ್ ಮಾಡಲು ಸಾಧ್ಯವಿದೆ. ಈ ಬಗ್ಗೆ ಸರಕಾರದವರು ಹೆಚ್ಚು ಲಕ್ಷ್ಯ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ.

Sri D. B. KALMANKAR.—For years together the names of the tenants are not written.

Sri H. V. KOUJALGI.—In some parts they are up to date. In some parts they are being correctly written up. ಶ್ರೀಮಾನ್ ಶ್ರೀಕಂಠಯ್ಯನವರು ಮಾತನಾಡುತ್ತಾ 116 ಕಲಮು ಪ್ರಸ್ತಾಪ ಮಾಡಿದರು.

Sri L. SRIKANTAIAH.—There is some mistake in Section 116 of the Act.

Sri H. V. KOUJALGI.—I also consulted about it. There is no mistake in it. ಮಾನ್ಯ ಸದಸ್ಯರು ಅನೇಕ ಸೂಚನೆಗಳನ್ನು ಮಾಡಿದ್ದಾರೆ. ಈಗ ಇರತಕ್ಕ ಕಾಯಿದೆ ಹೆಚ್ಚು ತೀವ್ರವಾಗಿ ಸ್ವಲ್ಪ ಅವಧಿಯಲ್ಲಿ ಅಮಲ ಬಜಾವಣೆ ಮಾಡಿ ಉಳುವವನಿಗೆ ಭೂಮಿಯ ಸ್ವಾಮಿತ್ವ ಕೊಡಿಸಬೇಕೆಂದು ಸರಕಾರ ಪ್ರಯತ್ನ ಮಾಡುತ್ತಿದೆ. ಇದಕ್ಕೆ ನಿರ್ದಿಷ್ಟ ಅವಧಿ ಗೊತ್ತುಮಾಡಲು ಆಗುವುದಿಲ್ಲ. ಯಾವ ರಾಜ್ಯದಲ್ಲೂ ಆ ರೀತಿ ಮಾಡಲು ಸಾಧ್ಯವಾಗಿಲ್ಲ. ಮಹಾರಾಷ್ಟ್ರ ರಾಜ್ಯವನ್ನೇ ತೆಗೆದುಕೊಂಡು ನೋಡಿದರೆ 1937ನೇ ಇಸವಿಯಲ್ಲಿ ಕಾನೂನು ಜಾರಿಗೆ ಬಂದಿದ್ದರೂ ಕೂಡ ಅನೇಕ ಸಲ ಅದಕ್ಕೆ ತಿದ್ದುಪಡಿ ಮಾಡಿದ್ದಾರೆ. ಟೆನೆಂಟ್ಸ್ ಡೇ ಆಚರಣೆ ಮಾಡಿದರೂ ಕೂಡ ಭೂಮಿಯ ಸ್ವಾಮಿತ್ವ ಈ ಒಂದು ದಿನದಿಂದ ಬಂದಿದೆ ಎಂದು ಮಾಡಲು ಆಗಿಲ್ಲ.

Sri V. N. PATIL.—Take for instance Kerala. Why do you take only Maharashtra ?

ಶ್ರೀ ಎಚ್. ವಿ. ಕೌಜಲಗಿ.—ಭೂಮಾಲೀಕನಿಗೆ ಭೂಮಿಯ ಕ್ರಯ ಕೊಡಿಸಬೇಕು ಎಂದು ಮಾಡಿದ್ದೇವೆ. ಈ ರೀತಿ ಮಾಡಿದರೆ ಭೂಮಿಯ ಸ್ವಾಮಿತ್ವ ತೀವ್ರವಾಗಿ ಉಳುವವನಿಗೆ ಸಿಕ್ಕುತ್ತದೆ. ಇಪ್ಪು ಹಣ ಪಡೆಯಲು ರಾಷ್ಟ್ರೀಕೃತ ಬ್ಯಾಂಕಗಳನ್ನು ಅವಲಂಬಿಸಿದ್ದೇವೆ ಎಂದು ಹೇಳಿದರು.

Sri D. B. KALMANKAR.—Do you mean to say there is no uniformity in Maharashtra ? I definitely say there is uniformity.

Sri L. SRIKANTAIAH.—You please read the statement of objects and reasons on page 12. It reads like this :

> "The Bill is intended primarily to expedite the disposal of the accumulation of resumption applications, rent applications and other miscellaneous applications under the Land Reforms Act with the Special Tribunals appointed for the purposes, by enabling all the Munsiff Courts to function as Land Tribunals, and by separating the Judicial from executive functions and transferring the latter to the Tahsildars... .."

Is the Munsiff competent to do so under Section 116 read with Section 42 ?

Sri H. V. KOUJALGI.—This is not so. On the other hand each Munsiff will receive rent applications and all such other applications and dispose of. Surplus executive functions have been transferred to the Tahasildar. He is the executive authority.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಂಟ್ ಸೂಟ್ಸ್ ತೀರ್ಮಾನ ಮಾಡಲು ಬಹಳ ತಡವಾಗುತ್ತಿದೆ ಎಂದು ಹೇಳಿದರು. ಇದಕ್ಕೆ ಕಾರಣ ಏನೆಂದರೆ ರೂರ್ಸ್ ಪ್ರಕಾರ ನೋಟಿಫಿಕೇಶನ್ ಹೊರಡಿಸ ಬೇಕಾಗುತ್ತದೆ. ನೋಟೀಸ್ ಕೊಟ್ಟದ್ದು ಸರಿಯಿಲ್ಲ ಎಂದು ಹೈಕೋರ್ಟಿನಲ್ಲಿ ರಿಟ್ ಹಾಕಿದರು. ಆ ಅಡಚಣೆ ದೂರವಾಗಬೇಕು ಎಂದು ನೋಟಿಫಿಕೇಷನ್ನಿನಲ್ಲಿ ರಿವಿಜನ್ ಅಧಿಕಾರ ಇಟ್ಟಿದೆ.

Mr. DEPUTY SPEAKER.—The question is :

"That the Mysore Land Reforms (Amendment) Bill, 1970 be taken into consideration."

The motion was adopted.

SECTION 2

Mr. DEPUTY SPEAKER.—The question is :

"That Clause 2 do stand part of the Bill."

There is an amendment to clause 2, by Sriyuths M. Nagappa, D. B. Kalmankar and V. N. Patil, Sri Nagappa may move that.

Sri M. NAGAPPA.—I beg to move :

"That at page 2 in the proposed sub-section (1) for the words and figures '80.94 standard acres' the words and figures '40.47 standard acres' shall be substituted.

"That page 2 in the proposed sub-section (ii) in line 2 for the words and figures '7 standard Hectares and 28.43 standard acres' the words and figures '3 standard hectares and 50 standard acres' shall be substituted.

"And that at page 2 in the proposed sub-section (iv) for the words and figures '2 standard hectares and 42.82 standard acres' the words and figures 'one standard hectare and 21.40 standard acres' shall be substituted."

Mr. DEPUTY SPEAKER,—Amendments moved :

"That at page 2 in the proposed sub-section (1) for the words and figures '80.94 standard acres' the words and figures '40.47 standard acres' shall be substituted.

"That at page 2 in the proposed sub-section (ii) in line 2 for the words and figures '7 standard hectares and 28.43 standard acres' the words and figures '3 standard hectares and 50 standard acres' shall be substituted.

"And that page 2 to in the proposed sub-section (iv) for the words and figures '2 standard hectares and 42.82 standard acres' the words and figures 'one standard hectare and 21.40 standard acres' shall be substituted."

Mr. DEPUTY SPEAKER.—There is also an amendment by hon. Minister for Revenue,

Sri H. V. KOUJALGI.—Sir, there seems to be some confusion in the amendment. I request that I may be permitted to move the same tomorrow after verification.

Sri H. SIDDAVEERAPPA.—Sir, since there is some confusion in the wordings of the amendment, the Hon. Minister may move his amendment tomorrow and the House may be adjourned now.

Mr. DEPUTY SPEAKER.—All right. The House now stands adjourned to meet again at 1-00 P.M. tomorrow.

The House adjourned at Fifteen Minutes past Seven of the Clock to meet again at One of the Clock on Tuesday, the 3rd February 1970.

WD 14642—GPB—520—24-7-1970